ಆಯ್ದ ಕುಸುಮಗಳು

ಸಂಪಾದಕ:

ಡಿ. ಪುಟ್ಟಸ್ವಾಮಿ, ಬಿ. ಎ., ಬಿ. ಎಲ್.

ವೇಕಾಭ್ಯುದಯ ಕಾರ್ಯಾಲಯ

ಮಂಗಳೂರು-3, ದ. ಕನ್ನಡ

ಆಯ್ದ ಕುಸುಮುಗಳು

[ವಿವೇಕಾಭ್ಯುದಯದ ಇಪ್ಪತ್ತು ಮಂಡಲ (ಸಂಪುಟ)ಗಳಿಂದ ಆರಿಸಿದ
ಇಪ್ಪತ್ತು ಧಾರ್ಮಿಕ ಲೇಖಗಳ ಸಂಗ್ರಹ]

ಸಂಪಾದಕ:
ಡಿ. ಪುಟ್ಟಸ್ವಾಮಿ, ಬಿ. ಎ., ಬಿ. ಎಲ್.

ವಿವೇಕಾಭ್ಯುದಯ ಕಾರ್ಯಾಲಯ,
ವೀರಭವನ, ಮಂಗಳೂರು-3.

1953

ಬೆಲೆ: 1—8—0

Printed at
The Saraswathi Printing Works, Ltd., Mangalor

ವಿಷಯಾನುಕ್ರಮಣಿಕೆ

ವಿನಮ್ರ ವಿನಂತಿ

ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಒಂದು ಪತ್ರಿಕೆಯನ್ನು ೨೦ ವರ್ಷ ಬೆಳೆಯಿಸಿಕೊಂಡು ಬರುವುದೆಂಬುದು ಸಾಮಾನ್ಯ ಸಂಗತಿಯಲ್ಲ ಎಂದು ಪತ್ರಿಕಾವ್ಯವಸಾಯದ ಒಳಹೊರಗುಗಳನ್ನು ಬಲ್ಲವರಿಗೇ ತಿಳಿಯುವ ವಿಚಾರವಾಗಿದೆ. ಅದರಲ್ಲೂ ಒಂದು ಧಾರ್ಮಿಕ ವಿಚಾರದ ಪತ್ರಿಕೆಯನ್ನು ಮುನ್ನಡಿಸಿಕೊಂಡು ಬರುವುದೆಂಬುದು ಮತ್ತಷ್ಟು ಕಠಿಣವೇ ಸರಿ! ಆದರೂ ಈ ೨೦ ವರ್ಷಗಳಲ್ಲಿ ವಿವೇಕಾಭ್ಯುದಯವು ಮುನ್ನಡೆದುಕೊಂಡು ಬಂದುದು ಅದನ್ನು ಸ್ಥಾಪಿಸಿದವರಿಂದ ಹಿಡಿದು, ಓದುವ ನಾಗರಿಕರ ವರೆಗೆ ಎಲ್ಲರಿಗೂ ಆನಂದದ ಸಂಗತಿಯಾಗಿದೆ. ಈ ಸಂತೋಷದ ನೆನಪಿಗಾಗಿ ನಮ್ಮ ವಾಚಕ-ಸಹಾಯಕ ವೃಂದಕ್ಕೊಂದು ಕಾಣಿಕೆಯನ್ನೊಪ್ಪಿಸುವುದಕ್ಕಾಗಿ, ೨೦ ಮಂಡಲಗಳಿಂದ ೨೦ ಲೇಖನಗಳನ್ನಾಯ್ದು ಪ್ರಕಟಿಸುವ ಸಂಕಲ್ಪಮಾಡಿದೆವು. ಆ ಸಂಕಲ್ಪದ ಫಲವೇ **ಈ ಆಯ್ದ ಕುಸುಮಗಳು.**

೨೦ ವರ್ಷಗಳಲ್ಲಿನ ನೂರಾರು ಲೇಖನಗಳಿಂದ ಬರೇ ೨೦ ಲೇಖನಗಳನ್ನಾರಿಸುವಾಗ ಒಂದೊಂದು ವರ್ಷದ ಒಂದೊಂದು ಮಂಡಲದಿಂದ, ಒಂದೊಂದು ಲೇಖನವನ್ನಾರಿಸುವುದೆಂದು ಮಾಡಿದ ನಮ್ಮ ನಿರ್ಣಯದಿಂದಾಗಿ ಲೇಖನಗಳನ್ನಾರಿಸುವುದು ಸ್ವಲ್ಪ ಕಷ್ಟವಾದರೂ, ಜಿನಧರ್ಮಾನುಯಾಯಿಗಳಿಗೂ ಸಾಮಾನ್ಯ ಕನ್ನಡಿಗರಿಗೂ ಪ್ರಯೋಜನವಾಗುವಂತೆ, ಜೈನಧರ್ಮದ ಕೈಪಿಡಿಯೇ ಆಗುವಂತೆ, ಲೇಖನಗಳನ್ನಾಯ್ದಿರುತ್ತೇವೆ. ಶ್ರಾವಕರ ಮತ್ತು ಮುನಿಗಳ ಆಚಾರವಿಚಾರಗಳು, ಗೃಹಸ್ಥರ ನೈಮಿತ್ತಿಕಾಚರಣೆಗೆ ಬೇಕಾದ ಶಾಂತಿಹೋಮ, ಜಿನಪೂಜೆ, ತೀರ್ಥಯಾತ್ರೆ, ಸಾಹಿತ್ಯೋದ್ಧಾರ, ಇತ್ಯಾದಿ ವಿಚಾರಗಳೂ, ಜಿಜ್ಞಾಸುಗಳಾದವರಿಗಾಗಿ ಧರ್ಮಸ್ವರೂಪ ಧರ್ಮಪ್ರಭಾವಾದಿ ವಿಚಾರಗಳೂ,

ಸಾರ್ವಜನಿಕ ಧರ್ಮ, ಧರ್ಮಫಲ, ಜೈನಧರ್ಮದ ವೈಶಾಲ್ಯ ವಿಚಾರಾದಿಗಳೂ ಇರುವಂತೆ ಲೇಖನಗಳನ್ನಾಯ್ದಿರುತ್ತೇವೆ. ಈ ದೃಷ್ಟಿಯಲ್ಲಿ ಈ ನಮ್ಮ ಆಯ್ದ ಕುಸುಮವು ಎಲ್ಲರಿಗೂ ಜೈನಧರ್ಮದ ಪರಿಚಯ ಮಾಡಿಕೊಡುವ ಕೈಪಿಡಿಯಾಗುವುದೆಂದು ನಂಬಿದ್ದೇವೆ.

ವಿವೇಕಾಭ್ಯುದಯವು ೧೯೩೩ರಲ್ಲಿ ಜನ್ಮ ತಾಳಿತು. ದಿ। ಎ. ಶಾಂತಿರಾಜ ಶಾಸ್ತ್ರಿಗಳು ಅದನ್ನು ಪ್ರಾರಂಭಿಸಿ ೮ ವರ್ಷಗಳ ವರೆಗೆ ಮುನ್ನಡೆಸಿಕೊಂಡು ಬಂದರು. ಅನಂತರ ಈ ೧೨ ವರ್ಷ ಅದರ ಸಂಪಾದಕತ್ವವನ್ನು ವಹಿಸಿ ಪತ್ರಿಕೆಯನ್ನು ಮುನ್ನಡೆಸಿಕೊಂಡು ಬರುವ ಜವಾಬ್ದಾರಿಯು ನಮ್ಮದಾಯಿತು. ಸಾಹಿತ್ಯದ ಸೇವೆಯನ್ನು ಧಾರ್ಮಿಕ ವಿಚಾರಗಳ ಮೂಲಕ ಮಾಡಬೇಕೆಂಬ ಬಯಕೆಯೇ ನಮ್ಮ ಈ ಕ್ಷೇತ್ರಕ್ಕೆಳೆಯಿತು. ಆ ದೃಷ್ಟಿಯಿಂದ, ಧರ್ಮಶ್ರದ್ಧೆಯಿಂದ, ಸಮಾಜಕ್ಕೊಂದಿಷ್ಟು ಸೇವೆ ಸಲ್ಲಿಸಬೇಕೆಂಬಾಸೆಯಿಂದ ಈ ೧೨ ವರ್ಷಗಳಲ್ಲಿ ನಮ್ಮ ಕರ್ತವ್ಯಮಾಡಿರುತ್ತೇವೆ. ಹೀಗೆನ್ನುವಾಗ ನಮ್ಮ ಸಹಾಯಕರ ಪೋಷಕರ ಸಹಕಾರವನ್ನು ನಾವು ವಿನಯದಿಂದ ನೆನೆಯಬೇಕಾಗಿದೆ. ಅವರ ಧರ್ಮಾಭಿಮಾನ ಸಾಹಿತ್ಯಾಭಿಮಾನಿಗಳೇ ನಮ್ಮಿಂದ ಈ ಸೇವೆಯನ್ನು ಮಾಡಿಸಿಕೊಂಡುವು; ಮುಂದೆಯೂ ಮಾಡಿಸಿಕೊಳ್ಳುವುವು. ಅದಕ್ಕಾಗಿ ಅವರನ್ನೆಲ್ಲ ಅಭಿನಂದಿಸುತ್ತೇವೆ.

೨೦ ವರ್ಷ ಕಳೆದ ಮೇಲೆ ೨೫ನೇ ವರ್ಷದಲ್ಲಿ ರಜತೋತ್ಸವವಾಗಿ ಮುಂದೆ ಸುವರ್ಣೋತ್ಸವವಾಗಿ ಕನ್ನಡ ಪತ್ರಿಕಾಪ್ರಪಂಚದಲ್ಲಿ ಬಾಳಿ ಬದುಕುವ ಸುಯೋಗವು ವಿವೇಕಾಭ್ಯುದಯನಿಗಾಗಲಿ ಎಂದು ಹಾರೈಸುತ್ತೇವೆ. ಈ ನಮ್ಮ ಪ್ರಾರ್ಥನೆಯನ್ನು ಜಗತ್ತಿಗೆಲ್ಲ ಮಂಗಲವನ್ನುಂಟು ಮಾಡುವ ಶ್ರೀ ಜಿನೇಶ್ವರನು ಹರಸಿ, ಪೂರೈಸಿಕೊಡುವಂತಾಗಲಿ; ಅದಕ್ಕೆ ನಮ್ಮ ಗುರುಜನರ ಆಶೀರ್ವಾದವೊದಗಿ ಬರಲಿ.

ಈ ಸಂದರ್ಭದಲ್ಲಿ ವಿವೇಕಾಭ್ಯುದಯದ ಸಂಸ್ಥಾಪಕರನ್ನು ಸ್ಮರಿಸಿ ಈ ೨೦ ವರ್ಷಗಳಲ್ಲಿ ಲೇಖನಾದಿಗಳ ಸಹಾಯನೀಡಿದ ಸಾಹಿತ್ಯಬಂಧುಗಳಿಗೂ ಅಚ್ಚುಕೂಟದವರಿಗೂ ಅದೇ ರೀತಿಯಲ್ಲಿ ಧರ್ಮಾಭಿಮಾನಿ ಬಂಧುಗಳಿಗೂ ನಮ್ಮ ಹಾರ್ದಿಕ ವಂದನೆಯನ್ನರ್ಪಿಸಿ ಈ ಆಯ್ದ ಕುಸುಮವನ್ನವರ ಕರಕಮಲದಲ್ಲಿಡುತ್ತೇವೆ.

—ಸಂಪಾದಕ.

ಅರ್ಪಣೆ

ಸ್ವಸ್ತಿ ಶ್ರೀ ೧೦೫ ಕ್ಷುಲ್ಲಕ ಅರ್ಕಕೀರ್ತಿ ಮಹಾರಾಜರಿಗೆ
ಅವರ
ದಿವ್ಯ ಜ್ಞಾನದಿಂದ
ಭವ್ಯ ಸಂದೇಶಗಳಿಂದ
ವಿವೇಕಾಭ್ಯುದಯದ ಅಭ್ಯುದಯವನ್ನು
ಸದಾ ಬಯಸುತ್ತಿರುವ
ಮಹಾ ಪ್ರಸಾದಕ್ಕಾಗಿ
ಸಂಪಾದಕ:
ಡಿ. ಪುಟ್ಟಸ್ವಾಮಿ.



ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿಗಳು, ಮೈಸೂರು

ಸಂಪಾದಕರು: ವಿವೇಕಾಭ್ಯುದಯ

1933—1940



ಶ್ರೀ ಡಿ. ಪುಟ್ಟಸ್ವಾಮಿಯವರು, ಬಿ. ಎ., ಬಿ. ಎಲ್.

ಸಂಪಾದಕರು: ವಿವೇಕಾಭ್ಯುದಯ

1941....

''ವಿವೇಕಾಭ್ಯುದಯ''ನ ಉದಯ

ವಿವೇಕ+ಅಭಿ+ಉದಯ ಈ ಪದತ್ರಯದಲ್ಲಿರುವ ವಿವೇಕ ಪದಕ್ಕೆ ಧರ್ಮ, ಅಧರ್ಮ, ಹೇಯ, ಉಪಾದೇಯ ಮೊದಲಾದ ಸದಸದ್ವಿಷಯಗಳ ವಿವೇಚನ ರೂಪವಾದ ಸಮ್ಯಗ್ಜ್ಞಾನವೆಂದೂ, ಅಭಿಯೆಂಬ ಪದಕ್ಕೆ ಎಲ್ಲ ಕಡೆಗಳಿಂದ ಅಥವಾ ಚೆನ್ನಾಗಿದೆಯೆಂದೂ, ಉದಯವೆಂಬ ಪದಕ್ಕೆ ಆವಿರ್ಭಾವವೆಂದೂ ಅರ್ಥವು. ಮೋಕ್ಷಕ್ಕೆ ನಿತ್ಯಸುಖಕ್ಕೆ ಸಾಧನಗಳಾದ ಭಕ್ತಿ ಜ್ಞಾನ ವೈರಾಗ್ಯ, ಅಂದರೆ ಸಮ್ಯಗ್ದರ್ಶನ ಜ್ಞಾನಚಾರಿತ್ರಗಳಲ್ಲಿ ಈ ವಿವೇಕವು ಒಂದು ಸಾಧನವಾಗಿರುತ್ತದೆ. ಇಂತಹ ಜ್ಞಾನವನ್ನು ಕುರಿತೇ "ಜ್ಞಾನಂ ತ್ರೈಲೋಕ್ಯ ದುರ್ಲಭಂ" ಎಂದು ಋಷಿಗಳು ಹೇಳಿರುವುದಲ್ಲದೆ, ಪಶುಪಕ್ಷಿ ಕ್ರಿಮಿಕೀಟಾದಿಗಳಲ್ಲಿರುವ ಸಾಮಾನ್ಯ ಜ್ಞಾನವನ್ನು ಕುರಿತಲ್ಲ. ಇಂತಹ ಜ್ಞಾನದ ಆವಿರ್ಭಾವರೂಪವಾದ ಕಾರ್ಯವು ಚೆನ್ನಾಗಿ ಯಾವ ಈ ಪತ್ರಿಕಾರೂಪವಾದ ಕಾರಣದಿಂದಾಗುವುದೋ "ಕಾರಣೇ ಕಾರ್ಯೋಪಚಾರಃ" ಎಂಬ ನ್ಯಾಯದಿಂದ ಈ ಪತ್ರಿಕೆಗೂ ನಾವು ವಿವೇಕಾಭ್ಯುದಯವೆಂಬ ಹೆಸರನ್ನೇ ಇಟ್ಟಿರುತ್ತೇವೆ.

ಪೂರ್ವಕಾಲದಲ್ಲಿ ಜನರಿಗೆ ಧಾರ್ಮಿಕ ವಿಷಯಗಳನ್ನೂ ಆಚಾರ ವ್ಯವಹಾರಗಳನ್ನೂ ನ್ಯಾಯನೀತಿಗಳನ್ನೂ ಸಾಮಾಜಿಕ ವಿಷಯಗಳನ್ನೂ ಉಪದೇಶಿಸುವ, ಉಪದೇಶಕರೂ ಗುರುಗಳೂ ಆಚಾರ್ಯ ಪುರುಷರೂ ಅನೇಕರಿದ್ದರು. ಸಾಯಂಕಾಲದಲ್ಲಿ ವಿರಾಮ ಕಾಲಗಳಲ್ಲಿ ಶಾಸ್ತ್ರ ಪುರಾಣಗಳನ್ನು ಓದುವ ಪದ್ಧತಿಯು ಎಲ್ಲೆಲ್ಲಿಯೂ ಇದ್ದಿತು. ಅದರಿಂದ ಸ್ತ್ರೀಪುರುಷರಲ್ಲಿಯೂ ಬಾಲಕ ಬಾಲಕಿಯರಲ್ಲಿಯೂ ಧಾರ್ಮಿಕ ಸಂಸ್ಕಾರವೂ, ದೇವರಲ್ಲಿ ಗುರು ಮಾತಾಪಿತೃಗಳಲ್ಲಿ ಹಿರಿಯರಲ್ಲಿ ಭಕ್ತಿಯೂ ಪಾಪಭೀತಿಯೂ ನ್ಯಾಯನಿಷ್ಠೆಯೂ, ಗೋವಿಗೆ ಎಳೆಗರುವಿನಲ್ಲಿರುವಂತೆ

ನೈಸರ್ಗಿಕವಾದ ಅಕುಟಿಲವಾದ ಪರಸ್ಪರ ವಾತ್ಸಲ್ಯವೂ ನೆಲೆಸಿದ್ದುವು. ಬರಬರುತ್ತ ಅಂತಹ ಉಪದೇಶಕರೂ ಗುರುಗಳೂ ಆಚಾರ್ಯ ಪುರುಷರೂ ಲುಪ್ತಪ್ರಾಯರಾದರು. ಅಳಿದುಳಿದವರಲ್ಲಿಯೂ ಪರೋಪಕಾರ ಬುದ್ಧಿಯೂ ಪರಹಿತೇಚ್ಛೆಯೂ ಲುಪ್ತವಾಗುತ್ತ ಬಂದು, ಆ ಸ್ಥಾನದಲ್ಲಿ ಸ್ವಾರ್ಥಪರತೆಯು ಬೇರೂರುತ್ತ ಬಂದಿತು. ವಿರಾಮ ಕಾಲಗಳಲ್ಲಿ ಶಾಸ್ತ್ರಪುರಾಣಗಳನ್ನು ಓದುವ ಪದ್ಧತಿಯು ಲುಪ್ತವಾಯಿತು. ಜನರಲ್ಲಿ ಆ ಧಾರ್ಮಿಕ ಸಂಸ್ಕಾರವೂ, ದೇವ ಗುರು ಮಾತಾಪಿತೃಗಳಲ್ಲಿ ಹಿರಿಯರಲ್ಲಿ ಭಕ್ತಿಯೂ ಪಾಪಭೀತಿಯೂ ನ್ಯಾಯನಿಷ್ಠತೆಯೂ ಪರಸ್ಪರ ವಾತ್ಸಲ್ಯವೂ ಲುಪ್ತವಾದುವು. ಹೀಗಾಗುವುದಕ್ಕೆ ಕಾಲದೋಷವು ಕಾರಣವೆನ್ನಬೇಕೋ, ಧರ್ಮಜ್ಞಾನಶೂನ್ಯವಾದ ವಿದ್ಯಾಭ್ಯಾಸಕ್ರಮದ ಪರಿಸ್ಥಿತಿಯು ಕಾರಣವೆನ್ನಬೇಕೋ ಅಥವಾ ಮತ್ತಾವುದಾದರೂ ಕಾರಣವೆನ್ನಬೇಕೋ ನಾವರಿಯೆವು.

ರಾತ್ರಿಕಾಲದಲ್ಲಿ ಕತ್ತಲೆಯು ವ್ಯಾಪಿಸುವುದು ಸ್ವಾಭಾವಿಕವೇ ಆಗಿದ್ದರೂ ದೀಪ ಪ್ರಕಾಶದಿಂದ ಅದನ್ನು ಸ್ವಲ್ಪ ದೂರ ಮಾಡಿ ಸ್ವಕಾರ್ಯವನ್ನು ಸಾಧಿಸಿಕೊಳ್ಳುವಂತೆ, ಅನಿವಾರ್ಯವಾಗಿ ಪ್ರಾಪ್ತವಾಗಿರುವ ಕಾಲದೋಷಾದಿ ಪ್ರತಿಬಂಧಕ ಕಾರಣಗಳು ಯಾವುವೇ ಇದ್ದರೂ, ಪ್ರಯತ್ನದಿಂದ ಸಾಧ್ಯವಾದಷ್ಟು ಅವುಗಳನ್ನು ದೂರಮಾಡಿ, ಜನರಲ್ಲಿ ಆ ಧಾರ್ಮಿಕ ಸಂಸ್ಕಾರಾದಿಗಳನ್ನುಂಟುಮಾಡಲು ಪ್ರಯತ್ನಿಸುವುದು ಪ್ರತಿಯೊಬ್ಬ ವಿದ್ವಾಂಸನ ಪವಿತ್ರವಾದ ಕರ್ತವ್ಯವಾಗಿರುತ್ತದೆ. ಈ ಪತ್ರಿಕೆಯ ಆವಿರ್ಭಾವದ ಉದ್ದೇಶವೂ ಅದೇ ಆಗಿರುವುದು. ಸೂರ್ಯನಿಂದ ಕತ್ತಲೆಯು ದೂರವಾಗುವಂತೆ ದೀಪದಿಂದ ಆಗದಿದ್ದರೂ, ಪರಿಮಿತ ಕ್ಷೇತ್ರದಿಂದ ದೂರವಾಗಿಯೇ ತೀರುವುದು. ಅದರಂತೆ ನಮ್ಮ ಪ್ರಯತ್ನಗಳಿಂದ ಪ್ರತಿಬಂಧಕ ಕಾರಣಗಳು ಸಂಪೂರ್ಣವಾಗಿ ದೂರವಾಗದಿದ್ದರೂ, ಸ್ವಲ್ಪವಾದರೂ ದೂರವಾಗಿಯೇ ತೀರುವುವೆಂಬ ನಂಬಿಕೆಯು ನಮಗೆ ಬೇಕು. ಒಂದು ವೇಳೆ ಹಾಗೆ ದೂರವಾಗಲಿಲ್ಲವೆಂದೂ ನಮ್ಮ ಪೌರುಷ ಪ್ರಯತ್ನವು ಸಫಲವಾಗಲಿಲ್ಲವೆಂದೂ ಇಟ್ಟುಕೊಂಡರೂ, ನಮ್ಮ ಆ ಉತ್ಸಾಹ ಪ್ರೇರಕವಾದ ಶುಭಭಾವನೆಗನುಸಾರವಾದ ಪುಣ್ಯಫಲವು ಅವಶ್ಯವಾಗಿ

ನನುಗೆ ದೊರೆಯುವುದು. ಹೇಗೂ ನಾವು ನಿರುತ್ಸಾಹಿಗಳಾಗಬೇಕಾದು ದಿಲ್ಲ. ತಾನು ತನ್ನ ಹೊಟ್ಟೆಯ ಪಾಡಿಗಾಗಿ. ಹೆಂಡತಿಮಕ್ಕಳ ಪೋಷಣೆ ಗಾಗಿ, ಹಿಂದೆ ಅನಂತಭವಗಳನ್ನು ಕಳೆದೆನೆಂದೂ ದುರ್ಲಭವಾದ ಈ ಮನುಷ್ಯಭವವನ್ನಾದರೂ ರತ್ನಾಕರನು "ತನುವಂ ಸಂಘದ ಸೇವೆಯೊಳ್ಮ ನಮನಾತ್ಮಧ್ಯಾನದಭ್ಯಾಸದೊಳ್ । ಧನಮಂ ದಾನಸುಪೂಜೆಯೊಳ್ದಿನ ಮನರ್ಘದ್ಧರ್ಮ ಕಾರ್ಯಪ್ರವ-। ರ್ತನೆಯೊಳ್ಪರ್ವವನೊಲ್ದು ನೋಂಪಿ ಗಳೊಳಿರ್ದಾಯುಷ್ಯಮಂ ಮೋಕ್ಷಚಿಂ-। ತನೆಯೊಳ್ಮೀರ್ಚುವ ಸದ್ಗೃಹಸ್ಥ ನನಘಂ" ಎನ್ನುವಂತೆ ಸಂಘದ ಸೇವೆಗಾಗಿ ಉಪಯೋಗಿಸುವುದು ತನ್ನ ಕರ್ತವ್ಯವಾಗಿರುತ್ತದೆಂದೂ ಪ್ರತಿಯೊಬ್ಬ ಮನುಷ್ಯನೂ ಭಾವಿಸಬೇಕು. ಇಂತಹ ಭಾವನೆಯೇ ಈ ಪತ್ರಿಕೆಯ ಪ್ರಾದುರ್ಭಾವಕ್ಕೆ ಪ್ರೇರಕವಾಗಿರು ವುದು.

ಈ ಯಂತ್ರಗಳ ಯುಗದಲ್ಲಿ ಹತ್ತಾರು ನೂರಾರು ಸಾವಿರಾರು ಜನರು ಮಾಡತಕ್ಕ ಕೆಲಸಗಳು ಸುಲಭವಾಗಿ ಸ್ವಲ್ಪ ಕಾಲದಲ್ಲಿ, ಒಂದೊಂದು ಯಂತ್ರದ ಮೂಲಕವಾಗಿ ನಡೆಯುತ್ತಿರುವುದು ಲೋಕಾನುಭವಸಿದ್ಧವಾದ ವಿಷಯವಾಗಿದೆಯಷ್ಟೇ? ಇದರಂತೆ ಅಂಚೆಯ ಸೌಕರ್ಯದಿಂದ ಒಂದು ಪತ್ರಿಕೆಯು ಏಕಕಾಲದಲ್ಲಿ ಅನೇಕ ಸ್ಥಾನಗಳಲ್ಲಿ ಅನೇಕ ಉಪದೇಶಕರು ಮಾಡಬಹುದಾದ ಉಪದೇಶ ಕಾರ್ಯವನ್ನು ಮಾಡಬಲ್ಲುದು. ಅಂದ ಮೇಲೆ ಧಾರ್ಮಿಕ ನೈತಿಕ ಭಾವವೆಂಬ ರಸವಿಲ್ಲದೆ ಶುಷ್ಕವಾಗಿರುವ ಹೃದಯಕ್ಷೇತ್ರಗಳಿದ್ದರೆ, ಅಂತಹವುಗಳಿಗೆ ಇಂತಹ ಧಾರ್ಮಿಕ ಪತ್ರಿಕೆ ಯಿಂದ ಅಲ್ಪಸ್ವಲ್ಪವಾದರೂ ಪ್ರಯೋಜನವಾಗಬಹುದೆಂದರೆ ಈ ಮಾತು ತಪ್ಪಾಗುವುದೇ?

ಜನತೆಗೆ ಅಹಿಂಸಾದಿ ಧಾರ್ಮಿಕ ವಿಷಯಗಳನ್ನೂ ನ್ಯಾಯನೀತಿ ವಿಷಯಗಳನ್ನೂ ಸಿದ್ಧಾಂತ ವಿಷಯಗಳನ್ನೂ ಸಾಮಾಜಿಕ ವಿಷಯಗಳನ್ನೂ ಬೋಧಿಸಿ ಕೃತಾರ್ಥನಾಗಬೇಕೆಂಬ ಉದ್ದೇಶದಿಂದ ಈ ವಿವೇಕಾಭ್ಯುದಯನು ಉದಯಿಸಿರುವನಲ್ಲದೆ ಮತ್ತಾವ ಉದ್ದೇಶವೂ ಸ್ವಾರ್ಥವೂ ಇವನಿಗಿರುವು ದಿಲ್ಲ. ಅಂತೂ ಪುರುಷಸಮಾಜದಲ್ಲಿಯೂ ಸ್ತ್ರೀಸಮಾಜದಲ್ಲಿಯೂ ಧಾರ್ಮಿಕ ನೈತಿಕ ಜ್ಞಾನೋನ್ನತಿಯನ್ನು ಮಾಡುತ್ತ ಧನ್ಯನಾಗಬೇಕೆಂಬುದೇ

ಈ ಪತ್ರಿಕೆಯ ಆವಿರ್ಭಾವದ ಉದ್ಧೇಶವಾಗಿರುವುದು. ಈ ಉದ್ಧೇಶವನ್ನು ಮುಂದೆ ಇದು ಕಾರ್ಯತಃ ನೆರವೇರಿಸುತ್ತ ಹೋದರೆ ಮತ್ತು ಜನತೆಗೆ ಇದರಿಂದ ಪ್ರಯೋಜನವು ಕಂಡುಬಂದರೆ ಇದನ್ನು ಸಮಾಜದನರೂ ಎಲ್ಲರೂ ಆದರಿಸಿರೆಂದಿಷ್ಟೇ ನಮ್ಮ ನಿವೇದನ.



೧. ದೇವರು

ಎಲ್ಲಾ ಮತದವರಿಗೂ ಅತಿಮುಖ್ಯವಾದ ವಸ್ತುವು ದೇವರು. ಈಗ ನಾನು ಜೈನಸಿದ್ಧಾಂತದಲ್ಲಿ ದೇವರ ಸ್ವರೂಪವು ಹೇಗೆ ವರ್ಣಿತವಾಗಿರುವುದೆಂಬ ವಿಷಯವನ್ನು ಸಂಕ್ಷೇಪವಾಗಿ ಹೇಳುವೆನು. ಈ ವಿಷಯದಲ್ಲಿ ಜೈನಮತವು ಇತರ ಮತಗಳೊಡನೆ ಎಷ್ಟರ ಮಟ್ಟಿಗೆ ಸಾನುಭೂತಿ, ಸಾಮರಸ್ಯವನ್ನು ಹೊಂದಿರುವುದೆಂಬುದನ್ನು ನ್ಯಾಯಾಧಿಪತಿಗಳಂತೆ, ಪರಿಶೀಲಿಸಬೇಕು. ಜೈನಸಿದ್ಧಾಂತಾನುಸಾರವಾಗಿ ನಾನು ಮೊತ್ತಮೊದಲು ದೇವರ ಹೆಸರುಗಳನ್ನು ವಿಮರ್ಶೆಮಾಡಿ ಆ ಮೇಲೆ ದೇವರ ಸ್ವರೂಪನ್ನು ವಿಮರ್ಶಿಸುವೆನು. ದೇವರಿಗೆ ಅನೇಕವಾದ ಹೆಸರುಗಳಿರುತ್ತವೆ. ಆದರೂ ಸರ್ವಜ್ಞತ್ವಾದಿಗುಣಸಾಮ್ಯಾಪೇಕ್ಷೆಯಿಂದ ದೇವರೊಬ್ಬನೆ. ಬೆಂಕಿಯನ್ನು ಸಂಸ್ಕೃತದಲ್ಲಿ ಅಗ್ನಿಯೆಂದೂ ಕನ್ನಡದಲ್ಲಿ ಬೆಂಕಿಯೆಂದೂ ಹಿಂದಿಯಲ್ಲಿ ಆಗ್ ಎಂದೂ ತಮಿಳ್‌ನಲ್ಲಿ ನೆರಪು ಎಂದೂ ಇಂಗ್ಲಿಷ್‌ನಲ್ಲಿ ಫೈರ್ ಎಂದೂ ತುಳುವಿನಲ್ಲಿ ಸೂವು ಎಂದೂ—ಹೀಗೆ ಬೇರೆಬೇರೆ ಭಾಷೆಗಳಲ್ಲಿ ಬೇರೆಬೇರೆ ಹೆಸರುಗಳಿಂದ ಕರೆದರೂ ಬೆಂಕಿಯು ಹೇಗೆ ಒಂದೇ ವಸ್ತುವೋ, ಹಾಗೆಯೇ ದೇವರು ಬೇರೆಬೇರೆ ಭಾಷೆಗಳ ಬೇರೆಬೇರೆ ಹೆಸರುಗಳಿಂದ ಮತ್ತು ಶಬ್ದಗಳಿಂದ ಕರೆಯಲ್ಪಟ್ಟರೂ ದೇವರೊಬ್ಬನೆ. ದೇವರಿಗೆ ಹೆಸರು ಯಾವುದಾದರೂ ಇರಲಿ. ಈ ವಿಷಯದಲ್ಲಿ ನಮಗೆ ವಿವಾದವಿಲ್ಲ. ಯಾರೇ ಆದರೂ ದೇವರ ಯಾವ ಹೆಸರನ್ನಾದರೂ ವಿಮರ್ಶಾತ್ಮಕದೃಷ್ಟಿಯಿಂದ ನೋಡಿದರೆ ವಿವಾದಕ್ಕವಕಾಶವಿಲ್ಲ.

ವಿಷ್ಣುವೆಂದರೆ "ವೇತ್ತಿ, ವ್ಯಾಪ್ನೋತೀತಿವಿಷ್ಣುಃ" ಎಂಬ ವ್ಯುತ್ಪತ್ತಿಯಿಂದ ಸರ್ವಜ್ಞ—ವ್ಯಾಪಕನೆಂದೂ ಜಿನನೆಂದರೆ "ದುರ್ಜಯಕರ್ಮಾರಾತೀನ್ ಜಯತೀತಿ ಜಿನಃ" ಎಂಬ ವ್ಯುತ್ಪತ್ತಿಯಿಂದ ದುರ್ಜಯಕರ್ಮ—ಮಾಯಾಪಾಶವನ್ನು ಜಯಿಸಿದ ಶುದ್ಧಾತ್ಮ—ದೇವರೆಂದೂ ಅರ್ಥ. ಈ

ಅರ್ಥದಲ್ಲಿ ಯಾರಿಗೆ ತಾನೆ ವಿವಾದವಿರುವುದು? ಯಾರಾದರೂ ದೇವರು ಸರ್ವಜ್ಞನಲ್ಲವೆಂದೂ ಕರ್ಮಪಾಶರಹಿತನಲ್ಲವೆಂದೂ ಹೇಳುತ್ತಾರೆಯೇ? ಹೀಗೆಯೇ ದೇವರ ಅಲ್ಲ — ಖುದಾ, ಗಾಡ್ ಮೊದಲಾದ ಹೆಸರುಗಳಿಗೂ ಆಯಾ ಮತೀಯರ ಪವಿತ್ರಾರ್ಥಗಳನ್ನೇ ಹೇಳುತ್ತಾರೆ. ಆ ಅರ್ಥಗಳಲ್ಲಿ ಯಾರಿಗೂ ವಿವಾದವಿರಲವಕಾಶವಿಲ್ಲ. ಒಂದು ಮತದಲ್ಲಿ ಬಳಕೆಯಾಗಿರುವ ಒಂದು ಹೆಸರನ್ನು ಕೇಳಿ ಆ ಹೆಸರಿನ ಪವಿತ್ರಾರ್ಥವನ್ನು ತಿಳಿಯಲು ಶಕ್ತಿಯಿಲ್ಲದವರು ಅಸಮಾಧಾನವನ್ನು ಹೊಂದುವರಲ್ಲದೆ ವಿವೇಕಿಗಳು ಹೊಂದಲಾರರು. ಹೀಗೆ ದೇವರ ಹೆಸರುಗಳ ವಿಷಯದಲ್ಲಿ ವಿವೇಕಿಗಳಿಗಾರಿಗೂ ವಿವಾದಕ್ಕವಕಾಶವೇ ಇಲ್ಲ.

ಹಿಂದೆ ದೃಷ್ಟಾಂತದಲ್ಲಿ ಹೇಳಿದ ಬೆಂಕಿಯ ಹೆಸರುಗಳು ಬೇರೆಬೇರೆ ಭಾಷೆಗಳಲ್ಲಿ ಬೇರೆಬೇರೆಯಾಗಿದ್ದರೂ ಅದರ ಗುಣವು ಬೇರೆಬೇರೆಯಾಗಿಲ್ಲ. ಅದು ಉಷ್ಣಗುಣವುಳ್ಳುದೇ ಆಗಿರುವುದು. ಯಾರಾದರೂ ಅದರ ಗುಣವು ಶೀತವೆಂದು ಹೇಳಿದರೆ ಮಾತ್ರ ಅಲ್ಲಿ ವಿವಾದವು ಹುಟ್ಟುವುದಕ್ಕೆಡೆಯಿದೆ. ಹಾಗೆಯೇ ದೇವರ ವಿಷಯದಲ್ಲಿಯೂ ನಾವು ತಿಳಿಯಬೇಕು. ದೇವರು ಅಪಾರವಾದ ಜ್ಞಾನದರ್ಶನ ಸುಖಸ್ವರೂಪನೂ ರಾಗದ್ವೇಷಾದಿ ಸಕಲ ದೋಷದೂರನೂ ಚಿದಾನಂದಸ್ವರೂಪಿಯೂ ದಯಾಸಮುದ್ರನೂ ಆಗಿರುತ್ತಾನೆಂದರೆ, ಈ ಮಾತಿನಲ್ಲಿ ಯಾರಿಗೆ ತಾನೆ ವಿರೋಧವಿರುವುದು? ಹಾಗಲ್ಲದೆ ದೇವರು ಕಾಮ ಕ್ರೋಧ ರಾಗದ್ವೇಷ ಮದಮಾತ್ಸರ್ಯಾದಿಗಳುಳ್ಳವನೆಂದೂ ಕೃತಕೃತ್ಯನಲ್ಲವೆಂದೂ ಯಾರಾದರೂ ಹೇಳಿದರೆ ಅಲ್ಲಿ ವಿವಾದಕ್ಕೆಡೆಯಿದೆ. ಆದರೆ ಹಾಗೆ ಯಾರಾದರೂ ವಿಚಾರಪರರು ಪರಮ ಪವಿತ್ರನಾದ ದೇವರಲ್ಲಿ ದೋಷವನ್ನಾರೋಪಿಸುವರೇ?

ದೇವರ ಹೆಸರು ಯಾವುದಾದರೂ ಜೈನರಿಗೆ ಸಮ್ಮತವೆಂಬುದಕ್ಕೂ ಅವರಿಗೆ ದೇವರ ಗುಣವು ಮುಖ್ಯವೆಂಬುದಕ್ಕೂ ಇದೋ ಜೈನಮಹರ್ಷಿಗಳು ಅಪ್ಪಣೆ ಕೊಡಿಸಿರುವ ಕೆಲವು ಪದ್ಯಗಳನ್ನು ಉದಾಹರಿಸುತ್ತೇನೆ.

"ವಿಷ್ಣುರ್ವಾ ತ್ರಿಪುರಾಂತಕೋ ಭವತು ವಾ ಬ್ರಹ್ಮಾ ಸುರೇಂದ್ರೋಥವಾ ।
ಭಾನುರ್ವಾ ಶಶಲಾಂಛನೋಥ ಭಗವಾನ್ ಬುದ್ಧೋಥ ಸಿದ್ಧೋಥವಾ ॥
ರಾಗದ್ವೇಷವಿಷಾರ್ತಿ ದೋಷರಹಿತಃ ಸತ್ತ್ವಾನುಕಂಪೋದ್ಯತೋ ಯಃ
ಸರ್ವೈಃ ಸಹ ಸಂಸ್ಕೃತೋ ಗುಣಗಣೈಸ್ತಸ್ಮೈ ನಮಃ ಸರ್ವದಾ ॥

ಭಾವಾರ್ಥ—ವಿಷ್ಣುವಾಗಲಿ ಶಿವನಾಗಲಿ ಬ್ರಹ್ಮನಾಗಲಿ ದೇವೇಂದ್ರನಾಗಲಿ ಸೂರ್ಯನಾಗಲಿ ಚಂದ್ರನಾಗಲಿ ಭಗವಾನ್ ಬುದ್ಧನಾಗಲಿ, ಯಾವನು ರಾಗದ್ವೇಷಗಳೆಂಬ ವಿಷ ಮನಃಪೀಡೆ ಮೊದಲಾದ ದೋಷರಹಿತನೂ ಪ್ರಾಣಿದಯಾಪರನೂ ಸಮಸ್ತ ಗುಣಸಮೂಹಗಳಿಂದ ಸಂಸ್ಕಾರವನ್ನು ಹೊಂದಿರುವವನೂ ಆಗಿರುತ್ತಾನೋ ಅವನಿಗೆ ಯಾವಾಗಲೂ ನಮಸ್ಕಾರವಿರಲಿ."

"ಯೋ ವಿಶ್ವಂ ವೇದ ವೇದ್ಯಂ ಜನನಜಲನಿಧೇರ್ಭಂಗಿನಃ ಪಾರದೃಶ್ವಾ ।
ಪೌರ್ವಾಪರ್ಯಾವಿರುದ್ಧಂ ವಚನಮನುಪಮಂ ನಿಷ್ಕಲಂಕಂ ಯದೀಯಂ ॥
ತಂ ವಂದೇ ಸಾಧುವಂದ್ಯಂ ಸಕಲಗುಣನಿಧಿಂ ಧ್ವಸ್ತದೋಷದ್ವಿಷಂತಂ ।
ಬುದ್ಧಂ ವಾ ವರ್ಧಮಾನಂ ಶತದಲನಿಲಯಂ ಕೇಶವಂ ವಾ ಶಿವಂ ವಾ ॥

ಭಾವಾರ್ಥ –ಯಾವನು ತಿಳಿಯುವುದಕ್ಕೆ ಯೋಗ್ಯವಾದ ಸಮಸ್ತ-ಲೋಕವನ್ನು ತಿಳಿಯುತ್ತಾನೋ ನಾಶಶೀಲವಾದ ಭವಸಮುದ್ರದ ಪಾರವನ್ನು ಕಂಡಿರುತ್ತಾನೋ, ಯಾವನ ಸಂಬಂಧವಾದ ವಚನವು ಪೂರ್ವಾಪರ ವಿರೋಧವಿಲ್ಲದುದೂ ಉಪಮೆಯಿಲ್ಲದುದೂ ದೋಷವಿಲ್ಲದುದೂ ಆಗಿರುವುದೋ ಸಾಧುಗಳಿಂದ ವಂದಿಸಲ್ಪಡತಕ್ಕವನೂ ಸಮಸ್ತ ಗುಣಗಳಿಗೆ ನಿಧಿಯೂ ದೋಷಗಳೆಂಬ ಶತ್ರುಗಳನ್ನು ನಾಶಮಾಡಿದವನೂ ಆದ ಅಂತಹ ಬುದ್ಧನನ್ನಾಗಲಿ ವರ್ಧಮಾನನನ್ನಾಗಲಿ ಬ್ರಹ್ಮನನ್ನಾಗಲಿ ವಿಷ್ಣುವನ್ನಾಗಲಿ ಮಹೇಶ್ವರನನ್ನಾಗಲಿ ವಂದಿಸುತ್ತೇನೆ." ಇದಾಯ್ತು ಹೆಸರಿನ ವಿಚಾರ.

ಇನ್ನು ನಾನು ದೇವರ ಸ್ವರೂಪವನ್ನು ಪ್ರತಿಪಾದಿಸುವೆನು. ದೇವರು ನಮ್ಮ ಚರ್ಮದೃಷ್ಟಿಗೆ ತೋರುವ ವಸ್ತುವಲ್ಲ. ಆದರೂ ನಮ್ಮ ಮಹರ್ಷಿಗಳು ತೋರಿಸಿರುವ ಮಾರ್ಗದಲ್ಲಿ ನಮ್ಮ ವಿಚಾರದೃಷ್ಟಿಯನ್ನು ಪಸರಿಸುತ್ತ ಹೋದರೆ ದೇವರ ಸ್ವರೂಪವು ನಮಗೆ ಗೋಚರವಾಗುವುದು. ಲೋಕದಲ್ಲಿ ಜಡ ಚೈತನ್ಯಗಳೆಂದು ಎರಡು ಮುಖ್ಯವಸ್ತುಗಳಿರುತ್ತವೆ. ಅವುಗಳಲ್ಲಿ ದೇವರು ಚೈತನ್ಯವಸ್ತುಗಳ ಗುಂಪಿಗೆ ಸೇರಿದವನಾಗಿರುತ್ತಾನೆ. ಚೈತನ್ಯವಸ್ತುಗಳಲ್ಲಿ ತೋರಿಬರುವ ಜ್ಞಾನ ದರ್ಶನ ಸುಖಾದಿಗುಣಗಳ ತುತ್ತತುದಿಯೇ ದೇವರು. ಸೂರ್ಯಪ್ರಕಾಶವು ಮೋಡದಿಂದ ಮರೆಯಾಗಿರುವಂತೆ, ಜೀವಾತ್ಮರುಗಳ ಜ್ಞಾನಾದಿಗುಣಗಳು ಕರ್ಮದಿಂದ ಮರೆಯಾಗಿರು

ತ್ತವೆ. ಆ ಕರ್ಮಾವರಣವು ದೂರವಾದಂತೆಲ್ಲ ಜ್ಞಾನಾದಿ ಗುಣಗಳು ವಿಕಾಸವನ್ನು ಹೊಂದುವುವು. ಯಾವನಲ್ಲಿ ಆ ಗುಣಗಳು ಸಂಪೂರ್ಣ ವಿಕಾಸವನ್ನು ಹೊಂದಿರುತ್ತವೋ ಅವನೇ ದೇವರು. ಲೋಕದಲ್ಲಿ ತರತಮ ಭಾವದಿಂದ ತೋರುವ ವಸ್ತುಗಳಿಗೆಲ್ಲ, ನ್ಯಾಯಶಾಸ್ತ್ರಾನುಸಾರವಾಗಿ, ಒಂದು ಸ್ಥಾನದಲ್ಲಿ ವಿರಾಮವಿದ್ದೇ ತೀರಬೇಕು. ಸಣ್ಣಪುಟ್ಟಹೊಳೆಗಳಿಗೂ ನದಿಗಳಿಗೂ ವಿರಾಮಸ್ಥಾನವು ಸಮುದ್ರ. ಹಾಗೆಯೇ ಜೀವಾತ್ಮರುಗಳಲ್ಲಿ ಕಂಡುಬರುವ ಜ್ಞಾನಾದಿ ಗುಣಗಳ ಪವಿತ್ರಾವಸ್ಥೆಯ ಪರಾಕಾಷ್ಠತೆಯು ಎಲ್ಲಿರುವುದೋ ಅವನೇ ದೇವರೆಂದು ತಿಳಿಯಬೇಕು. ದೇವರ ಸ್ವರೂಪ ವನ್ನು ವರ್ಣನೆಮಾಡುವಾಗ ಜೈನಮಹರ್ಷಿಗಳು

> "ತ್ರೈಲೋಕ್ಯಂ ಸಕಲಂ ತ್ರಿಕಾಲ ವಿಷಯಂ ಸಾಲೋಕಮಾಲೋಕಿತಂ ।
> ಸಾಕ್ಷಾದ್ಯೇನ ಯಥಾ ಸ್ವಯಂ ಕರತಲೇ ರೇಖಾತ್ರಯಂ ಸಾಂಗುಲಿ ॥
> ರಾಗದ್ವೇಷಭಯಾಮಯಾಂತಕಜರಾಲೋಲತ್ವ ಲೋಭಾದಯೋ ।
> ನಾಲಂ ಯತ್ಪದಲಂಘನಾಯ ಸ ಮಹಾದೇವೋ ಮಯಾವಂದ್ಯತೇ ॥

ಭಾವಾರ್ಥ—ಯಾವನಿಂದ ಕೈಯಲ್ಲಿರುವ ಬೆರಳುಗಳು ಸಹಿತವಾದ ಮೂರು ರೇಖೆಗಳು ನೋಡಲ್ಪಡುವಂತೆ ಭೂತಭವಿಷ್ಯದ್ವರ್ತಮಾನಕಾಲ ಗಳಿಗೆ ಗೋಚರವೂ ಅಲೋಕಸಹಿತವೂ ಆದ ಸಮಸ್ತ ತ್ರೈಲೋಕ್ಯವು ಪ್ರತ್ಯಕ್ಷವಾಗಿ ನೋಡಲ್ಪಟ್ಟಿತೋ, ರಾಗ ದ್ವೇಷ ಭಯ ರೋಗ ಮರಣ ವಾರ್ಧಕ್ಯ ಚಾಪಲ್ಯ ಲೋಭ ಮೊದಲಾದುವುಗಳು ಯಾವನ ಹಜ್ಜೆಯನ್ನು ಮೀರುವುದಕ್ಕೆ ಸಮರ್ಥಗಳಲ್ಲವೋ, ಅಂತಹ ಮಹಾದೇವನು ನನ್ನಿಂದ ವಂದಿಸಲ್ಪಡುತ್ತಾನೆ ಎಂದು ಹೇಳಿರುತ್ತಾರೆ. "ಪಕ್ಷ ಪಾತೋ ನ ಮೇ ವೀರೇ ನ ದ್ವೇಷಃ ಕಪಿಲಾದಿಷು" ಎಂದು ಹೇಳಿರುವಂತೆ ಜೈನರಿಗೆ ಜಿನೇಶ್ವರ ನಲ್ಲಿ ಪಕ್ಷಪಾತವಿಲ್ಲ. ಕಪಿಲಾದಿಗಳಲ್ಲಿ ದ್ವೇಷವೂ ಇಲ್ಲ. ಮೇಲೆ ಹೇಳಿದಂತೆ ಸಕಲದೋಷದೂರನೂ ಪರಮಪವಿತ್ರ ಜ್ಞಾನಾದಿ ಗುಣಸಹಿ ತನೂ ಆದ ದೇವರು ಯಾವನಾದರೂ ಜೈನರಿಗೆ ಮಾನ್ಯನಾಗಿರುತ್ತಾನೆ. ಆ ಪವಿತ್ರಗುಣಸಾಮ್ಯಾಪೇಕ್ಷೆಯಿಂದ ದೇವರೊಬ್ಬನೇ.

೨. ಜೈನಾಗಮರಕ್ಷಣೆಯ ಉತ್ತರದಾಯಿತ್ವ

ನಮ್ಮಗಳ ಅಜಾಗರೂಕತೆಯಿಂದ ಜೈನಾಗಮಗಳಿಗೆ ತಿರಸ್ಕಾರವೂ ದುರವಸ್ಥೆಯೂ ಆದಂತೆ ಅವುಗಳ ರಕ್ಷಣೆಯು ಉತ್ತರದಾಯಿತ್ವವೂ ನಮ್ಮ ಮೇಲಿರುವುದು. ಅಲಬ್ಧಗ್ರಂಥಗಳನ್ನು ಹುಡುಕಿಸುವುದೂ ದೊರಕಿರುವ ಗ್ರಂಥಗಳನ್ನು ಸುರಕ್ಷಿತವಾಗಿರಿಸುವುದೂ ಜಿನಾಗಮಭಕ್ತರ ಕರ್ತವ್ಯವಾಗಿರುತ್ತದೆ. ಕೆಲವು ಕಾಲದ ಹಿಂದೆ ಪಟ್ಟಾಚಾರ್ಯರುಗಳಿಂದ ಜೈನಧರ್ಮದ ವಿಶೇಷ ಪ್ರಭಾವನೆಯೂ ಜೈನಾಗಮದ ರಕ್ಷಣೆಯೂ ಆಗಿದ್ದಿತು. ಪಟ್ಟಾಚಾರ್ಯರೆಂದರೆ ಕೆಲವರು ಸಿಡಿದು ಬೀಳುತ್ತಾರೆ. ನಾವು ಅಂಥವರಲ್ಲ. ಭಟ್ಟಾರಕ ಶಬ್ದವು ಪೂಜ್ಯವಾಚಕವಾಗಿದ್ದು ಅರ್ಹತ್ಪರಮೇಷ್ಠಿಯ ಮತ್ತು ಆಚಾರ್ಯರ ಬೋಧಕವಾಗಿರುವುದು. ಈ ಭಟ್ಟಾರಕ ಪೀಠಗಳಲ್ಲಿ ನಿರ್ಗ್ರಂಥ ಮುನಿಗಳೇ ಕೆಲವು ಕಾಲದ ಹಿಂದಿನವರೆಗೆ ವಿರಾಜಮಾನರಾಗಿರುತ್ತಿದ್ದರು. ನಾನಾ ವಿಧಗಳಿಂದ ಧರ್ಮಾಯತನಗಳನ್ನು ಕಾಪಾಡುತ್ತಿದ್ದರು. ಆದರೆ ಕಾಲದೋಷದಿಂದ ಆ ಪದ್ಧತಿಯು ಕೆಡುತ್ತ ಬಂದಿತು. ಶಿಥಿಲಾಚಾರವು ವೃದ್ಧಿಯಾಗುತ್ತ ಬಂದಿತು. ಭಟ್ಟಾರಕರುಗಳು ಶಿಷ್ಯರಿಗೆ ಹಿತವನ್ನು ಮಾಡುವುದನ್ನು ಬಿಟ್ಟು ಸ್ವಾರ್ಥಸಾಧನೆಯಲ್ಲಿ ಹೆಚ್ಚು ಲಕ್ಷ್ಯಕೊಡುತ್ತ ಬಂದರು. ತಮ್ಮ ಭೋಗವಿಲಾಸಕ್ಕೋಸ್ಕರ ಶಿಷ್ಯರನ್ನು ಬಾಧೆಪಡಿಸಿದರು. ಇದರಿಂದ ಉತ್ತರ ಹಿಂದುಸ್ಥಾನದ ಕೆಲವು ಪ್ರಾಂತವು ಇವರನ್ನು ಕಂಡರೆ ಜುಗುಪ್ಸೆಪಡಲಾರಂಭಿಸಿತು. ಮೆಲ್ಲಮೆಲ್ಲನೆ ಈ ಪೀಠಗಳನ್ನು ತೆಗೆದುಹಾಕಬೇಕೆಂದೂ ಒಳಗಿಂದೊಳಗೆ ಪ್ರಯತ್ನವು ನಡೆಯಿತು. ಕೆಲವು ಕಡೆಗಳಲ್ಲಿ ಅದು ಸಫಲವೂ ಆಯ್ತು.

ದಕ್ಷಿಣದೇಶದಲ್ಲಿ ಇದುವರೆಗೂ ಭಟ್ಟಾರಕರಲ್ಲಿ ಶಿಷ್ಯರಿಗೆ ಭಕ್ತಿಯಿದೆ. ಇಲ್ಲಿಯ ಜನಗಳ ಭದ್ರಪರಿಣಾಮವೇ ಇದಕ್ಕೆ ಮುಖ್ಯ

ಕಾರಣವೆಂದು ತಿಳಿಯುತ್ತೇವೆ. ಆದುದರಿಂದ ಈ ಸುಸಮಯದಿಂದ ಯಥೇಷ್ಟ ಪ್ರಯೋಜನವನ್ನು ಹೊಂದಬೇಕೆನ್ನುವ ಭಟ್ಟಾರಕರುಗಳು ಎಲ್ಲಾ ವಿಧಗಳಿಂದ ತಮ್ಮನ್ನು ಸುಧಾರಿಸಿಕೊಂಡರೆ ಶಿಷ್ಯರನ್ನು ಸುಧಾರಿಸಬಲ್ಲರು. ಮಠಾಧೀಶರುಗಳು ತಮ್ಮ ಸ್ಥಾನವು ಬಹಳ ಉನ್ನತವಾದುದೆಂಬುದನ್ನು ಮರೆಯಲಾಗದು. ಧರ್ಮಾಯತನಗಳ ರಕ್ಷಣೆಗೋಸ್ಕರ ಭಟ್ಟಾರಕರುಗಳನ್ನು ಗೊತ್ತುಮಾಡಿರುವುದಾಗಿದೆ. ಸುಖವನ್ನನುಭವಿಸುವುದಕ್ಕಲ್ಲ. ಭಟ್ಟಾರಕರು ತಮ್ಮ ಕರ್ತವ್ಯಪಾಲನವನ್ನು ಮಾಡದಿದ್ದರೆ ತಮ್ಮ ಪವಿತ್ರ ಪದವಿಯನ್ನು ದುರುಪಯೋಗಪಡಿಸುತ್ತಿದ್ದಾರೆಂದು ನಾವು ತಿಳಿಯುವೆವು. ವಿದ್ಯಾಪ್ರಚಾರ ಧರ್ಮೋನ್ನತಿ ಸಮಾಜೋನ್ನತಿ ಶಾಸ್ತ್ರಭಂಡಾರಗಳ ಸುವ್ಯವಸ್ಥೆ ಜಿನಾಭಿಷೇಕಾರ್ಚನಾದಿ ವ್ಯವಸ್ಥೆಗಳನ್ನು ಮಾಡುವುದು ಭಟ್ಟಾರಕರ ಆದ್ಯಕರ್ತವ್ಯವಾಗಿದೆ. ಇದರಲ್ಲಿ ಸ್ವಲ್ಪವಾದರೂ ನ್ಯೂನತೆಯುಂಟಾದರೆ ಇದರ ಉತ್ತರದಾಯಿತ್ವವು ಭಟ್ಟಾರಕರುಗಳ ಮೇಲಿರುವುದು. ಈ ಮಾತನ್ನು ಚೆನ್ನಾಗಿ ತಿಳಿದುಕೊಂಡಿರಬೇಕು.

ಸಮಾಜದಲ್ಲಿ ಎಷ್ಟೋ ಸರಸ್ವತೀಭವನಗಳು ಸ್ಥಾಪಿತವಾಗಿ ಕೆಲಸ ಮಾಡುತ್ತಿವೆ. ಆದರೆ ಅವುಗಳಿಂದ ಸಮಾಜಕ್ಕೆ ಎಷ್ಟು ಪ್ರಯೋಜನವಾಗಬೇಕೋ ಅಷ್ಟು ಆಗುತ್ತಿಲ್ಲ, ಅಥವಾ, ಸಮಾಜವು ಅವುಗಳಿಂದ ಯಥೇಷ್ಟ ಪ್ರಯೋಜನವನ್ನು ಹೊಂದುತ್ತಿಲ್ಲವೆಂದು ನಾವು ತಿಳಿಯುತ್ತೇವೆ. ಪ್ರಾಚೀನ ಜೈನವಿಜ್ಞಾನವು ಓಲೆಯ ಗ್ರಂಥಗಳಲ್ಲಿ ಈ ದೇಶದಲ್ಲೇ ಹೆಚ್ಚಾಗಿರುತ್ತವೆ. ಸಾವಿರಾರು ಗ್ರಂಥಗಳು ಇನ್ನೂ ಪ್ರಕಾಶಕ್ಕೆ ಬಂದಿಲ್ಲ. ಅವುಗಳನ್ನೆಲ್ಲ ಶೋಧನ ಮಾಡಿ ಪ್ರಕಾಶಕ್ಕೆ ತಂದರೆ ಜೈನ ಸಾಹಿತ್ಯದಲ್ಲಿ ಪುನಃ ಜೀವನಸಂಚಾರವಾಗುವುದು. ಸರಸ್ವತೀಭವನದ ಸಂಚಾಲಕರು ಈ ಕೆಳಗಿನ ವಿಷಯಗಳನ್ನು ಲಕ್ಷಿಸಿದರೆ ಹೆಚ್ಚು ಪ್ರಯೋಜನವಾದೀತು.

೧. ತಮ್ಮ ಭವನದ ಪ್ರಚಾರಕರ ಮೂಲಕ ಪ್ರತಿಯೊಂದು ದೇವಾಲಯ ಶಾಸ್ತ್ರಭಂಡಾರಗಳಲ್ಲಿರುವ ಗ್ರಂಥಗಳ ಸೂಚಿಯನ್ನು ಮಾಡಿಸಿ ಭವನದಲ್ಲಿಡುವುದು.

೨. ಕರ್ಣಾಟಕ ಮತ್ತು ತಮಿಳ್ ದೇಶಗಳಲ್ಲಿ ಅನೇಕ ಸ್ಥಾನಗಳಲ್ಲಿ ಸಾವಿರಾರು ಅಲಭ್ಯಗ್ರಂಥಗಳಿರುತ್ತವೆ. ಅವುಗಳನ್ನು ಹುಡುಕಿ ಭಾಷಾಂತರ ಮಾಡಿಸಬೇಕು.

೩. ಕರ್ಣಾಟಕ ಭಾಷಾಸಾಹಿತ್ಯವೂ ಶ್ರೇಷ್ಠವೂ ವಿಸ್ತಾರವೂ ಆಗಿದೆ. ಅದರಲ್ಲಿರುವ ಮಹತ್ತ್ವವುಳ್ಳ ವಿಷಯುಗಳನ್ನು ಬೇರೆಯವರಿಗೆ ತಿಳಿಯುವುದಕ್ಕೋಸ್ಕರ ಸರಳವಾದ ಭಾಷಾಂತರವನ್ನು ಮಾಡಿಡಬೇಕು.

೪. ಈ ಭವನಗಳಲ್ಲಿ ಪುರಾಣತತ್ತ್ವಸಂಶೋಧನವಿಭಾಗವೂ ಇರಬೇಕು. ಅದರಿಂದ ಪ್ರಾಚೀನತತ್ತ್ವಗಳು ಪ್ರಕಾಶಕ್ಕೆ ಬಂದು ನಮ್ಮ ಪೂರ್ವದ ಸ್ಥಿತಿಯು ನಮಗೆ ಗೊತ್ತಾಗುವುದು.

೫. ಐತಿಹಾಸಿಕದೃಷ್ಟಿಯಿಂದ ಮಹರ್ಷಿಗಳ ಜೀವನ ಚರಿತ್ರವನ್ನು ಪ್ರಕಾಶಪಡಿಸಬೇಕು. ಅದರಿಂದ ಜನರು ಪ್ರಾಮಾಣಿಕತೆಯನ್ನು ಮತ್ತು ಅಪ್ರಮಾಣಿಕತೆಯನ್ನು ಹುಡುಕಲು ಸೌಲಭ್ಯವುಂಟಾಗುವುದು.

ಈ ಎಲ್ಲಾ ಉದ್ದೇಶಗಳ ಸಿದ್ಧಿಗೋಸ್ಕರ ಸರಸ್ವತೀಭವನಗಳಿಗೆ ಸಮಾಜದವರು ವಿಶೇಷವಾಗಿ ಸಹಾಯ ಮಾಡುವುದು ಉಚಿತವಾಗಿದೆ; ಇದು ಅತ್ಯಾವಶ್ಯಕವಾದ ಕೆಲಸವಾಗಿದೆ; ಪರಮೋದ್ಧಾರದ ಬೀಜವಾಗಿದೆ. ನಾವು ಸ್ವಲ್ಪ ಅಜಾಗರೂಕರಾದರೆ ಇದರಿಂದ ಮುಂದೆ ಭಯಂಕರವಾದ ಹಾನಿಯುಂಟಾದೀತು. ನೆನಪಿನಲ್ಲಿರಲಿ. ಜಿನಮಂದಿರವು ಜೀರ್ಣವಾದರೆ ಪುನಃ ಹೊಸದನ್ನು ಮಾಡಿಸಬಲ್ಲೆವು. ದೇವಮೂರ್ತಿಯು ಒಡೆದುಹೋದರೆ ಹೊಸದನ್ನು ಮಾಡಿಸಬಹುದು. ಧರ್ಮಾನುಯಾಯಿಗಳು ಕಡಮೆಯಾದರೆ ಉಪದೇಶಮೂಲಕ ಧಾರ್ಮಿಕರ ಸಂಖ್ಯೆಯನ್ನು ಹೆಚ್ಚಿಸಬಹುದು. ಇವೆಲ್ಲವನ್ನೂ ಮಾಡಬಹುದು. ಆದರೆ ಹಿಂದಿನ ಆಚಾರ್ಯರುಗಳ ಗ್ರಂಥಗಳಲ್ಲಿ ಜೋಡಿಸಿರುವ ಶಬ್ದಗಳು ಒಂದು ಸಲ ನಷ್ಟವಾದರೆ ಅವುಗಳ ಪುನರುದ್ಧಾರವಾಗುವ ಸಂಭವವಿಲ್ಲ. ಆದುದರಿಂದ ಎಲ್ಲಾ ಕಷ್ಟಪರಂಪರೆಗಳನ್ನು ಸಹಿಸಿಕೊಂಡಾದರೂ ಆಗಮ-ಗ್ರಂಥಗಳನ್ನು ರಕ್ಷಿಸುವುದಕ್ಕೆ ಪ್ರಯತ್ನಿಸಬೇಕು. ಜೈನಾಗಮವೇ ಸಾಕ್ಷಾತ್ ಮೋಕ್ಷಕ್ಕೆ ಬೀಜವಾಗಿದೆಯೆಂದರೆ ವಿರೋಧವಾಗದು. ಈ ವಿಷಯದಲ್ಲಿ ಮಹರ್ಷಿ ಪದ್ಮನಂದಿಯವರು ಹೀಗೆ ಹೇಳುತ್ತಾರೆ:—

"ಶಾಸ್ತ್ರಾದೇವ ಹಿ ತತ್ತ್ವಾರ್ಥಶ್ರದ್ಧಾನಂ ಜ್ಞಾನಮಾಂಜಸಂ ।
ಜ್ಞಾನಪೂರ್ವಂ ಹಿ ಚಾರಿತ್ರಂ ಧರ್ಮಃ ಶಾಸ್ತ್ರಾದಿತಿ ಸ್ಥಿತಃ ॥"

ಭಾವಾರ್ಥ—"ಶಾಸ್ತ್ರದಿಂದಲೇ ತತ್ತ್ವಾರ್ಥಶ್ರದ್ಧಾನವೂ ಸಮ್ಯಗ್ಜ್ಞಾನವೂ ಪ್ರಾಪ್ತವಾಗುತ್ತವೆ. ಈ ಜ್ಞಾನಪೂರ್ವಕವಾದ ಕ್ರಿಯೆಯೇ ಸಮ್ಯಕ್ಚಾರಿತ್ರವೆನಿಸುವುದು. ಈ ರತ್ನತ್ರಯಾತ್ಮಕವಾದ ಧರ್ಮವು ಶಾಸ್ತ್ರದಿಂದುಂಟಾಗುವುದು." ಆದುದರಿಂದ ಶಾಸ್ತ್ರವು ಮೋಕ್ಷಕ್ಕೆ ಸಾಧನವಾಗಿದೆ. ಯಾವ ಶಾಸ್ತ್ರದಿಂದ ಮೋಕ್ಷಪ್ರಾಪ್ತಿಯಾಗಬಲ್ಲುದೋ ಅದರಿಂದ ಸಾಂಸಾರಿಕ ಸುಖಪ್ರಾಪ್ತಿಯಾಗುವುದೇನಾಶ್ಚರ್ಯ? ಶಾಸ್ತ್ರಜ್ಞಾನದ ಸದುಪಯೋಗವನ್ನು ಮಾಡಿದರೆ ಮನುಷ್ಯನು ಸದಾಚಾರಿಯಾಗುವನು. ವಿನಯ ಸದಾಚಾರಾದಿ ಗುಣಗಳು ಶಾಸ್ತ್ರಾಭ್ಯಾಸಿಯ ಹೃದಯದಲ್ಲಿ ನೆಲಸುತ್ತವೆ. ದರ್ಶನವಿಶುದ್ಧಿ ಮೊದಲಾದುವು ಸ್ವಾಭಾವಿಕವಾಗಿ ಪ್ರಾಪ್ತವಾಗುವುವು. ಶಾಸ್ತ್ರದ ಮಾಹಾತ್ಮ್ಯದಿಂದಲೇ ಆತ್ಮನು ಇಹಲೋಕ ಪರಲೋಕ ಸುಖಾನುಭವವನ್ನು ಮಾಡಿ ತೀರ್ಥಂಕರರ ಅಚಿಂತ್ಯ ವಿಭೂತಿಯನ್ನು ಹೊಂದಿ ಪರಮನಿಃಶ್ರೇಯಸಾಭ್ಯುದಯವನ್ನೂ ಪಡೆಯುತ್ತಾನೆ. ಪ್ರಾಣಿಗಳಿಗೆ ಶ್ರುತಜ್ಞಾನಕ್ಕಿಂತ ಹೆಚ್ಚಿನ ಮಿತ್ರನಿಲ್ಲ. ಕುಶ್ರುತಕ್ಕಿಂತ ಹೆಚ್ಚಿನ ಶತ್ರುವಿಲ್ಲ.



೩. ಶ್ರಾವಣಪೂರ್ಣಿಮೆಯೂ ಯಜ್ಞೋಪವೀತವೂ

ಪ್ರತಿವರ್ಷ ಶ್ರಾವಣಮಾಸದ ಹುಣ್ಣಿಮೆಯ ದಿವಸ ಜೈನರಲ್ಲಿ ದೇವಪೂಜಾ-ಹೋಮ-ಹವನಪೂರ್ವಕವಾಗಿ ಹಳೆಯ ಯಜ್ಞೋಪವೀತವನ್ನು ತೆಗೆದುಹಾಕಿ ನೂತನ ಯಜ್ಞೋಪವೀತವನ್ನು ಧರಿಸುವ ಪದ್ಧತಿಯಿದೆಯಷ್ಟೆ. ಇದಕ್ಕೆ ಕೆಲವು ಪ್ರಾಂತದವರು "ನೂಲ ಶ್ರಾವಣದ ಹಬ್ಬ"ವೆಂದೂ ಜೈನೇತರರು "ಉಪಾಕರ್ಮ"ವೆಂದೂ ಹೇಳುವುದುಂಟು.

ಯಜ್ಞೋಪವೀತ ಧಾರಣೆಯ ಆಚರಣೆಯು ಯಾವಾಗ ಮೊದಲಾಯಿತು? ಯಜ್ಞೋಪವೀತವೆಂದರೇನು? ಇದನ್ನು ಧರಿಸುವ ಉದ್ದೇಶವೇನು? ಇದರ ಕ್ರಮವೇನು? ಶ್ರಾವಣಪೂರ್ಣಿಮೆಯ ದಿವಸ ನೂತನ ಯಜ್ಞೋಪವೀತ ಧಾರಣೆಯ ಉದ್ದೇಶವೇನು? ಇತ್ಯಾದಿ ವಿಷಯಗಳನ್ನು ತಿಳಿಯುವುದು ಪ್ರತಿಯೊಬ್ಬ ಜೈನಬಂಧುವಿನ ಕರ್ತವ್ಯವಾಗಿರುವುದು. ಹಾಗೆ ತಿಳಿಯುವುದರಿಂದ ತಮ್ಮ ಮನಸ್ಸಿಗೆ ಒಂದು ವಿಧವಾದ ಸಂತೋಷವೂ ಅದರಿಂದ ಪುಣ್ಯಫಲವೂ ಉಂಟಾಗುವುವಲ್ಲದೆ, ಈ ವಿಷಯಗಳನ್ನು ಕುರಿತು ಯಾರಾದರೂ ಇತರರು ಪ್ರಶ್ನೆ ಮಾಡಿದರೆ ಸರಿಯಾದ ಉತ್ತರಗಳನ್ನೂ ಹೇಳಬಹುದು.

ಭರತ ಚಕ್ರವರ್ತಿಯು ಷಟ್ಖಂಡವಿಜಯವನ್ನು ಮಾಡಿಬಂದು ಮಹಾಮಹವೆಂಬ ಪೂಜೋತ್ಸವವನ್ನು ಮಾಡಿ ಸತ್ಪುರುಷರಿಗೆ ದಾನವನ್ನು ಮಾಡಬೇಕೆಂದಿಚ್ಛಿಸಿ ಅಂಥವರನ್ನು ಆರಿಸುವುದಕ್ಕಾಗಿ ರಾಜಾಂಗಣದಲ್ಲಿ ಧಾನ್ಯಾಂಕುರಗಳನ್ನು ಬೆಳೆಯಿಸಿ, ಆ ಮಾರ್ಗವಾಗಿ ಉತ್ತಮ ಕುಲದ ಪ್ರಜೆಗಳು ಬರುವಂತೆ ಆಜ್ಞೆ ಮಾಡಿದನೆಂದೂ, ವ್ರತಿಕರಾಗಿದ್ದ ಕೆಲವರು ಏಕೇಂದ್ರಿಯಜೀವಗಳಾದ ಆ ಧಾನ್ಯಾಂಕುರಗಳನ್ನು ತುಳಿದುಕೊಂಡು

ಹೋಗದೆ ಜೀವಹಿಂಸೆಗೆ ಅಂಜಿ ಹೊರಗೆ ನಿಂತರೆಂದೂ, ಅಂಥವರನ್ನು ಬೇರೆ ದಾರಿಯಿಂದ ಬರಮಾಡಿ ಪದ್ಮನಿಧಿಯಿಂದ ಯಜ್ಞೋಪವೀತಗಳನ್ನು ತೆಗೆದುಕೊಂಡು ಅವರಿಗೆ ಧಾರಣಮಾಡಿಸಿ, ಅವರು ಬ್ರಹ್ಮಜ್ಞಾನಿಗಳಾದ ಬ್ರಾಹ್ಮಣರೆಂದು ಪ್ರತ್ಯೇಕಿಸಿ ಬ್ರಾಹ್ಮಣವರ್ಣವನ್ನು ಸೃಷ್ಟಿಸಿ, ಅವರನ್ನು ದಾನಮಾನಾದಿಗಳಿಂದ ಸತ್ಕರಿಸಿದನೆಂದೂ ಶಾಸ್ತ್ರದಲ್ಲಿ ಹೇಳಲ್ಪಟ್ಟಿದೆ. ಆ ಉತ್ತಮ ಆಚರಣೆಯನ್ನು ಬರುಬರುತ್ತ ಬ್ರಾಹ್ಮಣ ಕ್ಷತ್ರಿಯ ವೈಶ್ಯ-ಮೂರು ವರ್ಣಾಶ್ರಮದವರೂ ಸ್ವೀಕರಿಸಿದರು. ಹೀಗೆ ಯಜ್ಞೋಪವೀತ ಧಾರಣೆಯ ಪದ್ಧತಿಯು ಭರತೇಶ್ವರನ ಕಾಲದಲ್ಲಿ ಮೊದಲಾಯಿತು.

ಶ್ರಾವಣಮಾಸದ ಪೂರ್ಣಿಮೆಯ ದಿವಸ ಭರತೇಶ್ವರನು ಯಜ್ಞೋಪವೀತ ಧಾರಣೆಯ ವಿಧಿಯನ್ನು ಮೊತ್ತಮೊದಲು ಪ್ರಚಾರಕ್ಕೆ ತಂದುದರಿಂದ ವರ್ಷಕ್ಕೊಮ್ಮೆ—ಆ ದಿವಸ ಗೃಹಸ್ಥ—ಶ್ರಾವಕರು ಸ್ನಾನಾದಿಗಳಿಂದ ಶುಚಿರ್ಭೂತರಾಗಿ ಪೂಜಾಸಾಮಗ್ರಿಗಳನ್ನು ತೆಗೆದುಕೊಂಡು ದೇವಾಲಯಕ್ಕೆ ಹೋಗಿ ದೇವಪೂಜಾ - ಹೋಮ— ಹವನಪೂರ್ವಕವಾಗಿ ನೂತನ ಯಜ್ಞೋಪವೀತ ಧಾರಣವನ್ನು ಮಾಡಿ ಆ ದಿವಸ ಏಕಭುಕ್ತವನ್ನು ಮಾಡುವುದು ಪದ್ಧತಿಯಾಗಿದೆ. ಹಾಗೆ ಮಾಡುವುದು ಕರ್ತವ್ಯವೂ ಆಗಿದೆ. ಅಲ್ಲದೆ ಆ ದಿವಸ ಶಾಸ್ತ್ರಪಾರಾಯಣ ಮೊದಲಾದ ಪವಿತ್ರ ಕಾರ್ಯಗಳಲ್ಲಿ ತತ್ಪರರಾಗಿ ಸತ್ಕಾಲಕ್ಷೇಪವನ್ನು ಮಾಡಬೇಕು.

ಶ್ರಾವಣಪೂರ್ಣಿಮೆಯ ದಿವಸ ಬಲಿಯು, ಅಕಂಪನಾಚಾರ್ಯರು ಮೊದಲಾದ ಏಳುನೂರು ಮುನಿಗಳಿಗೆ ಉಪಸರ್ಗವನ್ನು ಮಾಡಿದನೆಂದೂ ಬೇರೊಂದು ದೇಶದಲ್ಲಿದ್ದ ವಿಷ್ಣುಕುಮಾರ ಮುನಿಗಳು ಆ ದಿವಸ ರಾತ್ರಿಯಲ್ಲಿ ಆಕಾಶದಲ್ಲಿ ಶ್ರವಣ ನಕ್ಷತ್ರವು ಚಲಿಸುತ್ತಿದ್ದುದನ್ನು ನೋಡಿ ಆ ಉಪಸರ್ಗವನ್ನು ತಿಳಿದು, ವಾಮನಾವತಾರವನ್ನು ತಾಳಿ ಬಲಿಯ ಬಳಿಗೆ ಹೋಗಿ, ಮೂರು ಹೆಜ್ಜೆಗಳಷ್ಟು ಸ್ಥಳವನ್ನು ಅವನಿಂದ ಪಡೆದು, ಮಹಾಕಾಯವನ್ನು ವಿಗುರ್ವಿಸಿ ಆ ಮುನಿಗಳ ಉಪಸರ್ಗವನ್ನು ನಿವಾರಣ ಮಾಡಿ ವಾತ್ಸಲ್ಯಾಂಗವನ್ನು ಪ್ರಕಾಶಪಡಿಸಿದರೆಂದೂ ಜೈನಾಗಮದಲ್ಲಿ ವರ್ಣಿತವಾಗಿದೆ. ಈ ದೃಷ್ಟಿಯಿಂದ ಉತ್ತರ ಹಿಂದುಸ್ಥಾನದ ಜೈನ ಬಾಂಧವರು ಆ ದಿವಸ "ರಕ್ಷಾಬಂಧನ"ವೆಂಬ ಹೆಸರಿನಿಂದ ಆ ಸ್ಮಾರಕೋತ್ಸವವನ್ನು ಮಾಡುತ್ತಾರೆ.

"ಯಜ್ಞೋಪವೀತ"ವೆಂಬ ಸಮಸ್ತಪದದಲ್ಲಿರುವ "ಯಜ್ಞ" ಶಬ್ದಕ್ಕೆ ಪ್ರಕರಣಾನುಸಾರವಾಗಿ ದೇವಪೂಜೆ - ಹೋಮ—ಹವನವೆಂದೂ "ಉಪವೀತ" ಶಬ್ದಕ್ಕೆ "ಬ್ರಹ್ಮಸೂತ್ರ"ವೆಂಬೂ ಅರ್ಥ. ಗುಣಗುಣಿಗಳಿಗೆ ಕಥಂಚಿತ್ ಅಭೇದವಿರುವುದರಿಂದ ಬ್ರಹ್ಮಸೂತ್ರವೆಂದರೆ ಪರಬ್ರಹ್ಮ (ರತ್ನತ್ರಯ) ಜ್ಞಾಪಕವಾದ ಅಥವಾ ಪರಬ್ರಹ್ಮಪದಪ್ರಾಪಕವಾದ ದ್ರವ್ಯಸೂತ್ರ ಅಂದರೆ ದಾರವೆಂದರ್ಥವಾಗಿರುವುದು. ಏವಂಚ "ಯಜ್ಞೋಪವೀತ"ವೆಂದರೆ ದೇವಪೂಜಾಪೂರ್ವಕವಾಗಿ ಧರಿಸತಕ್ಕ ಬ್ರಹ್ಮಸೂತ್ರವೆಂದರ್ಥವಾಯ್ತು.

ಧರ್ಮ ಅರ್ಥ ಕಾಮ ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳಲ್ಲಿ ಮೋಕ್ಷವು ಪರಮಪುರುಷಾರ್ಥ. ಅದನ್ನು ಪಡೆಯುವುದಕ್ಕೆ "ಸಮ್ಯಗ್ದರ್ಶನಜ್ಞಾನಚಾರಿತ್ರಾಣಿ ಮೋಕ್ಷಮಾರ್ಗಃ" ಎಂದು ಹೇಳಿರುವಂತೆ ಯಥಾರ್ಥವಾದ ದೇವಗುರು ಶಾಸ್ತ್ರಗಳಲ್ಲಿಯೂ ತತ್ತ್ವಗಳಲ್ಲಿಯೂ ಶ್ರೇಷ್ಠವಾದ ನಂಬಿಕೆ, ಶ್ರೇಷ್ಠವಾದ ಜ್ಞಾನ, ನಿರ್ದುಷ್ಟವಾದ ಆಚರಣೆ ಇವುಗಳು ಮಾರ್ಗವಾಗಿರುತ್ತವೆ. ಇವುಗಳಿಗೆ ರತ್ನತ್ರಯವೆಂದು ಜೈನ ಸಿದ್ಧಾಂತದ ಸಂಕೇತ. ಇಲ್ಲಿ ಸಮ್ಯಗ್ದರ್ಶನವೆಂದರೆ ಒಳ್ಳೆಯ ನೋಟವೆಂದರ್ಥವಲ್ಲ—ಶ್ರೇಷ್ಠವಾದ ನಂಬಿಕೆಯೆಂದರ್ಥ. ಆತ್ಮನಲ್ಲಿ ಮಿಥ್ಯಾದರ್ಶನ ಜ್ಞಾನಚಾರಿತ್ರಭಾವಗಳು ಬಾಹ್ಯಾಭ್ಯಂತರ ಸಾಧನಗಳಿಂದ ದೂರವಾಗಿ ಸಮ್ಯಗ್ದರ್ಶನಜ್ಞಾನ ಚಾರಿತ್ರಭಾವಗಳುಂಟಾದರೆ ಅವು ಮೋಕ್ಷಪುರುಷಾರ್ಥಪ್ರಾಪ್ತಿಗೆ ಪರಮಸಾಧನಗಳಾಗುತ್ತವೆ. ಆದುದರಿಂದ ಪ್ರತಿಯೊಬ್ಬ ಆತ್ಮಹಿತಕಾಂಕ್ಷಿಯೂ ಈ ಸಮ್ಯಗ್ದರ್ಶನ ಜ್ಞಾನ ಚಾರಿತ್ರಗುಣಗಳ ಪ್ರಾಪ್ತಿ ಮತ್ತು ರಕ್ಷಣೆಯಲ್ಲಿ ಪ್ರಯತ್ನಶೀಲನಾಗಿರಬೇಕೆನ್ನುವುದು ಜೈನ ಸಿದ್ಧಾಂತದ ಮುಖ್ಯ ಸಾರ. ಹೀಗೆ ಈ ರತ್ನತ್ರಯಗುಣಗಳು ಆತ್ಮೋದ್ಧಾರಕಗಳೆಂದ ಮೇಲೆ ಇವು ಎಷ್ಟೊಂದು ಪವಿತ್ರವಾದುವುಗಳೆಂದು ಬೇರೆ ಹೇಳಬೇಕಾಗಿಲ್ಲ.

ಈ ಸಮ್ಯಗ್ದರ್ಶನ ಜ್ಞಾನ ಚಾರಿತ್ರರೂಪವಾದ ಪವಿತ್ರಗುಣಗಳನ್ನು ಧರಿಸುತ್ತೇನೆಂದು ಬಾಹ್ಯವ್ಯಾಪಾರಗಳಲ್ಲಿ ಆಸಕ್ತನಾಗುವ ಗೃಹಸ್ಥ-ಶ್ರಾವಕನಿಗೆ ಆಗಾಗ್ಗೆ ಸ್ಮರಣೆಯುಂಟಾಗುವುದಕ್ಕೋಸ್ಕರ ಮೂರು ಎಳೆಗಳಿಂದ ಕೂಡಿದ ಯಜ್ಞೋಪವೀತವನ್ನು ಗೃಹಸ್ಥರು ಧರಿಸುವುದಾಗಿದೆ.

ಆತ್ಮನ ಭಾವರೂಪವಾದ ರತ್ನತ್ರಯಕ್ಕೆ ಭಾವಸೂತ್ರವೆಂದೂ ಯಜ್ಞೋಪವೀತಕ್ಕೆ ದ್ರವ್ಯಸೂತ್ರವೆಂದೂ ಹೆಸರು. ಈ ವಿಷಯವು ಈ ಕೆಳಗಿನ ಆರ್ಷ ವಚನಗಳಿಂದ ಗೊತ್ತಾಗುವುದು.

"ದೃಗ್ಬೋಧಚಾರಿತ್ರಗುಣತ್ರಯೇಣ ಧೃತ್ವಾ ತ್ರಿಧೌಪಾಸಕಭಾವಸೂತ್ರಂ ॥
ದ್ರವ್ಯಂಚಸೂತ್ರಂ ತ್ರಿಗುಣಂ ಸಮುಕ್ತಾಫಲಂ ತದಾರೋಪಣಮುದ್ವಹಾಮಿ"-

ನಾನು ಸಮ್ಯಗ್ದರ್ಶನ ಜ್ಞಾನ ಚಾರಿತ್ರಗಳೆಂಬ ಮೂರು ಗುಣಗಳಿಂದ ಮೂರು ಪ್ರಕಾರವಾಗಿರುವ ಶ್ರಾವಕರ ಭಾವಸೂತ್ರವನ್ನು ಧರಿಸಿ ಆ ಗುಣಗಳ ಆರೋಪವುಳ್ಳುದೂ ಮುಕ್ತಾಫಲಸಹಿತವೂ ಮೂರು ಎಳೆಗಳುಳ್ಳುದೂ ಆದ ದ್ರವ್ಯಸೂತ್ರ (ಯಜ್ಞೋಪವೀತ)ವನ್ನೂ ಧರಿಸುತ್ತೇನೆ. ಇದು ಮೇಲಿನ ಶ್ಲೋಕದ ಭಾವಾರ್ಥ.

ಗೃಹತ್ಯಾಗಿಗಳಾದ ಸಾಧು—ಸನ್ಯಾಸಿಗಳಿಗೆ ಬಾಹ್ಯವ್ಯಾಪಾರಗಳ ಗೊಡವೆಯಿಲ್ಲ. ಅವರು ಯಾವಾಗಲೂ ಭಾವಸೂತ್ರದ ಸ್ಮರಣೆಯುಳ್ಳವರಾಗಿರಬಹುದಾದುದರಿಂದ ಅವರಿಗೆ ದ್ರವ್ಯಸೂತ್ರದ ಆವಶ್ಯಕತೆಯಿಲ್ಲವೆಂದು ವಿಧಾಯಕವಾಗಿಲ್ಲ. ಹೀಗೆ ಯಜ್ಞೋಪವೀತವನ್ನು ಶ್ರಾವಕರು ತಮ್ಮ ಉತ್ತಮ ವರ್ಣತ್ವದ ಸೂಚಕವಾಗಿಯೂ ಉರೋಲಿಂಗವಾಗಿಯೂ ಮೋಕ್ಷಹೇತುಗಳಾದ ಸಮ್ಯಗ್ದರ್ಶನ ಜ್ಞಾನ ಚಾರಿತ್ರಗಳ ಸ್ಮಾರಕವಾಗಿಯೂ ಧರಿಸುವುದಾಗಿದೆ.

ಈ ಯಜ್ಞೋಪವೀತದ ಮೂರು ಎಳೆಗಳು ಪ್ರತಿಯೊಂದೂ ಮೂರು ಎಳೆಗಳುಳ್ಳುದಾಗಿಯೂ ಅವು ಪ್ರತಿಯೊಂದೂ ಮೂರು ಎಳೆಗಳುಳ್ಳುದಾಗಿಯೂ ಇರಬೇಕು. ಒಟ್ಟು ೩×೩×೩=೨೭ ಎಳೆಗಳಾದಂತಾಯ್ತು. ಇವು ಜೈನಸಿದ್ಧಾಂತದಲ್ಲಿ ಹೇಳಿರುವ ಜೀವಾಸ್ತಿಕಾಯ, ಪುದ್ಗಲಾಸ್ತಿಕಾಯ, ಧರ್ಮಾಸ್ತಿಕಾಯ, ಅಧರ್ಮಾಸ್ತಿಕಾಯ, ಆಕಾಶಾಸ್ತಿಕಾಯಗಳೆಂಬ ಪಂಚಾಸ್ತಿಕಾಯಗಳೂ; ಜೀವದ್ರವ್ಯ, ಪುದ್ಗಲದ್ರವ್ಯ, ಧರ್ಮದ್ರವ್ಯ, ಅಧರ್ಮದ್ರವ್ಯ, ಆಕಾಶದ್ರವ್ಯ, ಕಾಲದ್ರವ್ಯಗಳೆಂಬ ಷಡ್ದ್ರವ್ಯಗಳೂ; ಜೀವತತ್ತ್ವ, ಅಜೀವತತ್ತ್ವ, ಆಸ್ರವತತ್ತ್ವ, ಬಂಧತತ್ತ್ವ, ಸಂವರತತ್ತ್ವ, ನಿರ್ಜರಾತತ್ತ್ವ, ಮೋಕ್ಷತತ್ತ್ವಗಳೆಂಬ ಸಪ್ತ ತತ್ವಗಳೂ; ಜೀವಪದಾರ್ಥ, ಅಜೀವಪದಾರ್ಥ, ಆಸ್ರವಪದಾರ್ಥ, ಬಂಧಪದಾರ್ಥ, ಸಂವರಪದಾರ್ಥ,

ನಿರ್ಜರಪದಾರ್ಥ, ಮೋಕ್ಷಪದಾರ್ಥ, ಪಾಪಪದಾರ್ಥ, ಪುಣ್ಯಪದಾರ್ಥಗಳೆಂಬ ನವಪದಾರ್ಥಗಳೂ ಸೇರಿ ೫+೬+೭+೯=೨೭ ತತ್ತ್ವಗಳ ಸ್ಮಾರಕಗಳಾಗಿರುತ್ತವೆ. ಜೈನಸಿದ್ಧಾಂತದಲ್ಲಿ ಇಷ್ಟೇ ಮುಖ್ಯತತ್ವಗಳು.

ಯಜ್ಞೋಪವೀತವನ್ನು ಸಜ್ಜಾತಿ, ಸದ್ಗೃಹಸ್ಥತ್ವ, ಪಾರಿವ್ರಾಜ್ಯ, ಸುರೇಂದ್ರತ್ವ, ಸಾಮ್ರಾಜ್ಯ, ಆರ್ಹಂತ್ಯ, ನಿರ್ವಾಣಗಳೆಂಬ ಸಪ್ತಪರಮಸ್ಥಾನಗಳ ಭಾವನೆಯಿಂದ ಏಳು ಎಳೆಗಳಿಂದ ಹೊಸೆದು, ಮೂರು ಪದರಾಗಿ ಜೋಡಿಸಿ ಧರಿಸುವ ವಿಧಿಯೂ ಇದೆ. ಹೀಗೆ ಯಜ್ಞೋಪವೀತವು ಸಮುದಾಯ ರೂಪದಿಂದ ೨೭ ತತ್ತ್ವಗಳ ಅಥವಾ ಸಪ್ತಪರಮಸ್ಥಾನಗಳ ಸ್ಮಾರಕವಾಗಿಯೂ ಬೇರೆಬೇರೆಯಾಗಿರುವ ಮೂರು ಎಳೆಗಳಿಂದ ಸಮ್ಯಗ್ದರ್ಶನ ಜ್ಞಾನ ಚಾರಿತ್ರಗಳ ಸ್ಮಾರಕವಾಗಿಯೂ ಇರುತ್ತದೆಂದು ಭಾವನೆ. "ಭಾವನಾ ಭವನಾಶಿನೀ" ಎನ್ನುವಂತೆ ಈ ಉತ್ತಮಭಾವನೆಯು ಆತ್ಮಕಲ್ಯಾಣಕ್ಕೆ ಸಾಧನವೆಂದು ಬೇರೆ ಹೇಳಬೇಕಾಗಿಲ್ಲ.

ಯಜ್ಞೋಪವೀತವು ೧೪೦ ಮೊಳ ಉದ್ದವಾದ ಸಣ್ಣ ಎಳೆಯಿಂದ ಹೊಸೆಯಲ್ಪಟ್ಟುದಾಗಿಯೂ ಲಲಾಟದಿಂದ ನಾಭಿಯ ವರೆಗೆ ಉದ್ದವಾಗಿಯೂ ಇರಬೇಕು. ಉಪವೀತನಾದ ಬ್ರಹ್ಮಚಾರಿ-ಬಾಲಕನು ಒಂದು ಯಜ್ಞೋಪವೀತವನ್ನೂ ವ್ರತಿಕ ಶ್ರಾವಕರು ಎರಡು ಯಜ್ಞೋಪವೀತಗಳನ್ನೂ ಧರಿಸಬೇಕು. ಶ್ರಾವಕರ ಹನ್ನೊಂದು ನೆಲೆಗಳಲ್ಲಿ ವ್ರತಿಕನು ಎರಡನೆಯ ನೆಲೆಯವನು. ಶ್ರಾವಕರು ದಾನಪೂಜಾದಿ ಕಾರ್ಯಗಳಲ್ಲಿ ಎರಡು ಯಜ್ಞೋಪವೀತಗಳನ್ನು ಧರಿಸಲೇ ಬೇಕು. ಈ ಸಂಖ್ಯೆಯು ಶ್ರಾವಕನು ಒಂದನೆಯ ಮತ್ತು ಎರಡನೆಯ ನೆಲೆಯ ಪಾಲಕನಾಗಿರುತ್ತಾನೆ ಮತ್ತು ಇರಬೇಕು ಎಂಬುದಕ್ಕೆ ಜ್ಞಾಪಕವೂ ಆಗಿದೆ.

ಯಜ್ಞೋಪವೀತವು ಅಶುಚಿಯಾದರೂ ಬಿದ್ದುಹೋದರೂ ಹರಿದು—ಕಿತ್ತುಹೋದರೂ ಅದನ್ನು ಜಲಾಶಯದಲ್ಲಿ ವಿಸರ್ಜಿಸಿ ಸ್ನಾನಸಂಕಲ್ಪಪೂರ್ವಕವಾಗಿ ನೂತನ ಯಜ್ಞೋಪವೀತವನ್ನು ಧರಿಸಬೇಕೆಂಬ ವಿಧಿಯಿದೆ. ಈ ಸಂದರ್ಭಗಳಲ್ಲೆಲ್ಲ ಮೇಲೆ ಹೇಳಿದಂತೆ ದೇವಪೂಜಾ-ಹೋಮ-ಹವನಪೂರ್ವಕವಾಗಿ ನೂತನ ಯಜ್ಞೋಪವೀತವನ್ನು ಧರಿಸುವುದು ಕಷ್ಟಸಾಧ್ಯವಾಗಿರುವುದರಿಂದ ಶ್ರಾವಣಪೂರ್ಣಿಮೆಯ ದಿವಸ ಆ

ವಿಧಿಯನ್ನು ನಡೆಸಿ ಆಗ ಹೆಚ್ಚು ಯಜ್ಞೋಪವೀತಗಳನ್ನು ದೇವರ ಹೋಮಕುಂಡದ ಮುಂದಿಟ್ಟು ಅರ್ಚಿಸಿ, ಅವುಗಳನ್ನು ಶುಚಿಯಾಗಿಟ್ಟುಕೊಂಡಿದ್ದು ಮೇಲ್ಕಂಡ ಸಂದರ್ಭಗಳಲ್ಲಿ ಉಪಯೋಗಿಸಿಕೊಳ್ಳುವುದು ಪದ್ಧತಿಯಾಗಿದೆ. ರತ್ನತ್ರಯಭಾವನಾರೂಪವಾದ ಪವಿತ್ರ ಯಜ್ಞೋಪವೀತವು ಅಶುಚಿಯಾಗದಂತೆ ಅದರ ಜೋಲುತ್ತಿರುವ ಭಾಗವನ್ನು ಎತ್ತಿ ಜಲಮಲವಿಸರ್ಜನಾದಿ ಕಾಲಗಳಲ್ಲಿ ಬಲದ ಕಿವಿಯ ಮೇಲೆ ಇರಿಸಬೇಕು. ಅದರಿಂದ ಯಜ್ಞೋಪವೀತ ಮೂಲಕವಾಗಿ ಆ ಪವಿತ್ರ ರತ್ನತ್ರಯದ ಸ್ಮರಣೆಯಾದಂತೆಯೂ ಆಗುವುದು. ಇಷ್ಟು ಶ್ರಾವಣಪೂರ್ಣಿಮೆಯ ಮತ್ತು ಯಜ್ಞೋಪವೀತದ ಸಂಕ್ಷಿಪ್ತ ವರ್ಣನೆ.

೪. ಶಾಂತಿಹೋಮ

ಗೃಹಸ್ಥರು ತಮ್ಮ ಮನೆಗಳಲ್ಲಿ ಆಗಾಗ್ಗೆ ಹೋಮವನ್ನು ಮಾಡಿಸುವ ಪದ್ಧತಿಯೂ ವಿಧಿಯೂ ಇರುವುದಷ್ಟೆ. ಇದರ ಉದ್ದೇಶವೇನು? ಏತಕ್ಕಾಗಿ ಹೋಮವನ್ನು ಮಾಡಿಸಬೇಕು? ಇದರ ಕ್ರಮವೇನು? ಎಂದು ಕೆಲವು ಧರ್ಮಬಾಂಧವರು ಕೇಳುತ್ತಿರುವುದರಿಂದ ಗೃಹಸ್ಥರಿಗೆ ಮುಖ್ಯವಾಗಿ ಅನುಷ್ಠೇಯವಾದ ಈ ವಿಷಯವನ್ನು ಪತ್ರಿಕೆಯಲ್ಲಿಯೂ ಸ್ವಲ್ಪ ವಿವರಿಸಿದರೆ, ಅನೇಕರಿಗೆ ಇದರ ಮಹತ್ವವು ಗೊತ್ತಾಗಿ ಇದರಲ್ಲಿ ಹೆಚ್ಚು ಆಸಕ್ತಿಯುಂಟಾಗುವುದೆಂದು ಭಾವಿಸಿ, ಇದರ ಉದ್ದೇಶ, ಪ್ರಯೋಜನವನ್ನು ಮಾತ್ರ ಇಲ್ಲಿ ಸಂಕ್ಷೇಪವಾಗಿ ವಿವರಿಸುವೆವು. ಹೋಮವಿಧಿಯು ವಿಸ್ತಾರವಾಗಿರುವುದರಿಂದ ಅದನ್ನು ಈ ಲೇಖದಲ್ಲಿ ವಿವರಿಸಲಾಗುವುದಿಲ್ಲ.

ಈ ಶಾಂತಿಹೋಮವಿಧಿಯ ಸಂಕಲ್ಪದಲ್ಲಿ ಅಂದರೆ ಪ್ರಸ್ತಾವನೆಯಲ್ಲಿ "ಸಕಲಾಭ್ಯುದಯನಿಃಶ್ರೇಯಸಸಿದ್ಧ್ಯರ್ಥಂ ಶುದ್ಧ್ಯರ್ಥಂ ಶಾಂತ್ಯರ್ಥಂ ಮಂಗಲಾರ್ಥಂ ಶಾಂತಿಹೋಮವಿಧಿಂ ವಿಧಾಸ್ಯಾಮಃ" ಎಂದು ಹೇಳಿದೆ. ಸಮಸ್ತವಾದ ಅಭ್ಯುದಯ ಅಂದರೆ ಸಾಂಸಾರಿಕ ಸುಖದ ಸಿದ್ಧಿಗೋಸ್ಕರವೂ ನಿಃಶ್ರೇಯಸ—ಮುಕ್ತಿಸುಖದ ಸಿದ್ಧಿಗೋಸ್ಕರವೂ ಶುದ್ಧಿಗೋಸ್ಕರವೂ ಶಾಂತಿಗೋಸ್ಕರವೂ ಮಂಗಲಕ್ಕೋಸ್ಕರವೂ ಶಾಂತಿಹೋಮವನ್ನು ಮಾಡುತ್ತೇವೆಂಬುದು ಈ ವಾಕ್ಯದ ಅಭಿಪ್ರಾಯವಾಗಿರುತ್ತದೆ.

ಗೃಹಸ್ಥ—ಶ್ರಾವಕರು ತಮ್ಮ ಮನೆಗಳಲ್ಲಿ ಉಪನಯನ, ವಿವಾಹ, ಸೂತಕ, ಪಾತಕ, ಗೃಹಪೀಡಾ, ಗೃಹಪ್ರವೇಶ ಮೊದಲಾದ ಸಂದರ್ಭಗಳಲ್ಲಿ ಈ ಶಾಂತಿಹೋಮವನ್ನು ನಡೆಸಬೇಕೆಂಬ ವಿಧಿಯಿರುವುದು. ಇದರಲ್ಲಿ ಅರ್ಹದಾದಿ ಪಂಚಪರಮೇಷ್ಠಿಗಳು ನವಗ್ರಹರು ತಿಥಿದೇವತೆಗಳು ಮೊದಲಾದ ಅನೇಕ ದೇವತೆಗಳ ಪೂಜೆಗಳು ತರ್ಪಣಗಳು ಆಹುತಿಗಳು

ನಡೆಯುವುದರಿಂದ, ಆ ದೇವತೆಗಳ ಅನುಗ್ರಹವೂ ಗೃಹಸ್ಥರ ಗೃಹಪೀಡಾ ಶಾಂತಿಯೂ ಕ್ಷುದ್ರದೇವತೋಚ್ಚಾಟನೆಯೂ ಗೃಹಶುದ್ಧಿಯೂ ಮನಸ್ಸಂತೋಷವೂ ಮಂತ್ರಪೂತವಾದ ಹೋಮಧೂಮದಿಂದ ಮನೆಯ ವಾತಾವರಣಶುದ್ಧಿಯೂ ಆಗುವುವು. ಇದರಿಂದ ಶಾಂತಿಹೋಮದ ಉದ್ದೇಶವೂ ಪ್ರಯೋಜನವೂ ಅಭಿವ್ಯಕ್ತವಾಗುವುವು. ಅಂದಮೇಲೆ ಪ್ರತಿಯೊಬ್ಬರೂ ಗೃಹಸ್ಥರು ಮೇಲ್ಕಂಡ ಸಂದರ್ಭಗಳಲ್ಲೇ ಅಲ್ಲದೆ ತಿಂಗಳಿಗೊಮ್ಮೆ ಪ್ರತಿಯೊಂದು ಅಮಾವಾಸ್ಯೆಯ ದಿನದಲ್ಲಾದರೂ ತಮ್ಮ ಮನೆಗಳಲ್ಲಿ ಶಾಂತಿಹೋಮವನ್ನು ಮಾಡುವುದು ಅಥವಾ ಮಾಡಿಸುವುದು ಎಷ್ಟೊಂದು ಪ್ರಯೋಜನಕಾರಿಯೆಂಬುದನ್ನು ಮತ್ತೆ ಹೇಳಬೇಕಾಗಿಲ್ಲ.

ಈ ಹೋಮವು ಜಲಹೋಮ ವಾಲುಕಾ ಹೋಮ ಕುಂಡಹೋಮವೆಂದು ಮೂರು ವಿಧವಾಗಿರುತ್ತದೆ. ಜಲಹೋಮವೆಂದರೆ ಸಾರಿಸಿ ಶುದ್ಧವಾದ ಭೂಮಿಯ ಮೇಲೆ ಗಂಧೋದಕವನ್ನು ಸೇಚಿಸಿ ಸುತ್ತಲೂ ರಂಗವಲ್ಲಿಯನ್ನು ಬಿಟ್ಟು, ಅಲ್ಲಿ ಮಣ್ಣಿನಿಂದ ಅಥವಾ ತಾಮ್ರದಿಂದ ಮಾಡಲ್ಪಟ್ಟದುಂಡಾದ ಕುಂಡವನ್ನು ತೊಳೆದ ಅಕ್ಕಿಯ ಪುಂಜದ ಮೇಲೆ ಸ್ಥಾಪಿಸಿ, ಅದನ್ನು ಗಂಧ ಅಕ್ಷತ ಫಲ ಪುಷ್ಪಾದಿಗಳಿಂದ ಶೋಭಿತವನ್ನಾಗಿ ಮಾಡಿ ನೀರನ್ನು ತುಂಬಿ ಅದರಲ್ಲಿ ಅರ್ಚನೆಯನ್ನು ಮಾಡುವುದು.

ವಾಲುಕಾ ಹೋಮವೆಂದರೆ ಭೂಮಿಯನ್ನು ಸಾರಿಸಿ ಗಂಧೋದಕವನ್ನು ಸೇಚಿಸಿ ಸುತ್ತಲೂ ರಂಗವಲ್ಲಿಯನ್ನು ಬಿಟ್ಟು, ಒಂದು ಮೊಳ ಉದ್ದ ಮತ್ತು ಅಗಲವಾಗಿ ಅಂದರೆ ಚೌಕವಾಗಿ ಹೊಳೆಯ ಶುದ್ಧವಾದ ಮರಳನ್ನು ಹರಡಿ ಅದರ ಮೇಲೆ ಶಿಖರಾಕಾರವಾಗಿ ಸಮಿತ್ತು—ಕಡ್ಡಿಗಳನ್ನು ಇಟ್ಟು ಅಗ್ನಿಸ್ಥಾಪನೆಯನ್ನು ಮಾಡಿ ಅದರಲ್ಲಿ ಅರ್ಚನೆಯನ್ನು ಮಾಡುವುದು.

ಕುಂಡಹೋಮಕ್ಕೆ ವಿಧಾಯಕವಾಗಿರುವ ಕುಂಡವು ಚತುರಸ್ರ ಕುಂಡ, ತ್ರಿಕೋಣಕುಂಡ, ವೃತ್ತಕುಂಡವೆಂದು ಮೂರು ವಿಧವಾಗಿರುತ್ತದೆ. ಚತುರಸ್ರಕುಂಡವು ಒಂದು ಗುದ್ದುಮೊಳ ಉದ್ದ ಮತ್ತು ಅಗಲವಾಗಿರಬೇಕು. ಇದರ ಬಲದ ಭಾಗದಲ್ಲಿ ತ್ರಿಕೋಣ ಕುಂಡವೂ ಎಡದ ಭಾಗದಲ್ಲಿ ವೃತ್ತಕುಂಡವೂ ರಚಿಸಲ್ಪಡಬೇಕು. ತ್ರಿಕೋಣಕುಂಡದ ಮೂಲೆಯಿಂದ ಮೂಲೆಗೆ ಅಳತೆಯೂ ವೃತ್ತಕುಂಡದ ಅಳತೆಯೂ ಒಂದು

ಗುಡ್ಡುವೊಳವಾಗಿರಬೇಕು. ಪ್ರತಿಯೊಂದು ಕುಂಡದಲ್ಲಿಯೂ ಕ್ರಮವಾಗಿ ೫, ೪, ೩ ಅಂಗುಲ ಅಗಲವಾದ ಮೇಖಲೆ—ಜಗಲಿಗಳಿರಬೇಕು. ಈ ಕುಂಡಗಳು ಒಂದಕ್ಕೊಂದು ಒಂದು ಅಂಗುಲ ದೂರದಲ್ಲಿರಬೇಕು. ಮಧ್ಯದ ಚತುರಸ್ರ ಕುಂಡಕ್ಕೆ ತೀರ್ಥಂಕರ ಕುಂಡವೆಂದೂ ತ್ರಿಕೋಣ ಕುಂಡಕ್ಕೆ ಗಣಧರ ಕುಂಡವೆಂದೂ ವೃತ್ತಕುಂಡಕ್ಕೆ ಶೇಷಕೇವಲಿಕುಂಡ ವೆಂದೂ ಹೆಸರು. ಚತುರಸ್ರ ಕುಂಡದಲ್ಲಿ ಗಾರ್ಹಪತ್ಯಾಗ್ನಿಯ ಸಂಕಲ್ಪ ದಿಂದಲೂ ತ್ರಿಕೋಣ ಕುಂಡದಲ್ಲಿ ಆಹವನೀಯಾಗ್ನಿಯ ಸಂಕಲ್ಪದಿಂದಲೂ ವೃತ್ತಕುಂಡದಲ್ಲಿ ದಕ್ಷಿಣಾಗ್ನಿಯ ಸಂಕಲ್ಪದಿಂದಲೂ ಅಗ್ನಿಸ್ಥಾಪನೆಯನ್ನು ಮಾಡಬೇಕು.

ಮೊದಲು ಚತುರಸ್ರ ಕುಂಡದಲ್ಲಿ ಅಗ್ನಿಸ್ಥಾಪನೆಯನ್ನು ಮಾಡಿ ಅದರಿಂದ ತ್ರಿಕೋಣಕುಂಡಕ್ಕೂ ಅದರಿಂದ ವೃತ್ತಕುಂಡಕ್ಕೂ ಉಪಯೋ ಗಿಸಬೇಕು. ಈ ಕುಂಡಗಳ ಮುಂದೆ ಅಂದರೆ ಒಳಗಿನ ಭಾಗದಲ್ಲಿ ವೇದಿಕೆಯನ್ನು ರಚಿಸಿ ನಾಲ್ಕು ಕಡೆಗಳಲ್ಲಿ ಕಂಬಗಳನ್ನಿಟ್ಟು ಅವುಗಳಿಗೆ ಬಾಳೆಕಂದು ಕಬ್ಬಿನ ಜಲ್ಲೆಗಳನ್ನೂ ತಳಿರು ತೋರಣ ಪುಷ್ಪಮಾಲೆ ಘಂಟೆ ಗಳನ್ನೂ ಮೇಲೆ ಚಂದ್ರೋಪವನ್ನೂ ಕಟ್ಟಿ, ಆ ವೇದಿಕೆಯ ಸುತ್ತಲೂ ಕಲಶ ಕನ್ನಡಿ ಚಾಮರ ಧೂಪಘಟ ಧ್ವಜ ಮೊದಲಾದ ಮಂಗಲದ್ರವ್ಯ ಗಳನ್ನಿರಿಸಿ, ಒಳಗೆ ದೇವರ ಪ್ರತಿಮೆಯನ್ನೂ ಅದರ ಉಭಯ ಪಾರ್ಶ್ವ ಗಳಲ್ಲಿ ಯಕ್ಷಯಕ್ಷಿಯರನ್ನೂ ಧರ್ಮಚಕ್ರ ಛತ್ರತ್ರಯವನ್ನೂ ಮುಂದೆ ಅಕ್ಕಿಯ ಮೇಲೆ ಫಲ ಪುಷ್ಪಾದಿಗಳಿಂದಲಂಕೃತವಾದ ಪೂರ್ಣಕಲಶ ವನ್ನೂ ಸ್ಥಾಪಿಸಿ ಬಳಿಕ ಹೋಮವಿಧಾನವನ್ನು ನಡೆಸಬೇಕು. ಆದರೆ ಈ ಕ್ರಮವು ಪಂಚಕಲ್ಯಾಣಾದಿ ಮಹೋತ್ಸವಗಳಲ್ಲಿ ನಡೆಯತಕ್ಕುದಾ ಗಿರುವುದರಿಂದ ಗೃಹಹೋಮದಲ್ಲಿ ಇದು ಪ್ರಕೃತವಲ್ಲವಾದರೂ ಹೋಮ ವಿಧಿಯನ್ನು ವಿವರಿಸುವ ಸಂದರ್ಭದಲ್ಲಿ ಇದನ್ನೂ ಸ್ವಲ್ಪ ವಿವರಿಸಿರುವು ದಾಗಿದೆ. ಮನೆಗಳಲ್ಲಿ ನಡೆಸಲ್ಪಡತಕ್ಕ ಹೋಮಕ್ಕೆ ಚತುರಸ್ರಕುಂಡವೂ ಪ್ರತಿಮಾಸ್ಥಾಪನೆಗೆ ಪೀಠವೂ ಉಪಯೋಗಿಸಲ್ಪಡತಕ್ಕುವಾಗಿವೆ.

ಸಾಮಾನ್ಯವಾಗಿ ಈಗ ಮನೆಗಳಲ್ಲಿ ಹೋಮಕುಂಡಕ್ಕೆ ಬದಲಾಗಿ ಅಕ್ಕಿ ಹಿಟ್ಟು, ಅರಸಿನದ ಪುಡಿ, ಇವೆರಡಕ್ಕೂ ಸುಣ್ಣವನ್ನು ಬೆರೆಯಿಸಿ

ಮಾಡಿದ ಪುಡಿ, ಈ ಮೂರು ಪುಡಿಗಳಿಂದ ಚೌಕವಾಗಿ ಮೇಲೆ ಹೇಳಿದ ಅಳತೆಯಲ್ಲಿ ಕುಂಡಾಕೃತಿಯನ್ನು ರಚಿಸಿ ನಾಲ್ಕು ಮೂಲೆಗಳಲ್ಲಿ ಒಂದೊಂದು ಕಲಶವನ್ನಿಟ್ಟು, ನೀರು ತುಂಬಿ ಮೇಲೆ ಎಲೆಗಳನ್ನೂ ಫಲ ಪುಷ್ಪಗಳನ್ನೂ ಇಟ್ಟು ಸುತ್ತಲೂ ನೂಲನ್ನು ಸುತ್ತಿ, ಹೋಮಮಂಡಪ ವೆಂಬ ಭಾವನೆಯಿಂದ ಅದರ ಮಧ್ಯದಲ್ಲಿ ಹೋಮ ಮಾಡುವುದು ಪದ್ಧತಿ ಯಾಗಿದೆ. ಹೋಮಕ್ಕೆ ಬೇಕಾದ ಗಂಧ ಪುಷ್ಪ ಚರು ದೀಪ ಧೂಪ ಫಲಾದಿ ಸಾಮಗ್ರಿಗಳನ್ನೂ ಹಾಲು ತುಪ್ಪ ಎಳ್ಳು ಬತ್ತದರಳು ಮೊದ ಲಾದ ಸಾಮಗ್ರಿಗಳನ್ನೂ ಎಕ್ಕ ಮುತ್ತುಗ ಕಗ್ಗಲಿ ಉತ್ತರಾಣಿ ಅರಳಿಬತ್ತಿ ಬನ್ನಿ ಗರಿಕೆ ದರ್ಭೆ ಈ ಸಮಿತ್ತುಗಳನ್ನೂ ಸ್ರುಕ್ ಸ್ರುವೆಗಳನ್ನೂ ಅಣಿ ಮಾಡಿಕೊಂಡು ಬಳಿಕ ಹೋಮವಿಧಿಯನ್ನು ನಡೆಸಬೇಕು.

ಸಮಿತ್ತುಗಳು ಒಂಭತ್ತು ಅಂಗುಲ ಉದ್ದವಾಗಿರಬೇಕು. ಬನ್ನಿಯ ಸಮಿತ್ತನ್ನು ಕಿತ್ತು ಆರು ತಿಂಗಳೂ, ಕಗ್ಗಲಿಯ ಮತ್ತು ಮುತ್ತುಗದ ಸಮಿತ್ತುಗಳನ್ನು ಕಿತ್ತು ಮೂರು ತಿಂಗಳೂ, ಉತ್ತರಾಣಿಯ ಮತ್ತು ಎಕ್ಕದ ಸಮಿತ್ತುಗಳನ್ನು ಕಿತ್ತು ಒಂದು ದಿನವೂ ಆಗಿರಬೇಕು. ಅರಳಿಯ ಸಮಿತ್ತನ್ನು ಆಗಲೇ ಕಿತ್ತು ಉಪಯೋಗಿಸಬಹುದು. ಆಲ ಅತ್ತಿ ಮೊದ ಲಾದ ಇತರ ಸಮಿತ್ತುಗಳನ್ನು ಕಿತ್ತು ಮೂರು ದಿನಗಳೂ ದರ್ಭೆಯನ್ನು ಕಿತ್ತು ಒಂದು ತಿಂಗಳೂ ಆಗಿರಬೇಕು. ಗರಿಕೆಯನ್ನು ಆಗಲೇ ತಂದು ಉಪಯೋಗಿಸಬಹುದು. ಯಾವ ಸಮಿತ್ತುಗಳೂ ದೊರೆಯದಿದ್ದರೆ ಅವು ಗಳಿಗೆ ಬದಲಾಗಿ ದರ್ಭೆಯನ್ನು ಉಪಯೋಗಿಸಬಹುದು. ಸಮಿತ್ತು ಪ್ರತಿಯೊಂದೂ ೧೦೮ ಇರಬೇಕು. ೨೮ ಮಧ್ಯಮಪಕ್ಷ. ೮ ಜಘನ್ಯ ಪಕ್ಷ. ಸ್ರುಕ್ ಸ್ರುವೆಗಳೆರಡೂ ಸೌಟಿನ ಆಕಾರವಾಗಿ ೨೦ ಅಂಗುಲ ಅಥವಾ ಒಂದು ಗುಡ್ಡುಮೊಳ ಉದ್ದವಾಗಿಯೂ ಸ್ರುವೆಯ ಮುಖವು ಉದ್ದವಾಗಿಯೂ ಸ್ರುಕ್ಕಿನ ಮುಖವು ವಿಸ್ತಾರವಾಗಿಯೂ ಇರಬೇಕು. ಸ್ರುಕ್ಕನ್ನು ಆಲದ ಮರದಿಂದಲೂ, ಸ್ರುವೆಯನ್ನು ಗಂಧದ ಮರದಿಂದಲೂ, ಮಾಡಬೇಕು. ಆ ಮರಗಳು ದೊರೆಯದಿದ್ದರೆ ಅರಳಿಯ ಮರದಿಂದ ಮಾಡ ಬೇಕು. ಅದೂ ದೊರೆಯದಿದ್ದರೆ ಆ ಸ್ರುಕ್ ಸ್ರುವೆಗಳಿಗೆ ಬದಲಾಗಿ ಅರಳಿಯ ಎಲೆಯನ್ನಾಗಲಿ ಮುತ್ತುಗದ ಎಲೆಯನ್ನಾಗಲಿ ಆಲದ ಎಲೆಯನ್ನಾಗಲಿ

ಉಪಯೋಗಿಸಬಹುದು. ಹೋಮಕುಂಡದಲ್ಲಿ ಸ್ರುವೆಯಿಂದ ತುಪ್ಪವನ್ನೂ ಸ್ರುಕ್ಕಿನಿಂದ ಇತರ ಹೋಮದ್ರವ್ಯಗಳನ್ನೂ ಅರ್ಚಿಸಬೇಕು.

ಹೋಮವನ್ನು ಮಾಡುವವನು ಹೋಮಕುಂಡದ ಪೂರ್ವದಿಕ್ಕಿನಲ್ಲಿ, ಅಂದರೆ, ಬಲದ ಭಾಗದಲ್ಲಿ ದರ್ಭಾಸನದ ಮೇಲೆ ಪಶ್ಚಿಮಾಭಿಮುಖನಾಗಿ ಕುಳಿತುಕೊಳ್ಳಬೇಕು. ಹೋಮಸಾಮಗ್ರಿಗಳನ್ನು ಉಚಿತ ಸ್ಥಾನದಲ್ಲಿರಿಸಿ ಹೋಮವು ಪೂರ್ತಿಯಾಗುವ ವರೆಗೂ ಮೌನವ್ರತವನ್ನು ಧಾರಣ ಮಾಡಿ ಪರಮಾತ್ಮ ಸ್ಮರಣವನ್ನು ಮಾಡಬೇಕು. ಬಳಿಕ ಹೋಮಕುಂಡದಲ್ಲಿ ಸುಗಂಧದ್ರವ್ಯದಿಂದ ಅಗ್ನಿಮಂಡಲವನ್ನು ಅಂದರೆ ತ್ರಿಕೋಣಾಕಾರವಾಗಿ ಮೂರು ರೇಖೆಗಳನ್ನು ಬರೆದು ಸುತ್ತಲೂ ಅಗ್ನಿ ಜ್ವಾಲಾಕಾರವಾದ ಗೆರೆಗಳನ್ನೆಳೆಯಬೇಕು. ಆ ಮೇಲೆ ಘಂಟಾವಾದ್ಯಘೋಷಣಪೂರ್ವಕವಾಗಿ ಮಂತ್ರವಿಧಿಪ್ರಕಾರವಾಗಿ ಹೋಮವನ್ನು ಮಾಡಬೇಕು. ಇದಿಷ್ಟು ಹೋಮದ ಸಂಕ್ಷಿಪ್ತವಾದ ವರ್ಣನೆಯಾಗಿದೆ.



೫. ಶ್ರುತಗಣಧರರು

ಈ ಸಮಸ್ತಪದದಲ್ಲಿರುವ "ಶ್ರುತ" ಶಬ್ದವು "ಶ್ರು-ಶ್ರವಣೇ" ಎಂಬ ಧಾತುವಿನಿಂದುಂಟಾಗಿದೆ. ಈ ಶಬ್ದಕ್ಕೆ "ಕೇಳಲ್ಪಟ್ಟ" ಎಂದು ಅರ್ಥವಾಗುವುದಾದದರೂ ಜೈನಸಂಪ್ರದಾಯಾನುಸಾರವಾಗಿ ಇದಕ್ಕೆ ಶಾಸ್ತ್ರ-ಪರಮಾಗಮವೆಂದು ಅರ್ಥವಾಗಿರುವುದು. ಸಕಲಪ್ರಾಣಿಗಳಿಗೆ ಹಿತಬೋಧಕವೂ ಯಥಾರ್ಥ ವಿಷಯಗಳನ್ನು ಉಪದೇಶಿಸುವುದೂ ಮಿಥ್ಯಾವಾದಗಳನ್ನು ದೂರಮಾಡುವುದೂ ಪ್ರತ್ಯಕ್ಷಾನುಮಾನಾದಿ ಪ್ರಮಾಣಗಳಿಂದ ಅಬಾಧಿತವೂ ಆದ ಆಪ್ತ-ಸರ್ವಜ್ಞ-ಜಿನೇಶ್ವರರ ವಚನಸಮೂಹಕ್ಕೆ ಜಿನಾಗಮವೆಂದು ಹೆಸರು. ಇದು ಋಷಿಪರಂಪರೆಯಾಗಿ ಬಂದಿರುವುದಾದರೂ ಇದಕ್ಕೆ ಮೂಲಕರ್ತರು ಸರ್ವಜ್ಞ-ಜಿನೇಶ್ವರರಾಗಿರುತ್ತಾರೆ. ಇದಕ್ಕೆ ಜೈನಪರಮಾಗಮವೆಂದೂ ಹೆಸರಿದೆ. ಜೈನರಲ್ಲಿ ಜಿನೇಶ್ವರರಿಗೆ ಎಷ್ಟು ಪೂಜ್ಯತೆಯಿದೆಯೋ ಜಿನೇಶ್ವರ ವಾಣಿಯಾದ ಜಿನಾಗಮಕ್ಕೂ ಅಷ್ಟು ಪೂಜ್ಯತೆಯಿದೆ. ಆದುದರಿಂಲೇ ಜೈನರ ನಿತ್ಯ ಪೂಜಾ ನೈಮಿತ್ತಿಕಪೂಜಾಪ್ರಕರಣದಲ್ಲೆಲ್ಲ ಜಿನಾಗಮವನ್ನೂ ಪೂಜಿಸುವ ಪದ್ಧತಿಯಿದೆ. ಈ ಪೂಜೆಗೆ "ಶ್ರುತಪೂಜೆ" ಎಂದೂ ಹೆಸರಿದೆ.

ಸಾಮಾನ್ಯವಾಗಿ ಜೈನರು ದೇವರ ದರ್ಶನವನ್ನು ಮಾಡುವಾಗ ಅಕ್ಕಿಯ ಪುಂಜಗಳನ್ನಿಡುವ ಪದ್ಧತಿಯಿದೆ. ಅಂತಹ ಸಂದರ್ಭದಲ್ಲಿಯೂ ಪೂಜಾ ಸಂದರ್ಭದಲ್ಲಿಯೂ ಶ್ರುತ-ಪರಮಾಗಮಕ್ಕೆ ನಾಲ್ಕು ಪುಂಜಗಳನ್ನಿಡುತ್ತಾರೆ. ಹಾಗೆ ಶಾಸ್ತ್ರಕ್ಕೆ ನಾಲ್ಕು ಪುಂಜಗಳನ್ನೇ ಏಕಿಡಬೇಕು? ಹೆಚ್ಚು ಅಥವಾ ಕಡಿಮೆಯಾಗಿಡಬಾರದೇಕೆ? ಎಂಬ ವಿವರವು ಕೆಲವರಿಗೆ ಗೊತ್ತಿಲ್ಲದಿದ್ದರೂ ಅವರೂ ಶಾಸ್ತ್ರಕ್ಕೆ ಪುಂಜಗಳನ್ನೇನೋ ನಾಲ್ಕನ್ನೆ ಇಡುತ್ತಾರೆ. ಇದರ ಉದ್ದೇಶವು ಸಂಕ್ಷೇಪವಾಗಿ ಈ ಲೇಖದಲ್ಲಿ ವಿವರಿಸಲ್ಪಡುವುದು.

ವಿಷಯವಿಸ್ತಾರದ ದೃಷ್ಟಿಯಿಂದ ಜೈನವೇದ-ಆಗಮವು ಆಚಾರಾಂಗ, ಸೂತ್ರಕೃತಾಂಗ, ಸ್ಥಾನಾಂಗ, ಸಮವಾಯಾಂಗ, ವ್ಯಾಖ್ಯಾಪ್ರಜ್ಞಪ್ತ್ಯಂಗ,

ಜ್ಞಾತೃಧರ್ಮಕಥಾಂಗ, ಉಪಾಸಕಾಧ್ಯಯನಾಂಗ, ಅಂತಕೃದ್ದಶಾಂಗ, ಅನುತ್ತರೌಪಪಾದಿಕದಶಾಂಗ, ಪ್ರಶ್ನವ್ಯಾಕರಣಾಂಗ, ವಿಪಾಕಸೂತ್ರಾಂಗ, ದೃಷ್ಟಿವಾದಾಂಗಗಳೆಂದು ಹನ್ನೆರಡು ಪ್ರಕಾರವಾಗಿರುವುದಾದರೂ, ಆ ವಿಷಯಗಳನ್ನು ಸ್ಥೂಲವಾಗಿ ಸಂಗ್ರಹಿಸಿದರೆ ನಾಲ್ಕು ಮುಖ್ಯ ವಿಭಾಗ ಗಳಾಗಿರುವುವು. ಅವುಗಳಿಗೆ ಪ್ರಥಮಾನುಯೋಗ, ಕರಣಾನುಯೋಗ, ಚರಣಾನುಯೋಗ, ದ್ರವ್ಯಾನುಯೋಗಗಳೆಂದು ಹೆಸರು. ಪ್ರಥಮಾನು ಯೋಗವಲ್ಲಿ ತೀರ್ಥಂಕರರು ಮೊದಲಾದ ಮಹಾಪುರುಷರ ಪುರಾಣಗಳೂ ಒಬ್ಬೊಬ್ಬರ ಜೀವನಚರಿತವೂ ಅಡಕವಾಗಿರುವುವು. ಎರಡನೆಯ ಕರಣಾನು ಯೋಗದಲ್ಲಿ ಲೋಕ ಮತ್ತು ಅಲೋಕ ವಿಭಾಗವರ್ಣನವೂ ಉತ್ಸರ್ಪಿಣಿ, ಅವಸರ್ಪಿಣಿ, ಸುಷಮಸುಷಮಾದಿ ಯುಗಪರಿವರ್ತನೆಯ ವರ್ಣನವೂ ನರಕ ತಿರ್ಯಙ್ಮರ್ತ್ಯದೇವಗತಿಗಳ ವರ್ಣವೂ ಅಡಕವಾಗಿರುವುವು. ಮೂರ ನೆಯ ಚರಣಾನುಯೋಗದಲ್ಲಿ ಮುನಿಗಳ ಮತ್ತು ಗೃಹಸ್ಥರ ಆಚರಣೆಗಳು, ಅವುಗಳ ಉತ್ಪತ್ತಿಕ್ರಮ, ಅವುಗಳು ವೃದ್ಧಿಯಾಗುವ ಕ್ರಮ, ಅವುಗಳನ್ನು ಕಾಪಾಡುವ ರೀತಿ ಮೊದಲಾದ ವಿಷಯಗಳು ಅಡಕವಾಗಿರುವುವು. ನಾಲ್ಕನೆಯ ದ್ರವ್ಯಾನುಯೋಗದಲ್ಲಿ ಜೀವ ಮತ್ತು ಅಜೀವ ತತ್ತ್ವಗಳ ವರ್ಣನವೂ ಪುಣ್ಯಪಾಪಗಳ ಮತ್ತು ಬಂಧಮೋಕ್ಷಗಳ ವರ್ಣನವೂ ಅಡಕವಾಗಿರುವುವು. ಈ ಚತುರನುಯೋಗಗಳಲ್ಲಿ ಅಡಕವಾಗಿರುವ ವಿಷಯಗಳನ್ನು ವಿಸ್ತಾರವಾಗಿ ವರ್ಣಿಸುವಾಗ ಮೇಲೆ ಹೇಳಲ್ಪಟ್ಟ ದ್ವಾದಶಾಂಗಗಳ ವಿಭಾಗಕ್ರಮವನ್ನನುಸರಿಸುವುದಾಗಿದೆ.

ಹಿಂದುಗಳಿಗೆ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣ ವೇದಗಳೆಂಬ ನಾಲ್ಕು ವೇದಗಳು ಪೂಜ್ಯಗಳಾಗಿರುವಂತೆ, ಜೈನರಿಗೆ ಮೇಲೆ ಹೇಳಲ್ಪಟ್ಟ ನಾಲ್ಕು ಅನುಯೋಗಗಳು ಅಥವಾ ವೇದಗಳು ಪೂಜ್ಯಗಳಾಗಿರುತ್ತವೆ. ಆದುದರಿಂದಲೇ ಜೈನರು ದೇವದರ್ಶನ ಪೂಜಾ ಸಂದರ್ಭಗಳಲ್ಲಿ ಚತುರನುಯೋಗರೂಪವಾದ ಚತುರ್ವೇದಗಳ ಸಂಕ ಲ್ಪದಿಂದ ಅಕ್ಕಿಯ ನಾಲ್ಕು ಪುಂಜಗಳನ್ನಿಟ್ಟು ನಾಮನ್ಯಾಸ ಸ್ಥಾಪನಾ ನ್ಯಾಸಕ್ರಮದಿಂದ ಪೂಜಿಸುವುದಾಗಿದೆ. ೧. ಪ್ರಥಮಾನುಯೋಗ, ೨. ಕರಣಾನುಯೋಗ, ೩. ಚರಣಾನುಯೋಗ, ೪. ದ್ರವ್ಯಾನುಯೋಗ

ಗಳನ್ನು ಉದ್ದೇಶಿಸಿ ನಾಲ್ಕು ಪುಂಜಗಳನ್ನಿಟ್ಟು ಪೂಜಾಭಕ್ತಿ ವಿನಯಗಳನ್ನು ಮಾಡುವುದು ಪುಣ್ಯಹೇತುವೆಂಬುದನ್ನು ನೆನಪಿನಲ್ಲಿಟ್ಟಿರಬೇಕು.

ಇನ್ನು ಈ ಲೇಖದ ಶಿರೋನಾಮದಲ್ಲಿರುವ "ಗಣಧರ" ಎಂಬ ಎರಡನೆಯ ಶಬ್ದವು ವಿವೇಚಿಸಲ್ಪಡತಕ್ಕದಾಗಿದೆ. "ಗಣಧರ" ಎಂಬ ಪದದಲ್ಲಿರುವ "ಗಣ" ಶಬ್ದಕ್ಕೆ ಸಮೂಹವೆಂದೂ "ಧರ" ಶಬ್ದಕ್ಕೆ ಧರಿಸುವವನೆಂದೂ ಅರ್ಥ. ಪ್ರಕೃತದಲ್ಲಿ "ಗಣಧರ" ಎಂದರೆ ಮುನಿಸಮೂಹದ ಯಜಮಾನ ಅಥವಾ ಮುನಿಶ್ರೇಷ್ಠನೆಂದು ಅರ್ಥ. ಪ್ರತಿಯೊಬ್ಬ ತೀರ್ಥಂಕರರ ಸಮವಸರಣವೆಂಬ ವಿಹಾರಮಂಡಪದಲ್ಲಿ "ಗಣಧರ"ರೆಂಬ ಮುನಿಶ್ರೇಷ್ಠರು ಆಯಾ ತೀರ್ಥಂಕರರ ಪ್ರಮುಖ ಶಿಷ್ಯರಾಗಿರುತ್ತಾರೆ. ಅವರಲ್ಲದೆ ಸಮವಸರಣದಲ್ಲಿ ಇನ್ನೂ ಎಷ್ಟೋ ಮುನಿಗಳಿರುತ್ತಾರೆ. ಅವರಿಗೆಲ್ಲ "ಗಣಧರ"ರೆಂಬ ಮುನಿಶ್ರೇಷ್ಠರು ಮುಖ್ಯರಾಗಿರುತ್ತಾರೆ. ತೀರ್ಥಂಕರರನ್ನು ಪೂಜಿಸಿದನಂತರ ಅವರ ವಚನರೂಪವಾದ "ಶ್ರುತ" ವನ್ನೂ ಆ ಮೇಲೆ ಆ ತೀರ್ಥಂಕರರ ಶ್ರುತ-ವಚನವನ್ನು ಪ್ರಚಾರ ಮಾಡುವ ಶಿಷ್ಯರಾದ ಗಣಧರರನ್ನೂ ಪೂಜಿಸುವುದು ಕ್ರಮವಾಗಿದೆ. ಶ್ರುತಪೂಜೆಯಾದೊಡನೆಯೇ ಗಣಧರಪೂಜೆಯಾಗತಕ್ಕದಾಗಿದೆಯೆಂಬುದು "ಶ್ರುತಗಣಧರಪೂಜೆ" ಎಂಬ ಸಮಸ್ತಪದ ಪ್ರಯೋಗದಿಂದಲೂ ಸೂಚಿತವಾಗಿರುವುದು. ಗಣಧರಪೂಜೆಯಲ್ಲಿ ಇತರ ಮುನಿಪೂಜೆಯೂ ಸಮಾವಿಷ್ಟವಾಗುವುದು.

ದೇವದರ್ಶನ ಪೂಜಾಸಂದರ್ಭಗಳಲ್ಲಿ ಗಣಧರನನ್ನು ಕುರಿತು ಮೂರು ಪುಂಜಗಳನ್ನಿಡುವುದು ಕ್ರಮ ಅಥವಾ ಪದ್ಧತಿಯಾಗಿದೆ. ಅದರ ಉದ್ದೇಶವೇನೆಂದರೆ–"ಸಮ್ಯಗ್ದರ್ಶನ ಜ್ಞಾನ ಚಾರಿತ್ರಾಣಿ ಮೋಕ್ಷಮಾರ್ಗಃ" ಎಂಬ ಆರ್ಷವಚನಾನುಸಾರವಾಗಿ ತತ್ತ್ವಾರ್ಥಶ್ರದ್ಧಾನರೂಪವಾದ ಸಮ್ಯಗ್ದರ್ಶನವೂ ತತ್ತ್ವಾರ್ಥಜ್ಞಾನರೂಪವಾದ ಸಮ್ಯಗ್ಜ್ಞಾನವೂ ನಿರ್ದುಷ್ಟಾಚರಣರೂಪವಾದ ಸಮ್ಯಕ್ಚಾರಿತ್ರವೂ ಸೇರಿ ಮೋಕ್ಷಮಾರ್ಗವಾಗಿರುವುದು. ಸಮ್ಯಗ್ದರ್ಶನ ಜ್ಞಾನಚಾರಿತ್ರಗಳಿಗೆ ರತ್ನತ್ರಯವೆಂದೂ ಹೆಸರಿದೆ. ಈ ರತ್ನತ್ರಯದ ಪರಮೋಪಾಸಕರು ಅಥವಾ ಆರಾಧಕರು ಗಣಧರರು. ಅವರನ್ನು ಸಂಬೋಧಿಸಿ ಆಹ್ವಾನಾದಿಗಳನ್ನು ಮಾಡುವಾಗ

"ಸಮ್ಯಗ್ದರ್ಶನ ಜ್ಞಾನ ಚಾರಿತ್ರಪವಿತ್ರತರಗಾತ್ರ ಚತುರಶೀತಿಲಕ್ಷಗುಣಗಣ ಧರ" ಎಂದು ಹೇಳುವ ಕ್ರಮವಿದೆ. ಇದರಿಂದಲೂ ರತ್ನತ್ರಯವು ಗಣ ಧರರಿಗೆ ಹೆಗ್ಗುರುತೆಂದು ಸೂಚಿತವಾಗಿರುವುದು.

ಮೇಲೆ ಹೇಳಿರುವಂತೆ ರತ್ನತ್ರಯವು ಮೋಕ್ಷಕಾರಣವಾಗಿರುವುದ ರಿಂದಲೂ ಗಣಧರ-ಮುನಿಮುಖ್ಯರು ರತ್ನತ್ರಯದ ಪರಮಾರಾಧಕರಾಗಿ ರುವುದರಿಂದಲೂ ರತ್ನತ್ರಯವು ಅವರ ಹೆಗ್ಗುರುತಾಗಿರುವುದರಿಂದಲೂ ದೇವದರ್ಶನ ಪೂಜಾಸಂದರ್ಭಗಳಲ್ಲಿ ಗಣಧರರನ್ನು ಕುರಿತು ಸಂಖ್ಯಾನು ಕ್ರಮವಾಗಿ ೧. ಸಮ್ಯಗ್ದರ್ಶನ, ೨. ಸಮ್ಯಗ್ಜ್ಞಾನ, ೩. ಸಮ್ಯಕ್ಚಾರಿತ್ರ ಗಳನ್ನು ಉದ್ದೇಶಿಸಿ ಮೂರು ಪುಂಜಗಳನ್ನಿಟ್ಟು ನಾಮಸ್ಥಾಪನಾನ್ಯಾಸ ಭಾವನೆಯಿಂದ ಪೂಜಾಭಕ್ತಿ ವಿನಯಗಳನ್ನು ಮಾಡುವುದು ಪುಣ್ಯಹೇತು ವಾಗಿರುವುದು.

೬. ತೀರ್ಥಕ್ಷೇತ್ರಯಾತ್ರೆ

ತೀರ್ಥಶಬ್ದಕ್ಕೆ ಅನೇಕಾರ್ಥಗಳಿದ್ದರೂ ಪ್ರಕೃತಸಂದರ್ಭದಲ್ಲಿ ಇದಕ್ಕೆ ತೀರ್ಥಕರೆಂದೂ ಅವರು ಯಾವ ಭೂಪ್ರದೇಶದಲ್ಲಿ ಕರ್ಮಕ್ಷಯವನ್ನು ಮಾಡಿ ಮುಕ್ತಿಯನ್ನು ಪಡೆವರೋ ಆ ಭೂಪ್ರದೇಶಕ್ಕೆ "ತೀರ್ಥಕ್ಷೇತ್ರ"ವೆಂದೂ ಹೆಸರು. ತೀರ್ಥಕರರು ಕರ್ಮಕ್ಷಯವನ್ನು ಮಾಡಿದ ಭೂಪ್ರದೇಶಕ್ಕೆ "ತೀರ್ಥಕರಕ್ಷೇತ್ರ"ವೆಂದು ಹೆಸರಿರಬೇಕಲ್ಲದೆ "ತೀರ್ಥಕ್ಷೇತ್ರ"ವೆಂದು ಹೆಸರಿರಲು ಕಾರಣವಿಲ್ಲವೆಂದು ಕೆಲವರಿಗೆ ತೋರಬಹುದು. ಅದಕ್ಕೆ ಸಮಾಧಾನವೇನೆಂದರೆ—ತೀರ್ಥಕರ ಅಥವಾ ತೀರ್ಥಂಕರ ಶಬ್ದದ ಏಕದೇಶವಾದ "ತೀರ್ಥ" ಶಬ್ದವು ಕೆಲವು ಕಡೆಗಳಲ್ಲಿ ತೀರ್ಥಂಕರಾರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ. ಉದಾಹರಣೆಗಾಗಿ ಸುಪ್ರಭಾತಸ್ತೋತ್ರದಲ್ಲಿಯ "ಚತುರ್ವಿಂಶತಿತೀರ್ಥಾನಾಂ ಸುಪ್ರಭಾತಂ ದಿನೇ ದಿನೇ" ಎಂಬೀ ಭಾಗವನ್ನು ನೋಡಬಹುದು.

ಕರ್ಮಕ್ಷಯವನ್ನು ಮಾಡಿರುವ ಪವಿತ್ರಪರಮಾತ್ಮರು ಭಜಕರಿಗೆ ಪೂಜ್ಯರಾಗಿರುವಂತೆ, ಅವರು ಯಾವ ಕ್ಷೇತ್ರದಲ್ಲಿ ಕರ್ಮಕ್ಷಯವನ್ನು ಮಾಡಿದರೋ ಆ ಕ್ಷೇತ್ರವೂ ಪೂಜ್ಯವಾಗಿರುವುದು. ಪರುಷಮಣಿಯು ಅಥವಾ ಸಿದ್ಧರಸದ ಸ್ಪರ್ಶದಿಂದ ಕಬ್ಬಿಣವು ಭಂಗಾರವಾಗುವಂತೆ, ಆ ಕ್ಷೇತ್ರವೂ ಕಲ್ಲುಮಣ್ಣಿನದಾದರೂ ಪೂಜ್ಯರ ಸ್ಪರ್ಶದಿಂದ ಪೂಜ್ಯವಾಗುವುದೆಂದು ಭಾವವು. ಇದಕ್ಕೆ ಭಜಕರ ಮನೋಭಾವವು ಮುಖ್ಯ ಕಾರಣವಾಗಿದೆ.

ತೀರ್ಥ ಶಬ್ದಕ್ಕೆ ಮೇಲೆ ಹೇಳಿದ ಅರ್ಥವನ್ನೇ ಮಾಡುವುದಾದರೆ ಇತರ ಮುಕ್ತಾತ್ಮರು ಯಾವ ಪ್ರದೇಶದಿಂದ ಮುಕ್ತಿಯನ್ನು ಪಡೆದರೋ ಆ ಪ್ರದೇಶಕ್ಕೆ "ತೀರ್ಥಕ್ಷೇತ್ರ"ವೆಂಬ ಹೆಸರು ಬರುವುದಕ್ಕವಕಾಶವಿಲ್ಲವಾಯ್ತು. ಆದರೆ ಮಾಂಗಿ ತುಂಗಿ ಮೊದಲಾದ ಕ್ಷೇತ್ರಗಳಿಗೂ ತೀರ್ಥಕ್ಷೇತ್ರವೆಂಬ ಹೆಸರಿರುವುದರಿಂದ ಅಲ್ಲೇನು ಅರ್ಥ ಮಾಡಬೇಕೆಂಬ ಪ್ರಶ್ನೆ

ಯುಂಟಾಗುವುದು. ಅದಕ್ಕೆ ಸಮಾಧಾನವೇನೆಂದರೆ—ಮೇಲೆ ಹೇಳಿದಂತೆ ತೀರ್ಥ ಶಬ್ದಕ್ಕೆ ಅನೇಕಾರ್ಥಗಳಿರುವುದರಿಂದ ಪ್ರಕರಣಾನುಸಾರವಾಗಿ ಅಲ್ಲಿ ತೀರ್ಥ ಶಬ್ದಕ್ಕೆ ಪವಿತ್ರಾತ್ಮರೆಂದೂ ಅಂಥವರು ಕರ್ಮಕ್ಷಯವನ್ನು ಮಾಡಿರುವ ಭೂಪ್ರದೇಶಕ್ಕೆ ತೀರ್ಥಕ್ಷೇತ್ರವೆಂದೂ ಅರ್ಥ ಮಾಡಬೇಕು. ಮುಕ್ತಾತ್ಮರ ಪ್ರತಿಕೃತಿಗಳಿರುವ ಇತರ ಕ್ಷೇತ್ರಗಳಿಗೆ ಪುಣ್ಯಕ್ಷೇತ್ರಗಳೆಂದು ಹೆಸರು.

ಜೈನರ ವೃಷಭಾದಿ ಮಹಾವೀರಾಂತರಾದ ಇಪ್ಪತ್ತನಾಲ್ಕು ತೀರ್ಥಂಕರರಲ್ಲಿ ಮೊದಲನೆಯ ವೃಷಭ ತೀರ್ಥಂಕರರು ಕೈಲಾಸ ಪರ್ವತದಲ್ಲಿಯೂ ಹನ್ನೆರಡನೆಯ ವಾಸುಪೂಜ್ಯ ತೀರ್ಥಂಕರರು ಚಂಪಾಪುರದಲ್ಲಿಯೂ ಇಪ್ಪತ್ತೆರಡನೆಯ ನೇಮಿ ತೀರ್ಥಂಕರರು ಊರ್ಜಯಂತ ಗಿರಿಯಲ್ಲಿಯೂ ಇಪ್ಪತ್ತನಾಲ್ಕನೆಯ ಮಹಾವೀರ ತೀರ್ಥಂಕರರು ಪಾವಾಪುರದಲ್ಲಿಯೂ ಉಳಿದ ಇಪ್ಪತ್ತು ತೀರ್ಥಂಕರರು ಸಮ್ಮೇದಪರ್ವತ ಶಿಖರದಲ್ಲಿಯೂ ಮುಕ್ತರಾಗಿದ್ದಾರೆ. ಈ ಹುಂಡಾವಸರ್ಪಿಣೀ ಕಾಲದಲ್ಲಿ ಮೇಲೆ ಹೇಳಲ್ಪಟ್ಟ ನಾಲ್ಕು ತೀರ್ಥಂಕರರು ಬೇರೆ ಬೇರೆ ಸ್ಥಳಗಳಲ್ಲಿ ಮುಕ್ತರಾದರೂ ಅನಾದಿಕಾಲ ಪರಂಪರೆಯಲ್ಲಿ ಪ್ರತಿಯೊಂದು ಉತ್ಸರ್ಪಿಣ್ಯವಸರ್ಪಿಣೀ ಕಾಲಗಳಲ್ಲಿ ಇಪ್ಪತ್ತನಾಲ್ಕು ತೀರ್ಥಂಕರರೆಲ್ಲರೂ ಸಮ್ಮೇದಪರ್ವತ ಶಿಖರದಲ್ಲಿಯೇ ಮುಕ್ತರಾಗಿದ್ದಾರೆಂದು ಹೇಳಿದೆ. ಆದುದರಿಂದ ಜೈನರಿಗೆ ಎಲ್ಲಾ ತೀರ್ಥಕ್ಷೇತ್ರಗಳಿಗಿಂತ ಸಮ್ಮೇದ ಪರ್ವತವು ಸರ್ವೋತ್ಕೃಷ್ಟವಾದ ತೀರ್ಥಕ್ಷೇತ್ರವೆಂದು ಪರಿಗಣಿತವಾಗಿದೆ.

ಮೇಲೆ ಹೇಳಲ್ಪಟ್ಟ ತೀರ್ಥಕ್ಷೇತ್ರಗಳಲ್ಲಿ ವೃಷಭ ತೀರ್ಥಂಕರರು ಮುಕ್ತರಾದ ಕೈಲಾಸಪರ್ವತ ಶಿಖರದ ದರ್ಶನವು ಈಗ ಸಾಧ್ಯವಾಗುತ್ತಿಲ್ಲ. ಉಳಿದ ಎಲ್ಲಾ ತೀರ್ಥಕ್ಷೇತ್ರಗಳ ದರ್ಶನವು ಸಾಧ್ಯ. ಪೂರ್ವ ಕಾಲದಲ್ಲಿ ರೈಲ್ ಗಾಡಿಯ ಸೌಕರ್ಯವಿಲ್ಲದಿದ್ದಾಗ ಈ ತೀರ್ಥಕ್ಷೇತ್ರಗಳ ಯಾತ್ರೆಯನ್ನು ಮಾಡುವುದು ಬಹು ಕಷ್ಟವಾಗಿತ್ತು. ಆರಾರು ಎಂಟೆಂಟು ತಿಂಗಳ ಕಾಲ ಭಕ್ತ ಜನರು ಕಾಲ್ನಡಿಗೆಯಿಂದ ಪ್ರಯಾಣ ಮಾಡಿ ವಿಶೇಷ ಧನವ್ಯಯದಿಂದಲೂ ದೇಹಶ್ರಮದಿಂದಲೂ ಯಾತ್ರೆಯನ್ನು ಮಾಡಿಕೊಂಡು ಬರುತ್ತಿದ್ದರು. ಈಗಿನ ಕಾಲದಲ್ಲಿ ರೈಲ್ ಪ್ರಯಾಣ

ಸೌಕರ್ಯವಿರುವುದರಿಂದ ಸ್ವಲ್ಪ ಕಾಲದಲ್ಲಿ ಯಾತ್ರೆಯಾಗುವುದು. ದೇಹ ಶ್ರಮವೂ ಧನವ್ಯಯವೂ ಮೊದಲಿನಷ್ಟಾಗುವುದಿಲ್ಲ. ಮೊದಲಿನವರಷ್ಟು ದೇಹದಾರ್ಢ್ಯವೂ ಧನಬಲವೂ ದೀರ್ಘಜೀವಿತ್ವವೂ ಈಗಿನವರಿಗಿಲ್ಲವಾದುದರಿಂದ ಅವುಗಳ ಉಳಿತಾಯವು ಕಾಲಕ್ಕೆ ತಕ್ಕಂತೆ ಈಗ ಅಪೇಕ್ಷಣೀಯವಾಗಿದೆ.



೭. ದೇವರ ವಿಗ್ರಹಗಳ ಉಪಯೋಗಿತೆ

ಪರಿಶುದ್ಧಪರಮಾತ್ಮನಾದ ದೇವರ ಆಕಾರವೂ ಸ್ಥಾನವೂ ನಮ್ಮಗಳಿಗೆ ಅತ್ಯಂತ ಪರೋಕ್ಷಗಳಾಗಿದ್ದು ಅವುಗಳ ಸಾಕ್ಷಾತ್ಕಾರವಾಗದಿರುವುದರಿಂದ ದೇವಪ್ರತಿಕೃತಿಗಳನ್ನು ವಿಗ್ರಹಗಳನ್ನು ನಿರ್ಮಿಸಿ, ಅವುಗಳಲ್ಲಿ ದೇವರ ಹೆಸರನ್ನೂ ಭಾವವನ್ನೂ ಶಾಸ್ತ್ರೀಯವಾಗಿ ಸ್ಥಾಪಿಸಿ ನಮ್ಮಗಳ ಭಕ್ತಿಪೂಜಾಸ್ತೋತ್ರಾದಿಗಳನ್ನು ದೇವರಿಗೆ ಸಲ್ಲಿಸುತ್ತಿರುವುದಾಗಿದೆ.

ನಮ್ಮಗಳ ಚಂಚಲವಾದ ಮನಸ್ಸು, ಮರದಿಂದ ಮರಕ್ಕೆ ಹಾರಾಡುವ ಮರ್ಕಟದಂತೆ, ಶುಭಾಶುಭವಿಷಯಗಳಲ್ಲಿ ವಿಷಯದಿಂದ ವಿಷಯಾಂತರಕ್ಕೆ ಹಾರಾಡುತ್ತಿರುವುದು. ಮನಸ್ಸು ಶುಭವಿಷಯದಲ್ಲಿ ಪ್ರವರ್ತಿಸಿದರೆ ಶುಭಮನಸ್ಸಾಗಿಯೂ ಅಶುಭ ವಿಷಯದಲ್ಲಿ ವರ್ತಿಸಿದರೆ ಅಶುಭಮನಸ್ಸಾಗಿಯೂ ಮಾರ್ಪಡುವುದು. ಹೀಗೆ ಮನಸ್ಸಿನಲ್ಲಿ ಶುಭಾಶುಭರೂಪವಾದ ಔಪಾಧಿಕಗುಣಗಳ ಮಾರ್ಪಾಟಿಗೆ ಶುಭಾಶುಭ ವಿಷಯಗಳೇ ಕಾರಣ. ಹೇಗೆಂದರೆ:—

ನೀರು ಯಾವ ಭೂಮಿಯಲ್ಲಿ ಹರಿಯುವುದೋ ಆ ಭೂಗುಣಕ್ಕನುಸಾರವಾಗಿ ಅದರ ಔಪಾಧಿಕಗುಣವು ಬದಲಾಗುತ್ತಿರುವುದು. ನೀರು ಕ್ಷಾರಭೂಮಿಯಲ್ಲಿ ಹರಿದರೆ ಕ್ಷಾರವಾಗಿಯೂ ಅಶುಚಿಭೂಮಿಯಲ್ಲಿ ಹರಿದರೆ ಅಶುಚಿಯಾಗಿಯೂ ಶುಚಿಭೂಮಿಯಲ್ಲಿ ಹರಿದರೆ ಶುಚಿಯಾಗಿಯೂ ಮಧುರ ಭೂಮಿಯಲ್ಲಿ ಹರಿದರೆ ಮಧುರವಾಗಿಯೂ ಪವಿತ್ರಭೂಮಿಯಲ್ಲಿ ಹರಿದರೆ ಪವಿತ್ರತೀರ್ಥವಾಗಿಯೂ ಮಾರ್ಪಡುವುದು.

ಶುಚಿ ಶಬ್ದವು ನಪುಂಸಕಲಿಂಗ ಶಬ್ದಕ್ಕೆ ವಿಶೇಷಣವಾದಾಗ ನಪುಂಸಕಲಿಂಗವಾಗಿಯೂ ಸ್ತ್ರೀಲಿಂಗಶಬ್ದಕ್ಕೆ ವಿಶೇಷಣವಾದಾಗ ಸ್ತ್ರೀಲಿಂಗಶಬ್ದ

ವಾಗಿಯೂ ಪುಲ್ಲಿಂಗ ಶಬ್ದಕ್ಕೆ ವಿಶೇಷಣವಾದಾಗ ಪುಲ್ಲಿಂಗ ಶಬ್ದವಾಗಿಯೂ ಮಾರ್ಪಡುವುದು. ಉದಾಹರಣವಾಗಿ—

ಶುಚಿ ಭೂಮಿಗತಂ ತೋಯಂ ಶುಚಿರ್ನಾರೀ ಪತಿವ್ರತಾ ।
ಶುಚಿರ್ಧರ್ಮಪರೋ ರಾಜಾ ಬ್ರಹ್ಮಚಾರೀ ಸದಾ ಶುಚಿಃ ॥

ಶುಭಾಶುಭವಿಷಯಗಳ ಅವಲಂಬನದಿಂದ ಮನಸ್ಸು ಶುಭಾಶುಭರೂಪವಾಗಿ ಪರಿಣಮಿಸುವುದೆಂದು ಮೇಲೆ ಹೇಳಲ್ಪಟ್ಟಿರುವ ಮಾತು ಈ ಉದಾಹರಣಗಳಿಂದಲೂ ವಿಶದವಾಗುವುದು. ಹೀಗೆ ಶುಭವಿಷಯಾವಲಂಬನದಿಂದ ಶುಭರೂಪವಾಗಿ ಪರಿಣತವಾದ ಮನಸ್ಸಿನಿಂದ ಆತ್ಮನಿಗೆ ಪುಣ್ಯಬಂಧವೂ ಅಶುಭವಿಷಯಾವಲಂಬನದಿಂದ ಅಶುಭರೂಪವಾಗಿ ಪರಿಣತವಾದ ಮನಸ್ಸಿನಿಂದ ಆತ್ಮನಿಗೆ ಪಾಪಬಂಧವೂ ಆಗುವುದು. ಮನಸ್ಸು ಓಡಾಡತಕ್ಕ ಶುಭಾಶುಭವಿಷಯರೂಪವಾದ ಕ್ಷೇತ್ರವು ಬಹು ವಿಶಾಲವಾಗಿದೆ. ಅಂದರೆ ಮನಸ್ಸಿಗೆ ಅವಲಂಬನವಾಗುವ ಶುಭಾಶುಭವಿಷಯಗಳು ವಿಶ್ವದಲ್ಲಿ ಅನಂತವಾಗಿವೆ.

ಪಾಪವು ಆತ್ಮನಿಗೆ ದುಃಖಕ್ಕೂ ಪುಣ್ಯವು ಸುಖಕ್ಕೂ ಕಾರಣಗಳಾಗಿರುತ್ತವೆ. ಅಶುಭ ಮನಸ್ಸಿನಿಂದ ಪಾಪಬಂಧವೂ ಶುಭಮನಸ್ಸಿನಿಂದ ಪುಣ್ಯಬಂಧವೂ ಆಗುತ್ತವೆಂದೂ ಮನಸ್ಸು ಅಶುಭವೆನ್ನಿಸುವುದಕ್ಕೆ ಅಶುಭವಿಷಯಗ್ರಹಣವೂ ಶುಭವೆನ್ನಿಸುವುದಕ್ಕೆ ಶುಭವಿಷಯ ಗ್ರಹಣವೂ ಕಾರಣಗಳೆಂದೂ ಹಿಂವೆ ಹೇಳಿದೆ. ಈ ವಿಷಯಗಳನ್ನು ವ್ಯತ್ಯಸ್ತವಾಗಿ ಹೇಳುವುದಾದರೆ ಅಶುಭವಿಷಯ ಗ್ರಹಣವು ಅಶುಭ ಮನಸ್ಸಿಗೂ ಅಶುಭಮನಸ್ಸು ಪಾಪಬಂಧಕ್ಕೂ ಪಾಪಬಂಧವು ದುಃಖಕ್ಕೂ ಕಾರಣಗಳಾಗಿವೆ. ಹಾಗೆಯೇ ಶುಭವಿಷಯ ಗ್ರಹಣವು ಶುಭಮನಸ್ಸಿಗೂ ಶುಭಮನಸ್ಸು ಪುಣ್ಯಬಂಧಕ್ಕೂ ಪುಣ್ಯಬಂಧವು ಸುಖಕ್ಕೂ ಕಾರಣಗಳಾಗಿವೆ.

ತ್ಯಜಿಸುವುದಕ್ಕೆ ಯೋಗ್ಯವಾದ ಅಶುಭ ವಿಷಯಕ್ಕೆ ಹೇಯವೆಂದೂ ಪರಿಗ್ರಹಿಸುವುದಕ್ಕೆ ಯೋಗ್ಯವಾದ ಶುಭ ವಿಷಯಕ್ಕೆ ಉಪಾದೇಯವೆಂದೂ ಹೆಸರು. ಈ ಹೇಯೋಪಾದೇಯ ವಿಷಯಗಳ ವಿವೇಚನೆಯನ್ನು ಮಾಡುವ ಜ್ಞಾನಕ್ಕೆ ವಿವೇಕವೆಂದು ಹೆಸರಿರುವುದಾದರೂ ಇದಕ್ಕೆ ತಾತ್ಪರ್ಯವು ಹೇಯ ವಿಷಯವನ್ನು ಬಿಟ್ಟು ಉಪಾದೇಯ ವಿಷಯವನ್ನು

ಪರಿಗ್ರಹಿಸುವುದೆಂದು ರೂಢಿಯಲ್ಲಿರುವುದು. ಇಂತಹ ವಿವೇಕವುಳ್ಳವನಿಗೆ ವಿವೇಕಿಯೆಂದು ಹೆಸರು. ಯಾವುದೊಂದು ಜೀವವೂ ದುಃಖವನ್ನು ಬಯುಸದೆ ಸುಖವನ್ನೇ ಬಯುಸುವುದಾದರೂ ಪ್ರಬಲಕರ್ಮಪರತಂತ್ರತೆಯಿಂದ ದುಃಖಸಾಧನವನ್ನು ಸುಖಸಾಧನವನ್ನಾಗಿ ಭ್ರಮಿಸಿ ಅದನ್ನು ಪರಿಗ್ರಹಿಸುವುದೂ ಉಂಟು. ವಿವೇಕಿಯಾದ ಮನುಷ್ಯನು ನಿಯತ ಕಾಲದಲ್ಲಾದರೂ ಅಶುಭ-ಹೇಯ ವಿಷಯಗಳಿಂದ ಮನೋವ್ಯಾಪಾರವನ್ನು ನಿವೃತ್ತಿಗೊಳಿಸಿ ಶುಭ-ಉಪಾಧೇಯ ವಿಷಯುಗಳಲ್ಲಿ ಪ್ರವೃತ್ತಿಗೊಳಿಸಿದರೆ ಅದು ವಿವೇಕದ ಸಾರ್ಥಕ್ಯ. ಅದರಿಂದ ಪುಣ್ಯಬಂಧವಾಗಿ ಸುಖಪ್ರಾಪ್ತಿಯಾಗುವುದೆಂಬುದು ಸಿದ್ಧಾಂತ.

ಮೇಲೆ ಹೇಳಲ್ಪಟ್ಟ ಶುಭ ವಿಷಯುಗಳಲ್ಲೆಲ್ಲ ಉತ್ಕೃಷ್ಟವಾದ ಶುಭ ವಿಷಯುವೆಂದರೆ ದೇವರ ವಿಗ್ರಹ. ಕರ್ಮಗಳನ್ನು ಜಯಿಸಿ ಅನಂತ ಜ್ಞಾನಾದಿ ಗುಣಗಳನ್ನು ಹೊಂದಿರುವ ಪರಿಶುದ್ಧ ಪರಮಾತ್ಮನಿಗೆ ಜಿನನೆಂದು ಹೆಸರು. ಅಂತಹ ಜಿನ ವಿಗ್ರಹಕ್ಕೆ "ಚಿತೋಭಾವಶ್ಚೈತ್ಯಂ" ಎಂಬ ವ್ಯುತ್ಪತ್ತ್ಯನುಸಾರವಾಗಿ ಪರಿಶುದ್ಧವಾದ ಚಿತ್ತಿನ ಅಂದರೆ ಪರಮಾತ್ಮನ ಭಾವಕ್ಕೆ ಚೈತ್ಯವೆಂದು ಹೆಸರು. ಕೆಲವರು "ಚಿತಾಯಾ ಭಾವಶ್ಚೈತ್ಯಂ" ಎಂದು ವ್ಯುತ್ಪತ್ತಿಯನ್ನು ಮಾಡುವುದುಂಟು. ಅದು ತಪ್ಪು. ಜೈನರಿಗೆ ಪರಮಪವಿತ್ರವಾದ ನವದೇವತಾ ಸಮೂಹದಲ್ಲಿ ಜಿನಚೈತ್ಯವು ಎಂಟನೆಯ ದೇವತೆಯಾಗಿದೆ. ಈ ಜಿನಚೈತ್ಯವಿರುವ ಆಲಯಕ್ಕೆ ಜಿನಚೈತ್ಯಾಲಯುವೆಂದು ಹೆಸರು. ದೇವರ ವಿಗ್ರಹವನ್ನು ಮಾಡಿಸಿ ಪ್ರತಿಷ್ಠಾಶಾಸ್ತ್ರ ವಿಧಿಪೂರ್ವಕವಾಗಿ ಅದನ್ನು ಶುದ್ಧ ಮಾಡಿ ಜಿನಚೈತ್ಯಾಲಯುದಲ್ಲಿ ಪ್ರತಿಷ್ಠಿಸುವುದು ಶಾಸ್ತ್ರಪದ್ಧತಿಯಾಗಿದೆ. ಹೀಗೆ ಪ್ರತಿಷ್ಠಿತವಾದ ಅಂದರೆ ಶಾಸ್ತ್ರವಿಧಿಗನುಸಾರವಾಗಿ ಶುದ್ಧ ಮಾಡಲ್ಪಟ್ಟ ವಿಗ್ರಹಗಳಿಗೆ ಪ್ರತಿದಿನವೂ ಪೂಜೆ ನಡೆಯಬೇಕೆಂಬ ವಿಧಿಯಿದೆ. ಹಾಗೆ ಪೂಜೆ ನಡೆಯದೆ ಹೋದರೆ ಆ ವಿಗ್ರಹಗಳಿಗೆ ಪುನಃ ಸಂಪ್ರೋಕ್ಷಣೆಯಾಗಬೇಕೆಂಬ ಶಾಸ್ತ್ರವಿಧಿಯೂ ಪದ್ಧತಿಯೂ ಇರುತ್ತದೆ. ಇಲ್ಲಿ ನಾವು ಮುಖ್ಯವಾಗಿ ವಿಚಾರ ಮಾಡಬೇಕಾದ ವಿಷಯುವಾವುದೆಂದರೆ-ನಮ್ಮ ದಕ್ಷಿಣ ದೇಶದಲ್ಲಿ ಕೆಲವು ಜೈನ ದೇವಾಲಯುಗಳಲ್ಲಿ ನೂರಾರು ವಿಗ್ರಹಗಳು ಪೂಜಾಪ್ರಕ್ಷಾಲನಾದಿಗಳಿ

ಲ್ಲದೆ ಕಿಲುಬು ಕೊಳೆ ಹಿಡಿದಿರುವುದುಂಟು. ಇಂತಹ ವಿಗ್ರಹಗಳಿಗೆ ನಿತ್ಯ ಪೂಜಾದಿಗಳಿಲ್ಲದಿರುವುದರಿಂದ ಇವುಗಳಿಗೆ ಪುನಃ ಸಂಪ್ರೋಕ್ಷಣೆಯ ಆವಶ್ಯಕತೆಯಿಲ್ಲವೇ? ಹೀಗೆ ಪ್ರತಿದಿನ ಪೂಜಾಪ್ರಕ್ಷಾಲನಾದಿಗಳಿಲ್ಲದೆ ದೇವರ ವಿಗ್ರಹಗಳನ್ನು ಇಟ್ಟುಕೊಂಡರೆ ದೇವರಿಗೆ ಅವಿನಯವನ್ನು ಮಾಡಿದ ದೋಷವು ಬರುವುದಿಲ್ಲವೇ? ಎಂದು ಉತ್ತರ ಹಿಂದುಸ್ಥಾನದ ಕೆಲವು ಜೈನಬಾಂಧವರು ಪ್ರಶ್ನೆ ಮಾಡುವರು. ಉತ್ತರ ಹಿಂದುಸ್ಥಾನದಲ್ಲಾದರೋ ಪ್ರತಿದಿನವೂ ದೇವರ ವಿಗ್ರಹಗಳನ್ನು ಪ್ರಕ್ಷಾಲಿಸಿ ಪೂಜಿಸುವ ಪದ್ಧತಿಯನ್ನಿಟ್ಟುಕೊಂಡಿದ್ದಾರೆ.

ಮೇಲೆ ಹೇಳಿದಂತೆ ನಮ್ಮ ದಕ್ಷಿಣ ದೇಶದ ಕೆಲವು ಜೈನ ದೇವಾಲಯಗಳಲ್ಲಿ ಅನೇಕ ಜಿನವಿಗ್ರಹಗಳಿಗೆ ಪೂಜಾಪ್ರಕ್ಷಾಲನಾದಿಗಳಿಲ್ಲದಿದ್ದರೂ ಹೊಸಹೊಸದಾಗಿ ನಿರ್ಮಿತವಾಗುವ ಜೈನ ದೇವಾಲಯಗಳಿಗಾದರೂ ಅಂತಹ ವಿಗ್ರಹಗಳನ್ನು ಕೊಡುವ ವಾಡಿಕೆಯು ನಮ್ಮಲ್ಲಿಲ್ಲ. ನೂತನ ಬಿಂಬಗಳಿಗಾಗಿ ನೂರಾರು, ಸಾವಿರಾರು ರೂಪಾಯಿಗಳನ್ನು ಸಮಾಜವು ವೆಚ್ಚ ಮಾಡುತ್ತಿರುವುದು. ಇದಕ್ಕೆ ಬದಲಾಗಿ ಹೆಚ್ಚಾಗಿ ವಿಗ್ರಹಗಳಿರುವ ದೇವಾಲಯಗಳಿಂದ ನೂತನ ದೇವಾಲಯಕ್ಕೆ ಬೇಕಾದ ವಿಗ್ರಹಗಳನ್ನು ಕೊಟ್ಟರೆ ಈ ಆರ್ಥಿಕ ದುಸ್ಥಿತಿಯ ಕಾಲದಲ್ಲಿ ಸಮಾಜದ ಎಷ್ಟೋ ದ್ರವ್ಯವು ಉಳಿತಾಯವಾಗುವುದು. ಅಲ್ಲದೆ ಆ ನೂತನ ದೇವಾಲಯಕ್ಕೆ ಕೊಡಲ್ಪಡುವ ಪುರಾತನ ವಿಗ್ರಹಗಳಿಗೆ ಯಥೋಚಿತವಾಗಿ ಪ್ರತಿಫಲ ದ್ರವ್ಯವನ್ನು ತೆಗೆದುಕೊಂಡು ಅದನ್ನು ಆಯಾ ಪುರಾತನ ದೇವಾಲಯಗಳ ಜೀರ್ಣೋದ್ಧಾರಾದಿ ಕಾರ್ಯಗಳಿಗೆ ಉಪಯೋಗಿಸಬಹುದು.

೮. ಸಾಹಿತ್ಯೋದ್ಧಾರ

ಒಂದು ಕಾಲದಲ್ಲಿ ನಮ್ಮ ದಿಗಂಬರ ಜೈನಶಾಖೆಗೆ ಹಸ್ತಾವಲಂಬನ ಕೊಟ್ಟು ಇದನ್ನು ಕಾಪಾಡಿ ಬೆಳೆಸಿದುದು ನಮ್ಮ ದಕ್ಷಿಣಭಾರತ. ದಿಗಂಬರ ಸಂಪ್ರದಾಯಕ್ಕೆ ಸೇರಿದ ಪ್ರಧಾನ ಪ್ರಧಾನ ಆಚಾರ್ಯರೆಲ್ಲಾ ಪ್ರಾಯಃ ದಾಕ್ಷಿಣಾತ್ಯರು. ಅದರಲ್ಲೂ ಕರ್ಣಾಟಕ ನಿವಾಸಿಗಳ ಸಂಖ್ಯೆಯು ಅತ್ಯಧಿಕ. ಭೂತಬಲಿ, ಪುಷ್ಪದಂತ, ಕುಂದಕುಂದ, ಸಮಂತಭದ್ರ, ಪೂಜ್ಯಪಾದ, ವೀರಸೇನ, ಜಿನಸೇನ, ಗುಣಭದ್ರ, ಅಕಲಂಕ, ನೇಮಿಚಂದ್ರ ವಾದೀಭಸಿಂಹ, ವಿದ್ಯಾನಂದಿ, ಮಹಾವೀರ, ಪುಷ್ಪದಂತ (ದ್ವಿತೀಯ) ಸೋಮದೇವ, ಶ್ರೀಪಾಲ ಮೊದಲಾದ ಸಂಸ್ಕೃತ ಪ್ರಾಕೃತಾದಿ ಗ್ರಂಥಗಳ ಪ್ರಣೇತರೂ, ದಿಗಂಬರ ಸಂಪ್ರದಾಯಕ್ಕೆ ಸ್ತಂಭಸ್ವರೂಪರೂ ಆದ ಈ ದಿಗ್ಗಜ ಪ್ರಮುಖ ವಿದ್ವಾಂಸರು ದಾಕ್ಷಿಣಾತ್ಯರೇ ಆಗಿರುತ್ತಾರೆ. ಕೆಲವು ಶತಮಾನಗಳವರೆಗೆ ನಿಜವಾಗಿ ದಕ್ಷಿಣಭಾರತವು ದಿಗಂಬರ ಜೈನಸಂಪ್ರದಾಯದ ಕ್ರೀಡಾಭೂಮಿಯಾಗಿತ್ತು. ಇಲ್ಲಿಯ ಸಂಸ್ಕೃತಿಯಲ್ಲಿ ಜೈನಸಂಸ್ಕೃತಿಯ ಪ್ರಭಾವವು ಒಡೆದು ಕಾಣುವುದು. ಈ ಮಾತನ್ನು ನಿಷ್ಪಕ್ಷಪಾತಿಗಳಾದ ಜೈನೇತರ ವಿದ್ವಾಂಸರೂ ಒಪ್ಪುತ್ತಾರೆ.

ಹಿಂದೆ ಜೈನಧರ್ಮದ ಪ್ರಭಾವವು ಕುಗ್ಗಿದಾಗ ಸುಮಾರು ಎಂಟನೆಯ ಶತಮಾನದಿಂದ ಹಿಂದುಧರ್ಮದ ಪ್ರಭಾವವು ಜೈನಧರ್ಮದ ಮೇಲೆ ಬಿತ್ತೆಂಬುದನ್ನು ನಾವು ಒಪ್ಪಲೇ ಬೇಕು. ಹಾಗೆ ಒಪ್ಪದಿರುವುದು ಇತಿಹಾಸದ ಸಂಬಂಧದಲ್ಲಿ ತಮ್ಮ ಅನಭಿಜ್ಞತೆಯನ್ನು ವ್ಯಕ್ತಮಾಡುವುದೇ ಸರಿ. ಪ್ರಬಲರಾಜಾಶ್ರಯವು ತಪ್ಪಿ ವೀರಶೈವ ಶ್ರೀವೈಷ್ಣವ ಮೊದಲಾದ ಧರ್ಮಗಳು ಬೆಳೆದುದೇ ಹೀಗಾಗುವುದಕ್ಕೆ ಕಾರಣವಾಯಿತು. ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶೈವ- ಈ ಸಂಪ್ರದಾಯಗಳು ಪ್ರಬಲಿಸಿದಾಗ ಆ

ಸಂಪ್ರದಾಯುಗಳ ಪ್ರಭಾವದಿಂದ ಜೈನಧರ್ಮಕ್ಕೆ ತನ್ನನ್ನು ಅಕ್ಷುಣ್ಣವಾಗಿ ಕಾಪಾಡಿಕೊಳ್ಳುವುದು ಬಹಳ ಕಷ್ಟವಾಯಿತು. ಆದುದರಿಂದಲೇ ಶ್ರೀ ಸಮಂತಭದ್ರರಂತಹ ಪ್ರಮುಖ ಸುಪ್ರಾಚೀನ ಆಚಾರ್ಯರು ಯಾವ ಕೆಲವು ಆಚರಣೆಗಳನ್ನು ಲೋಕಮೂಢವೇ ಮೊದಲಾದ ಹೆಸರಿನಿಂದ ಉಲ್ಲೇಖಿಸಿರುವರೋ ಅವನ್ನೇ ಹಿಂದಿನ ಜೈನರು ಸಹರ್ಷ ಕೈಗೊಳ್ಳಬೇಕಾಯಿತು. ಆದರೆ ಈ ಪರಿವರ್ತನೆಯು ನಮಗೆ ಪ್ರಾಯಃ ಕರ್ಮಕಾಂಡದಲ್ಲಿಯೇ ಹೆಚ್ಚಾಗಿ ಕಾಣಸಿಗುವುದು. ಇದಕ್ಕಾಗಿ ನಾವು ಶ್ರದ್ಧೇಯ ಆಚಾರ್ಯರನ್ನು ದೂರುವುದು ದೊಡ್ಡ ತಪ್ಪು. ಅಂತಹ ವಿಕಟಪರಿಸ್ಥಿತಿಯಲ್ಲಿ ಅವರು ಹಾಗೆ ಮಾಡದಿರುತ್ತಿದ್ದರೆ ದಕ್ಷಿಣಭಾರತದಲ್ಲಿ ಜೈನಧರ್ಮದ ಗೌರವವು ಪೂರ್ವವತ್ ಉಳಿಯುವುದು ಅಸಂಭವವಾಗಿತ್ತು. ಪ್ರತಿಯೊಂದು ಧರ್ಮವೂ ದೇಶಕಾಲಾದಿಗಳ ಪ್ರಭಾವವನ್ನು ಅಳಿಸಲಾರದು.

ಒಂದು ಧರ್ಮದ ಮೇಲೆ ತತ್ಕಾಲೀನ ಬೇರೊಂದು ಪ್ರಬಲ ಧರ್ಮದ ಪ್ರಭಾವವು ಬೀಳುವುದು ಸರ್ವಥಾ ಸ್ವಾಭಾವಿಕ. ಹಿಂದು ಧರ್ಮದ ಮೇಲೆ ಜೈನರ ಅಹಿಂಸಾದಿ ಧರ್ಮಗಳ ಪ್ರಭಾವವು ಬಿದ್ದಿಲ್ಲವೇ? ಸಮ್ಯಕ್ತ್ವಕ್ಕೆ ಕೊರತೆ ಬಾರದಂತಹ ಲೌಕಿಕ ಆಚರಣೆಗಳನ್ನು ಜೈನರು ಸಹರ್ಷ ಆದರಿಸಬಹುದೆಂದು ಸೋಮದೇವರೇ ಮೊದಲಾದ ಮಾನ್ಯ ಆಚಾರ್ಯರು ಸ್ಪಷ್ಟವಾಗಿ ಅಪ್ಪಣೆ ಕೊಟ್ಟಿರುತ್ತಾರೆ. ಇರಲಿ, ಇದು ವಿಷಯಾಂತರ. ಮೇಲೆ ಹೇಳಿದ ಪ್ರಧಾನ ದಿಗಂಬರಾಚಾರ್ಯರು ದಕ್ಷಿಣಭಾರತದಲ್ಲಿ ಜನ್ಮವನ್ನು ಪಡೆದು ದಿಗಂಬರ ಸಾಹಿತ್ಯವನ್ನು ಸೃಷ್ಟಿಸಿ ಅದನ್ನು ಬಳೆಸದಿರುತ್ತಿದ್ದರೆ, ಇಂದು ಬೇರೆ ಬೇರೆ ಭಾರತೀಯ ಲುಪ್ತ ಧರ್ಮಗಳಂತೆ ಜೈನಧರ್ಮವೂ ಲುಪ್ತವಾಗಿ ಹೋಗುತ್ತಿತ್ತು. ಯಾವ ಧರ್ಮವೂ ವಿಪುಲಸಾಹಿತ್ಯದ ಹೊರತು ದೀರ್ಘಕಾಲ ಜೀವಿಸಿರಲಾರದೆಂಬುದು ನಿರ್ವಿವಾದವಾದ ಮಾತು. ಇದು ದಾಕ್ಷಿಣಾತ್ಯ ಜೈನರಿಗೆ ನಿಜವಾಗಿ ಒಂದು ಹೆಮ್ಮೆಯ ವಿಷಯ. ಈ ಪೈತೃಕಸಾಹಿತ್ಯಸಂಪತ್ತಿಯಂತಹ ಅಮೂಲ್ಯ ಮತ್ತು ಅಲಭ್ಯನಿಧಿಯನ್ನು ಕಾಪಾಡಿದುದಕ್ಕಾಗಿ ಉತ್ತರಭಾರತದ ದಿಗಂಬರ ಜೈನಸಮಾಜವು ದಕ್ಷಿಣಭಾರತದ ದಿಗಂಬರ ಜೈನಸಮಾಜಕ್ಕೆ ಸದೈವ ಋಣಿಯಾಗಿರಲೇಬೇಕು.

ಆದರೆ ಅರ್ವಾಚೀನರಾದ ನಮ್ಮ ಪ್ರಮಾದದಿಂದ ಆ ಅಮೂಲ್ಯ ಸಾಹಿತ್ಯ ನಿಧಿಯು ಗೆದ್ದಲುಗಳ ಆಹಾರವಾಗುತ್ತಿರುವುದು ಅಧಿಕದುಃಖ ವನ್ನುಂಟುಮಾಡುವ ಮಾತು. ನಮ್ಮವರಿಗೆ ಎಳ್ಳಷ್ಟೂ ಅದರ ಗೊಡ ವೆಯೇ ಇಲ್ಲ. ನಮ್ಮಲ್ಲಿ ಇದುವರೆಗೆ ಪ್ರಕಟವಾಗಿರುವ ಗ್ರಂಥಗಳ ಲ್ಲಿಯೂ ಬಹುಭಾಗ ಗ್ರಂಥಗಳು ಸಾಹಿತ್ಯಪ್ರೇಮಿಗಳಾದ ಜೈನೇತರ ವಿದ್ವಾಂಸರ ಪ್ರಯತ್ನದಿಂದಲೇ ಪ್ರಕಟವಾಗಿರುವುವುಗಳು. ಕರ್ನಾಟಕ ಪ್ರಾಂತದ ಹಳ್ಳಿಗಳಲ್ಲಿ ಹುಡುಕಿದರೆ ಈಗಲೂ ಸಾವಿರಾರು ಅಲಭ್ಯ-ದುರ್ಲಭ್ಯ ಗ್ರಂಥಗಳು ನಿಃಸಂದೇಹವಾಗಿ ಸಿಕ್ಕಬಹುದು. ಸಮಂತಭದ್ರ, ಶಿವಕೋಟಿ, ವಜ್ರನಂದಿ, ಸುಮತಿದೇವ, ವಕ್ರಗ್ರೀವ, ಶ್ರೀವರ್ಧದೇವ, ಕುಮಾರನಂದಿ, ಅನಂತವೀರ್ಯ, ಅಕಲಂಕದೇವ, ಪಾತ್ರಕೇಸರಿ-ವಿದ್ಯಾ ನಂದಿ, ಸನ್ಮತಿ, ಅನಂತಕೀರ್ತಿ, ವೀರಸೇನ, ಮಹಾಸೇನ, ರವಿಷೇಣ, ಆರ್ಯದೇವ, ಕವಿಪರಮೇಷ್ಠಿ ಮೊದಲಾದ ಪ್ರಧಾನ ಪ್ರಧಾನ ಜೈನಾ ಚಾರ್ಯರ ಅನೇಕ ಗ್ರಂಥಗಳ ಹೆಸರನ್ನು ನಾವು ಕೇಳುತ್ತೇವೆ. ಆದರೆ ಇದುವರೆಗೆ ಆ ಗ್ರಂಥಗಳು ಸಿಕ್ಕಲಿಲ್ಲ. ನಾವು ಅವುಗಳ ಪ್ರಾಪ್ತಿ ಗೋಸ್ಕರ ಪ್ರಯತ್ನಮಾಡಿದುದೂ ಇಲ್ಲ.

ಜೈನ ಸಮಾಜದ ಪ್ರತಿನಿಧಿ ಸಂಸ್ಥೆಗಳೆಂದು ಹೇಳಿಸಿಕೊಳ್ಳುವ ಬೇರೆ ಬೇರೆ ಸಂಘಗಳೂ ಸಭೆಗಳೂ ಇನ್ನಿತರ ಧಾರ್ಮಿಕ ಸಂಸ್ಥೆಗಳೂ ಈ ಸಂಬಂಧದಲ್ಲಿ ಏಕೆ ಪ್ರಯತ್ನ ಮಾಡಬಾರದು? ಇದೇನು ಆವಶ್ಯಕ ಕಾರ್ಯವಲ್ಲವೇ?

"ಭಗ್ನಪ್ರಷ್ಠ ಕಟಗ್ರೀವೋ ಬದ್ಧದೃಷ್ಟಿರಧೋಮುಖಃ ।
ಕಷ್ಟೇನ ಲಿಖಿತಂ ಗ್ರಂಥಂ ಯತ್ನೇನ ಪರಿಪಾಲಯೇತ್ ॥"

ಎಂಬೀ ಗ್ರಂಥಕರ್ತರ ಹೃದಯೋದ್ಗಾರದ ಕಡೆಗೆ ಸಂಸ್ಥೆಗಳ ಮತ್ತು ಸಮರ್ಥ ಧನಿಕರ ಲಕ್ಷ್ಯವೇಕೆ ಹೋಗುವುದಿಲ್ಲ? ಸ್ವಕರ್ತವ್ಯದಿಂದ ವಿಮುಖರಾದುದರಿಂದಲೇ ಇಂದು ದಾಕ್ಷಿಣಾತ್ಯರಾದ ನಮ್ಮನ್ನು ಔತ್ತರೀಯ ಜೈನಬಂಧುಗಳು ಹೀನದೃಷ್ಟಿಯಿಂದ ನೋಡುತ್ತಾರೆ. ಔತ್ತರೀಯ ಬಂಧು ಗಳ ಸಾಹಿತ್ಯಸೇವೆಯನ್ನು ಕಂಡಾದರೂ ನಾವು ಏಕೆ ಚೇತರಿಸಿಕೊಳ್ಳ ಬಾರದು?

ಸಾಹಿತ್ಯದ ಜೊತೆಯಲ್ಲಿ ಶಿಲಾಲೇಖ, ತಾಮ್ರಪತ್ರಾದಿಗಳ ಉದ್ಧಾರವೂ ಪರಮಾವಶ್ಯಕ. ಬೇರೆ ಬೇರೆ ರಾಜಕೀಯ ಮತ್ತು ಸಾರ್ವಜನಿಕ ಸಂಸ್ಥೆಗಳಿಂದ ಪ್ರಕಟವಾಗಿರುವ ಸಂಗ್ರಹ ಗ್ರಂಥಗಳಲ್ಲಿ ಸಂಗ್ರಹಿಸಲ್ಪಟ್ಟಿರುವ ಜೈನ ಶಿಲಾಲೇಖ, ಪ್ರತಿಮಾಲೇಖ ಮೊದಲಾದುವುಗಳನ್ನು ಸಂಗ್ರಹಿಸಿ ಪ್ರಕಟ ಮಾಡಿಸಬೇಕಾದುದೂ ಅತ್ಯಗತ್ಯ. ಏಕಂದರೆ ಜೈನ ಇತಿಹಾಸದ ನಿರ್ಮಾಣಕ್ಕೋಸ್ಕರ ಇವು ಅಡಿಗಲ್ಲಾಗಿವೆ.



೯. ಅಹಿಂಸೆ

ಜೈನ ಧರ್ಮದಲ್ಲಿ ಅಹಿಂಸೆಗಿದ್ದ ಸ್ಥಾನವು ಇನ್ನಾವುದಕ್ಕೂ ಇಲ್ಲ. ಅಹಿಂಸೆಯೇ ಪರಮ ಧರ್ಮವು. ಪ್ರತಿಯೋರ್ವನು ಪಾಲಿಸಲೇ ಇರಬೇಕಾದ ಪಂಚಾಣುವ್ರತಗಳಾದ ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಇವುಗಳಲ್ಲಿ ಅಹಿಂಸೆಯೇ ಮೊದಲನೆಯದ್ದಾಗಿದೆ. ಉಳಿದ ನಾಲ್ಕು ಧರ್ಮಗಳು ಅಹಿಂಸಾ ಧರ್ಮವನ್ನು ಪೋಷಿಸತಕ್ಕವುಗಳಾಗಿವೆ.

ಅಹಿಂಸೆಯೆಂದರೆ ಹಿಂಸೆ ಮಾಡದಿರುವುದೆಂದರ್ಥ. ಹಾಗಾದರೆ, ಹಿಂಸೆಯೆಂದರೇನು? ಕ್ರೋಧ ಮಾನ ಮಾಯ ಲೋಭಗಳೆಂಬ ಕಷಾಯ ವಶೀಭೂತನಾಗಿ ಯಾವುದಾದರೊಂದು ಪ್ರಾಣಿಯನ್ನು ಹೊಡೆಯುವುದಾಗಲೀ ಪ್ರಾಣಘಾತ ಮಾಡುವುದಾಗಲೀ ಹಿಂಸೆಯೆಂದೆನಿಸುವುದು. ಹಿಂಸೆಯು ಏಕೆ ವರ್ಜನೀಯವು? ಅದರಿಂದುಂಟಾಗುವ ಹಾನಿಯೇನು? ಎಂಬುದನ್ನು ತಿಳಕೊಳ್ಳಬೇಕಾದರೆ, ನಾವು ಆತ್ಮನೆಂದರೇನು? ಅವನ ನಿಜ ಸ್ವಭಾವವೇನು? ಮತ್ತು ಅವನ ಕೊನೆಯ ಸ್ಥಾನವೇನು ಮತ್ತು ಎಲ್ಲಿ? ಇತ್ಯಾದಿ ವಿಚಾರಗಳನ್ನು ತಿಳಿಯಬೇಕು.

ಸಂಸಾರಿ ಆತ್ಮನು ರಾಗದ್ವೇಷಗಳ ಕಾರಣದಿಂದ ಕರ್ಮಗಳ ಬಂಧನದಲ್ಲಿದ್ದಾನೆ. ಅವನಲ್ಲಿ ಪೂರ್ಣ ಜ್ಞಾನವಿರುವುದಿಲ್ಲ. ಕೇವಲ ಇಂದ್ರಿಯಗಳ ಮೂಲಕ ಕೆಲವು ಪದಾರ್ಥಗಳನ್ನು ತಿಳಿಯುತ್ತಾನೆ. ಆದರೆ ನಿಜವಾಗಿಯೂ ಆತ್ಮನ ಸ್ವಭಾವವು ತ್ರಿಕಾಲಗಳನ್ನೂ ಏಕಕಾಲದಲ್ಲಿ ತಿಳಿಯುವ ವಿಜ್ಞತ್ವವು. ಇದೇ ಪರಮಾತ್ಮನ ಸ್ವರೂಪ. ಇದನ್ನು ಹೊಂದಲು ಆತಂಕವಾಗಿರುವುದು ಮುಖ್ಯವಾಗಿ ಕೊಲ್ಲುವ ಮತ್ತು ಕೊಲ್ಲಲ್ಪಡುವ ಆತ್ಮದಲ್ಲಿ ಉಂಟಾಗುವ ಕಷಾಯಗಳು.

ಬೇರೆಯವರನ್ನು ಘಾತ ಮಾಡಬೇಕೆಂದು ಅಪೇಕ್ಷಿಸುವವನು ಮೊದಲು ತನ್ನನ್ನೇ ಘಾತ ಮಾಡಿಕೊಳ್ಳುತ್ತಾನೆ. ಕಾರಣ, ಯಾವನೊಬ್ಬನ ಮನಸ್ಸಿನಲ್ಲಿ ಕ್ರೋಧಾದಿ ಕೆಟ್ಟ ವಿಚಾರಗಳು ಪ್ರವೇಶ ಮಾಡುತ್ತಲೇ ಅವನು ಅಂಧನಂಥಾಗಿ ತನ್ನ ಜ್ಞಾನವನ್ನು ಕಳೆದುಕೊಳ್ಳುತ್ತಾನೆ. ಇದೇ ದೊಡ್ಡ ಹಿಂಸೆಯು. ಅಲ್ಲದೆ ನಾಲಗೆಯ ರುಚಿಗಾಗಿ ಪ್ರಾಣಿಯನ್ನು ವಧೆ ಮಾಡಿ ಅದರ ಮಾಂಸವನ್ನು ತಿಂದು ಬಹಳ ಉತ್ಸಾಹದಿಂದ ಅದರ ರುಚಿಯನ್ನು ಪ್ರಶಂಸೆ ಮಾಡುತ್ತ, ಈ ರುಚಿಯು ತನ್ನ ಆತ್ಮನಿಗೂ ಲಾಭವನ್ನುಂಟುಮಾಡೀತೆಂದು ಯೋಚಿಸುತ್ತಾನೆ. ಆತ್ಮ ಮತ್ತು ಪುದ್ಗಲ ವಸ್ತು ಒಂದೇ ಎಂದೂ ಯಾವ ವಸ್ತುವು ಪುದ್ಗಲಕ್ಕೆ ಲಾಭಕರವಾದುದೋ ಅದು ಆತ್ಮನಿಗೂ ಲಾಭದಾಯಕವಾದುದೆಂದೂ ತಿಳಿಯುತ್ತಾನೆ. ಇದು ಅವನ ತಪ್ಪು ಅಭಿಪ್ರಾಯವು. ಸ್ಪರ್ಶ, ರಸ, ಗಂಧ, ವರ್ಣ- ಇವು ಪುದ್ಗಲದ ಗುಣಗಳು. ಈ ಗುಣಗಳೆಂದಿಗೂ ಆತ್ಮನ ನಿಜಸ್ವಭಾವವನ್ನು ಪ್ರಕಟಮಾಡಲಾರವು. ಆತ್ಮನ ಗುಣಗಳೇ ಆತ್ಮನಲ್ಲಿ ಸ್ವಭಾವವನ್ನು ಪ್ರಕಟಮಾಡುವುವು.

ಸಂಸಾರದಲ್ಲಿ ಪರಮಾತ್ಮನ ಗುಣಗಳ ಧ್ಯಾನವು ಆತ್ಮನ ಶಕ್ತಿಯನ್ನು ವೃದ್ಧಿಮಾಡುತ್ತದೆ. ಆದರೆ ಸಾಂಸಾರಿಕ ಪದಾರ್ಥಗಳಲ್ಲಿ ರಾಗ ಮತ್ತು ಇಂದ್ರಿಯಜನ್ಯವಾದ ಸುಖ, ಕ್ರೋಧಾದಿ ಕಷಾಯಗಳು ಆತ್ಮನ ಶಕ್ತಿಯನ್ನು ಕಡಿಮೆ ಮಾಡಿ, ಪರಮಾತ್ಮಪದದಿಂದ ದೂರವಿರಿಸುತ್ತವೆ. ಒಬ್ಬನ ಮನಸ್ಸಿನಲ್ಲಿ ಕಷಾಯ ಭಾವವು ಉಂಟಾಗುತ್ತಲೇ ಅವನು ಮೊದಲು ತನ್ನ ಸ್ವಭಾವವನ್ನು ಕೊಂದು, ತನ್ನಿಂದ ಕೊಲ್ಲಲ್ಪಡುವ ಪ್ರಾಣಿಯ ಮನಸ್ಸಿನಲ್ಲಿ ಕಷಾಯ ಹಾಗೂ ದುಃಖವನ್ನುಂಟುಮಾಡಿ ಅದನ್ನು ಕೊಲ್ಲುತ್ತಾನೆ.

ಪ್ರಾಣಿಗಳು ಸಹಜವಾದ ಮೃತ್ಯುವಿನಿಂದ ಸಾಯುವಾಗಲೂ ರೋಗ, ಶೋಕ, ಹಸಿವೆ ಮೊದಲಾದ ಅಸಹ್ಯ ದುಃಖಗಳನ್ನು ಸಹಿಸುವಾಗ, ಕ್ಷಣಕಾಲದಲ್ಲಿ ಕೊಂದರೆ ದುಃಖವು ಕಡಿಮೆಯಾದಂತಾಗಲಿಲ್ಲವೇ? ಎಂಬದಾಗಿ ತರ್ಕಿಸಬಹುದು. ಆದರೆ ಅಲ್ಪಸಮಯದ ಆ ಕಷ್ಟವು ರೋಗ ಅಥವಾ ವೃದ್ಧಾಪ್ಯದ ಸ್ವಾಭಾವಿಕ ಮೃತ್ಯುವಿನಿಂದ ಉಂಟಾ

ಗುವ ಕಷ್ಟದಿಂದ ಗುರುತರವಾದುದು. ಬಲಾತ್ಕಾರದ ಮೃತ್ಯುವಿನಿಂದ
ಸಾಯುವಾಗ ಭಯ, ದುಃಖ, ಮೊದಲಾದುವುಗಳು ಉಂಟಾಗುತ್ತವೆ.
ಪಶುಗಳು ಎಂದಿಗಾದರೂ ವಧ್ಯ ಸ್ಥಳಕ್ಕೆ ಹೋಗುವುದನ್ನು ಕಂಡಿರು
ವಿರಾ? ಅವುಗಳು ಬೊಬ್ಬಿಡುತ್ತೆ, ಹಿಂದೆ ಓಡುತ್ತೆ, ಅಲ್ಲಲ್ಲಿ ನಿಂತು ಪುನಃ
ಹಿಂದಿರುಗಿ ನೋಡುತ್ತಿರುವುದನ್ನು ಕಾಣಲಿಲ್ಲವೇ? ತಾವು ಸಾಯುವೆವೆಂಬ
ಕಾರಣದಿಂದ ಅವುಗಳು ಹೆದರಿ ಅಶಾಂತಿಯನ್ನು ಹೊಂದುತ್ತವೆಂಬುದು
ಗೊತ್ತಾಗುತ್ತದೆ.

"ಹಿಂಸೆಯ ಕಾರಣದಿಂದ ಜೀವವಧೆಯು ಕೆಟ್ಟದ್ದೆಂಬುದು ನಿಜ;
ಆದರೆ ಹಿಂಸೆ ಇಲ್ಲದೆ ಹೇಗೆ ಜೀವಿಸಲಾದೀತು? ವನಸ್ಪತಿಯಲ್ಲಿ ಜೀವ
ವಿಲ್ಲವೇ? ವನಸ್ಪತಿಯನ್ನು ಕಡಿಯುವುದರಲ್ಲಿ ಕೊಯ್ಯುವುದರಲ್ಲಿ ಹಿಂಸೆ
ಯಾಗುವುದಲ್ಲವೇ?" ಎಂಬುದಾಗಿಯೂ ಕೆಲವರು ತರ್ಕಿಸುವರು. ಆದರೆ
ಶಾಕ, ತರಕಾರಿಗಳನ್ನು ತಿನ್ನುವುದರಿಂದುಂಟಾಗುವ ಹಿಂಸೆಯು ಪಶುಗ
ಳನ್ನು ಕೊಲ್ಲುವುದರಿಂದುಂಟಾಗುವ ಹಿಂಸೆಗೆ ಸಮಾನವಾದುದಲ್ಲ. ವನ
ಸ್ಪತಿಯಲ್ಲಿ ಆತ್ಮನು ಬಹಳ ಸಣ್ಣ ದರ್ಜೆಯಲ್ಲಿರುತ್ತಾನೆ. ಅವನ ಶಕ್ತಿ
ಗಳು ಬಹು ಸ್ವಲ್ಪ. ಅವನ ಜ್ಞಾನವು ಬಹಳ ಕಡಿಮೆ. ವನಸ್ಪತಿಗ
ಳನ್ನು ಘಾತಮಾಡುವುದರಿಂದ ಅವುಗಳ ಆತ್ಮನು ಅವನು ಮುಟ್ಟಿರುವ
ಸ್ಥಾನದಿಂದ ಬಹಳ ಕೆಳಗೆ ಬೀಳುವುದಿಲ್ಲ. ಯಾವನೊಬ್ಬನು ಪಶುವನ್ನು
ವಧೆಮಾಡುವಾಗ ಅವನಿಗೆ ಬಹಳ ಹೆಚ್ಚು ಕಷಾಯವು ಉಂಟಾಗುತ್ತದೆ.
ಪಶುಗಳನ್ನು ಕೊಲ್ಲುವುದರಲ್ಲಿ ಕೊಲ್ಲುವ ಮತ್ತು ಕೊಲ್ಲಲ್ಪಡುವ, ಇಬ್ಬರ
ಆತ್ಮಾಪೇಕ್ಷೆಯಿಂದ ಬಹಳ ಹೆಚ್ಚು ಭಾವಹಿಂಸೆಯುಂಟಾಗುತ್ತದೆ. ಈ
ರೀತಿಯ ತರ್ಕವು "ಪಶುಗಳನ್ನು ಕೊಲ್ಲುವುದರಿಂದ ಹಿಂಸೆಯ ಪಾಪ
ಉಂಟಾಗುತ್ತದೆ. ಆದುದರಿಂದ ಮನುಷ್ಯರನ್ನು ಕೊಲ್ಲುವುದರಲ್ಲಿ ಯಾವ
ದೋಷವೂ ಇಲ್ಲ" ಎಂದು ಹೇಳುವ ಮನುಷ್ಯಭಕ್ಷಕರ ಯುಕ್ತಿಗೆ
ಸಮಾನವಾಗಿದೆ.

ಮನುಷ್ಯನನ್ನು ಕೊಲ್ಲುವುದರಲ್ಲಿ ಪಶುವನ್ನು ಕೊಲ್ಲುವುದಕ್ಕಿಂತ
ಹೆಚ್ಚು ಹಿಂಸೆಯುಂಟಾಗುವುದು. ಮನುಷ್ಯನ ಆತ್ಮನು ಪಶುವಿನ ಆತ್ಮನಿ
ಗಿಂತ ಬಹಳ ಮೇಲಿನ ದರ್ಜೆಯಲ್ಲಿದ್ದಾನೆ. ಒಬ್ಬನು ಮನುಷ್ಯನನ್ನು

ಕೊಲ್ಲುವಾಗ ಅವನ ಮನಸ್ಸಿನಲ್ಲಿ ಪಶುವನ್ನು ಕೊಲ್ಲುವುದಕ್ಕಿಂತಲೂ ತೀವ್ರವಾದ ಕಷಾಯವು ಉಂಟಾಗುತ್ತದೆ. ಆದುದರಿಂದ ಮನುಷ್ಯನನ್ನು ಕೊಲ್ಲುವುದರಲ್ಲಿ ಪಶುವನ್ನು ಕೊಲ್ಲುವುದಕ್ಕಿಂತ ಹೆಚ್ಚು ಹಿಂಸೆಯಾಗುವಂತೆ, ಪಶುಗಳನ್ನು ಕೊಲ್ಲುವುದರಲ್ಲಿಯೂ ಶಾಕ ತರಕಾರಿಗಳನ್ನು ಕೊಯ್ಯುವುದರಿಂದ ಎಷ್ಟೋ ಹೆಚ್ಚು ಭಾವಹಿಂಸೆ ಉಂಟಾಗುತ್ತದೆ.

ಅಹಿಂಸೆಯು ಜೈನಧರ್ಮದ ಮುಖ್ಯ ಸಿದ್ಧಾಂತವಾಗಿದೆ. ಅದೇ ಸಭ್ಯತೆಗೂ ಸದಾಚಾರಕ್ಕೂ ಮೂಲವಾಗಿದೆ. ಅದನ್ನು ಪಾಲನೆ ಮಾಡುವುದರಿಂದ ಮನುಷ್ಯನು ಎಷ್ಟೋ ಪಾಪಗಳಿಂದ ಉಳಿಯುತ್ತಾನೆ. ಅಹಿಂಸೆಯು "ನಿಷೇಧ ರೂಪ" ಧರ್ಮವೆಂದು ಕೆಲವರು ಹೇಳುವರು. ಆದರೆ ಇದು ತಪ್ಪು ಅಭಿಪ್ರಾಯವಾಗಿದೆ. ಅಹಿಂಸೆಯನ್ನು ಪಾಲನೆ ಮಾಡುವುದರಲ್ಲಿ ನಾವು ನಮ್ಮ ಮನಸ್ಸು, ಇಂದ್ರಿಯಗಳನ್ನು ವಶಮಾಡಿಕೊಳ್ಳಬೇಕಾಗುವುದು. ಉದಾಹರಣೆಗಾಗಿ, ಒಬ್ಬ ಬೇಟೆಗಾರನಿಗೆ ಮೇಯುತ್ತಿರುವ ಜಿಂಕೆಯನ್ನು ನೋಡಿ ಅದರ ರುಚಿಕರವಾದ ಮಾಂಸಕ್ಕೋಸ್ಕರ ಪಶುವನ್ನು ಕೊಲ್ಲುವ ತೀವ್ರ ಇಚ್ಛೆಯುಂಟಾಗುತ್ತದೆ. ಅವನು ಅದನ್ನು ಕೊಲ್ಲಲಿಕ್ಕೆ ಉದ್ಯುಕ್ತನಾಗುತ್ತಾನೆ. ಆಗ ಅವನಿಗೆ ಜೈನ ಸಿದ್ಧಾಂತದ ನೆನಪು ಉಂಟಾದರೆ ಅವನು "ಈ ಪಶುವಿನ ಮಾಂಸವು ಚೆನ್ನಾಗಿರಬಹುದು, ನನ್ನ ಶರೀರವು ಇದರಿಂದ ಪುಷ್ಟಿಯಾಗಬಹುದು, ಆದರೆ ಇದರಿಂದ ನನ್ನ ಆತ್ಮನಿಗೆ ಹಾನಿ ಉಂಟಾದೀತು. ಆತ್ಮನ ಉನ್ನತಿಯಾಗದು. ಆತ್ಮನು ಜ್ಞಾನ ಮತ್ತು ಶಾಂತಸ್ವಭಾವದವನಾಗಿದ್ದಾನೆ. ನಾನು ಮಾಂಸದ ಲೋಭಕ್ಕಾಗಿ ಮತ್ತು ವಿನೋದಕ್ಕಾಗಿ ಆತ್ಮನ ನಿಜವಾದ ಸ್ವಭಾವವನ್ನು ನಾಶಮಾಡುತ್ತೇನೆ. ಈ ಪ್ರಾಣಿಯ ಆತ್ಮನಲ್ಲಿ ಭಯ ಹಾಗೂ ದುಃಖವನ್ನುಂಟುಮಾಡಿ ಇದರ ಉನ್ನತಿಗೆ ತೊಂದರೆಯನ್ನುಂಟುಮಾಡುತ್ತೇನೆ" ಎಂಬುದಾಗಿ ಯೋಚಿಸಿ, ತನ್ನ ಇಚ್ಛೆಗಳನ್ನು ತಡೆಯುತ್ತಾನೆ. ಇಚ್ಛೆಗಳನ್ನು ತಡೆಯುವುದೆಂದರೆ ಒಬ್ಬ ದೊಡ್ಡ ಶತ್ರುವನ್ನು ಜಯಿಸಿದಂತೆಯೇ ಸರಿ. ಆದುದರಿಂದ ಅಹಿಂಸೆಯು ನಿಷೇಧ ರೂಪ ಶಬ್ದವೆಂದು ತಿಳಿಯಕೂಡದು.

ಅಹಿಂಸೆಯು ಸರ್ವೋತ್ತಮ ಧರ್ಮವಾಗಿದೆ. ಜಗತ್ತಿನ ಎಲ್ಲಾ ಮತಗಳ ನೀತಿ ಮತ್ತು ಸಿದ್ಧಾಂತಗಳು ಅಹಿಂಸಾ ರೂಪವಾದ ಸಮುದ್ರದ

ತೆರೆಗಳು. ನಿನ್ನ ನೆರೆಯವನನ್ನು ಪ್ರೀತಿಸು! ನಿನ್ನ ದೇಶವಾಸಿಗಳನ್ನು ಪ್ರೀತಿಸು! ಎಂಬೀ ಸರ್ವೋತ್ತಮವಾದ ಧರ್ಮವು ಅಹಿಂಸೆಯ ಮಂತ್ರವಾಗಿದೆ. ಅಹಿಂಸೆಯು ದಯೆಯ ಬಹು ದೊಡ್ಡ ಪರಧಿ. ಸಂಸಾರದಲ್ಲಿ ಪ್ರೇಮದ ಹಾಗೂ ಮೈತ್ರಿಯ ಎಷ್ಟೊಂದು ಕಾರ್ಯಗಳಿವೆಯೋ ಅವೆಲ್ಲವೂ ಇದರ ಅಂತರಂಗ ಪರಧಿಗಳು.

ಅಹಿಂಸಾ ಧರ್ಮವು ಯಾವುದೊಂದು ಜಾತಿ ಅಥವಾ ಮತ ವಿಶೇಷ ಧರ್ಮವಲ್ಲ. ಅದು ಜೀವ ಮಾತ್ರದ ಧರ್ಮವಾಗಿದೆ. "ಕೊಲ್ಲಬೇಡ" ಎಂದು ಸಾಮಾನ್ಯವಾಗಿ ಎಲ್ಲಾ ಮತಗಳಲ್ಲಿಯೂ ಕಂಡುಬರುತ್ತದೆ. ಅಹಿಂಸಾ ಧರ್ಮವನ್ನು ಸಂಪೂರ್ಣವಾಗಿ ಪಾಲನೆ ಮಾಡುವುದು ಸುಲಭವಲ್ಲ ಎಂಬುದು ನಿಜ. ಆದರೂ ಸಂಸಾರದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಸ್ವಲ್ಪವಾದರೂ ಅಹಿಂಸೆಯನ್ನು ಪಾಲನೆ ಮಾಡುತ್ತಾನೆ. ಕೆಲವರು ಮನುಷ್ಯರಲ್ಲಿ, ಇನ್ನು ಕೆಲವರು ಮನುಷ್ಯರಲ್ಲಿಯೂ ಒಮ್ಮೊಮ್ಮೆ ವನಸ್ಪತಿಗಳಲ್ಲಿಯೂ ಅಹಿಂಸೆಯನ್ನು ಒಪ್ಪಿಕೊಳ್ಳುತ್ತಾರೆ. ಹೀಗೆ ಸಂಸಾರದಲ್ಲಿ ಎಲ್ಲಾ ಜನರು ಹೆಚ್ಚು ಕಡಿಮೆ ಅಹಿಂಸೆಯನ್ನು ಪಾಲನೆ ಮಾಡುತ್ತಾರೆ. ಆದರೆ ಅದರಲ್ಲಿ ಅಂತರವಿಷ್ಟೆ, ಕೆಲವರಲ್ಲಿ ಕಡಿಮೆ, ಕೆಲವರಲ್ಲಿ ಹೆಚ್ಚು. ಕಾರಣ, ಸ್ವಾರ್ಥ ಮತ್ತು ಆತ್ಮನಿಜ ಸ್ವಭಾವದಲ್ಲಿ ಅನಭಿಜ್ಞತೆ, ಇವುಗಳು ಅಹಿಂಸೆಯ ವಿಸ್ತಾರವನ್ನು ಪರಿಮಿತ ಮಾಡಿ ಬಿಡುತ್ತವೆ. ಇದಕ್ಕೆ ವಿಪರೀತವಾಗಿ ನಿಸ್ವಾರ್ಥ ಮತ್ತು ಆತ್ಮನ ಸ್ವಭಾವದ ಜ್ಞಾನ, ಇವುಗಳು ಅಹಿಂಸೆಯ ಪರಧಿಯನ್ನು ವಿಸ್ತಾರ ಮಾಡುತ್ತವೆ. ಆದುದರಿಂದ ನಾವು ಅಹಿಂಸೆಯನ್ನು ಪೂರ್ಣರೂಪದಿಂದ ಪಾಲನೆ ಮಾಡುವುದಿಲ್ಲವಾದರೂ ಈ ಸರ್ವೋತ್ತಮ ಹಾಗೂ ಪರಿಶುದ್ಧವಾದ ಧರ್ಮವನ್ನು ಯಥಾಶಕ್ತಿ ಆದರಿಸುವುದು ನಮ್ಮ ಕರ್ತವ್ಯವಾಗಿದೆ.

೧೦. ಸಿದ್ಧಾಂತ ಗ್ರಂಥಗಳ ಸಂಕ್ಷಿಪ್ತ ಪರಿಚಯ

ಜೈನಶಾಸ್ತ್ರವು ಅನಾದಿಪರಂಪರೆಯಿಂದ ಬಂದಿರುವುದರಿಂದಲೂ ಬ್ರಹ್ಮಲೋಕದಲ್ಲಿ ಅವಿಚ್ಛಿನ್ನವಾಗಿರುವುರಿಂದಲೂ ಅಪೌರುಷೇಯವೂ, ಕಾಲಭೇದದಿಂದ ಅನೇಕ ಪರಾಪರ ಪರಮೇಷ್ಠಿಗಳ ಮುಖಕಮಲದಿಂದ ವಿನಿರ್ಗತವಾಗಿರುವುದರಿಂದಲೂ ಪೌರುಷೇಯವೂ ಆಗಿದೆ. ಅಂತಿಮ ತೀರ್ಥಂಕರರಾದ ಶ್ರೀ ಮಹಾವೀರ ಸ್ವಾಮಿಯವರ ದಿವ್ಯೋಪದೇಶವನ್ನು ಕೇಳಿ, ಗೌತಮ ಗಣಧರರು ಅವನ್ನು ದ್ವಾದಶಾಂಗ ವೇದಗಳನ್ನಾಗಿ ರಚಿಸಿದರು. ಅವುಗಳಲ್ಲಿ ಹನ್ನೆರಡನೆಯ ವೇದಕ್ಕೆ ದೃಷ್ಟಿವಾದಾಂಗವೆಂದು ಹೆಸರು. ಈ ವೇದದಲ್ಲಿ ಪರಿಕರ್ಮ ಮೊದಲಾದ ಐದು ಭೇದಗಳಿವೆ.ಅವುಗಳಲ್ಲಿ ನಾಲ್ಕನೆಯ ಭೇದವಾದ 'ಪೂರ್ವಗತ'ದಲ್ಲಿ ಹದಿನಾಲ್ಕು ಭೇದಗಳೂ, ಅವುಗಳ ಪೈಕಿ ಎರಡನೆಯ 'ಆಗ್ರಾಯಣೀ' ಪೂರ್ವಶಾಸ್ತ್ರದಲ್ಲಿ ಹದಿನಾಲ್ಕು ವಸ್ತು ಅಧಿಕಾರಗಳೂ ಇವೆ. ಅವುಗಳಲ್ಲಿ ಐದನೆಯ ಅಧಿಕಾರದ ನಾಲ್ಕನೆಯ ಪ್ರಾಭೃತಕ್ಕೆ **'ಮಹಾಕರ್ಮ ಪ್ರಾಭೃತ'** ಶಾಸ್ತ್ರವೆಂದು ಹೆಸರು. ಈ ವಿಷಯವಾಗಿ ಧವಲ ಸಿದ್ಧಾಂತದಲ್ಲಿ:—

"ಅಗ್ಗೇಯಣಿಯಸ್ಸ ಪುವ್ವಸ್ಸ ಪಂಚಮಸ್ಸ ವತ್ಥುಸ್ಸ ಚವುತ್ಥೋ ಪಾಹುಡೋ ಮಹಾಕಮ್ಮಪಯಡಿಣಾಮ."

ಈ ಶಾಸ್ತ್ರವನ್ನು ಶ್ರೀ ಧರಸೇನಾಚಾರ್ಯರು ತಮ್ಮ ಶಿಷ್ಯರಾದ ಭೂತಬಲಿ ಮತ್ತು ಪುಷ್ಪದಂತಾಚಾರ್ಯರಿಗೆ ಬೋಧಿಸಿದರು. ಅವುಗಳಲ್ಲಿ 'ಮಹಾಕರ್ಮಪ್ರಕೃತ ಪ್ರಾಭೃತ' ಮತ್ತು 'ಕಷಾಯ ಪ್ರಾಭೃತ'ವೆಂಬೀ ಎರಡು ಗ್ರಂಥಗಳು ಅತಿ ಪ್ರಾಮುಖ್ಯವಾದುವು. ಅವನ್ನು

ಮೊತ್ತಮೊದಲು ಗುರೂಪದೇಶದಿಂದ ಭೂತಬಲಿ ಮತ್ತು ಪುಷ್ಪದಂತಾರ್ಯರು ಸೂತ್ರರೂಪವಾಗಿ ರಚಿಸಿದರು.

ಈಗ ಮೂಡಬಿದ್ರೆಯ ಸಿದ್ಧಾಂತ ಮಂದಿರದಲ್ಲಿ ಪ್ರಸಿದ್ಧವಾಗಿರುವ ಸಿದ್ಧಾಂತ ಗ್ರಂಥಗಳು ಯಾವುವು? ಅವನ್ನು ರಚಿಸಿದವರಾರು? ಅವುಗಳಲ್ಲಿ ವರ್ಣಿಸುವ ವಿಷಯಗಳೇನು? ಇತ್ಯಾದಿ ಪ್ರಶ್ನೆಗಳ ಉತ್ತರವು ಈ ರೀತಿಯಾಗಿದೆ—

ಶ್ರೀ ಧವಲ ಸಿದ್ಧಾಂತ

ಈ ಮೂಡಬಿದಿರೆಯಲ್ಲಿ ಧವಲಸಿದ್ಧಾಂತ, ಜಯಧವಲ ಸಿದ್ಧಾಂತ ಮತ್ತು ಮಹಾಬಂಧ ಸಿದ್ಧಾಂತಗಳೆಂದು ಮೂರು ಗ್ರಂಥಗಳು ಪ್ರಾಚೀನ ಶಿಲಾಶಾಸನಗಳ ಲಿಪಿಯಂತಿರುವ ಹಳೆಗನ್ನಡ ಲಿಪಿಯಲ್ಲಿ ಉತ್ತಮವಾದ ತಾಡಪತ್ರಗಳಲ್ಲಿ ಅರಗಿನ ಶಾಯಿಯಿಂದ ಬರೆಯಲ್ಪಟ್ಟಿವೆ. ಪೂರ್ವೋಕ್ತವಾದ 'ಮಹಾಕರ್ಮಪ್ರಕೃತಿ ಪ್ರಾಭೃತ' ಶಾಸ್ತ್ರದಲ್ಲಿ ಜೀವಸ್ಥಾನ, ಕ್ಷುದ್ರಬಂಧ, ಬಂಧಸಾಮಿತ್ವ, ವೇದನಾಖಂಡ, ವರ್ಗಣಾಖಂಡ ಮತ್ತು ಮಹಾಬಂಧಗಳೆಂದು ಆರು ಭೇದಗಳನ್ನು ವಿಭಾಗಿಸಿದ್ದಾರೆ. ಅವುಗಳಿಗೆ ಷಟ್ಖಂಡಾಗಮವೆಂದು ಹೆಸರು. ಅವುಗಳಲ್ಲಿ ಐದು ಖಂಡಗಳಿಗೆ ಶ್ರೀ ವೀರಸೇನಾಚಾರ್ಯರು ೭೦ ಸಾವಿರ ಶ್ಲೋಕಸಂಖ್ಯಾಪರಿಮಿತವಾದ ಟೀಕೆಯನ್ನು ರಚಿಸಿದರು. ಆ ಟೀಕೆ ಅಥವಾ ಭಾಷ್ಯಗ್ರಂಥಕ್ಕೆ ಶ್ರೀಧವಲ ಸಿದ್ಧಾಂತವೆಂದು ಹೆಸರು. ಆ ಮೊದಲನೆಯ ಜೀವಸ್ಥಾನವೆಂಬ ಖಂಡದಲ್ಲಿ ಸತ್, ಸಂಖ್ಯಾ ಮೊದಲಾದ ಎಂಟು ಅನುಯೋಗಗಳಿಂದಲೂ ಪ್ರಕೃತಿಸಮುತ್ಕೀರ್ತನಾ ಮೊದಲಾದ ನವಚೂಳಿಕೆಗಳಿಂದಲೂ ಗುಣಸ್ಥಾನ ಮತ್ತು ಮಾರ್ಗಣಸ್ಥಾನಗಳ ಆಶ್ರಯದಿಂದ ಬಲು ವಿಸ್ತಾರವಾಗಿ ಜೀವವು ಯಾವ ಯಾವ ಸ್ಥಾನಗಳಲ್ಲಿ ಯಾವ ಯಾವ ಅಪೇಕ್ಷೆಯಿಂದ ಇದೆ? ಎಂದು ಜೀವದ್ರವ್ಯದ ವಿಚಾರವನ್ನು ವರ್ಣಿಸಿರುವರು.

ಎರಡನೆಯ ಕ್ಷುದ್ರ ಅಥವಾ ಕ್ಷುಲ್ಲಕಬಂಧವೆಂಬ ಖಂಡದಲ್ಲಿ— ಸ್ವಾಮಿತ್ವ, ಕಾಲ ಮೊದಲಾದ ಹನ್ನೊಂದು ಅನುಯೋಗಗಳಿಂದ ಕರ್ಮ

ಬಂಧಕನಾದ ಜೀವನ ಮತ್ತು ಕರ್ಮಬಂಧಗಳ ಭೇದಗಳನ್ನು ವಿಸ್ತಾರವಾಗಿ ವರ್ಣಿಸಿರುವರು.

ಮೂರನೆಯ 'ಬಂಧಸಾಮಿತ್ವ' ಖಂಡದಲ್ಲಿ ಆವಾವ ಜೀವನಿಗೆ ಎಷ್ಟೆಷ್ಟು ಕರ್ಮಗಳ ಬಂಧವಾಗುವುದು? ಎಷ್ಟೆಷ್ಟು ಕರ್ಮಗಳ ವ್ಯುಚ್ಛಿತ್ತಿಯಾಗುವುದು? ಸ್ವೋದಯ ಕರ್ಮಬಂಧಗಳೆಷ್ಟು? ಪರೋದಯ ಕರ್ಮಬಂಧಗಳೆಷ್ಟು? ಇವು ಮೊದಲಾದ ಕರ್ಮಸಂಬಂಧವಾದ ವಿಷಯಗಳನ್ನು ಬಂಧಕ ಜೀವಾಪೇಕ್ಷೆಯಿಂದ ಚೆನ್ನಾಗಿ ನಿರೂಪಿಸಿರುವರು.

ನಾಲ್ಕನೆಯ 'ವೇದನಾಖಂಡ'ದಲ್ಲಿ ನಯ, ನಿಕ್ಷೇಪಗಳ ಮೂಲಕ ಕರ್ಮಫಲ ವೇದನೆಯ ವಿಷಯವಾಗಿ ಬಲು ವಿಸ್ತಾರವಾಗಿ ವರ್ಣಿಸಿರುವರು.

ಐದನೆಯ 'ವರ್ಗಣಾಖಂಡ'ದಲ್ಲಿ ಬಂಧಯೋಗ್ಯಗಳಾದ ಕರ್ಮಸ್ಪರ್ಶ ಮತ್ತು ಅವುಗಳಿಂದುಂಟಾಗುವ ಲಾಭಾಲಾಭ ಮೊದಲಾದ ಕರ್ಮವರ್ಗಣೆಗಳನ್ನು ಉತ್ತಮರೀತಿಯಿಂದ ವರ್ಣಿಸಿದ್ದಾರೆ.

ಈ ಮೇಲಿನ ಐದು ಖಂಡಗಳ ವಿಸ್ತಾರವಾದ ವರ್ಣನೆಯು ಧವಲಸಿದ್ಧಾಂತದಲ್ಲಿ ಮಾಡಲ್ಪಟ್ಟಿದೆ. ಈಗ ಅಮರಾವತಿಯಲ್ಲಿ ಮುದ್ರಣವಾಗುತ್ತಿರುವ ಈ ಸಿದ್ಧಾಂತದಲ್ಲಿ ಮೊದಲನೆಯ ಖಂಡವಾದ ಜೀವಸ್ಥಾನದಲ್ಲಿ ಐದು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇನ್ನು ಇವೈದು ಖಂಡಗಳಲ್ಲಿ ಹಲವು ಪುಸ್ತಕಗಳು ಪ್ರಕಟವಾಗಲಿವೆ.

ಈ ಧವಲಭಾಷ್ಯೆಯ ರಚನಾಕಾಲ ಶಾಲಿವಾಹನಶಕ ೭೩೮. ವಿಕ್ರಮಶಕ ೮೭೩. ಅಂದರೆ ಈ ಗ್ರಂಥ ನಿರ್ಮಾಣವಾಗಿ ೧೧೨೬ ವರ್ಷಗಳಾದುವು.

ಶ್ರೀ ಜಯಧವಲ ಸಿದ್ಧಾಂತ

ಇದಕ್ಕೆ ವಿಜಯಧವಲವೆಂದೂ ಕಷಾಯಪ್ರಾಭೃತವೆಂದೂ ಹೆಸರಿದೆ. ಇದರ ಮೂಲಕರ್ತರು ಶ್ರೀ ಗುಣಧರಾಚಾರ್ಯರು. ಅವರು ಮೊತ್ತ ಮೊದಲು ೧೮೦ ಗಾಥೆಗಳಿಂದ ಕಷಾಯಪ್ರಾಭೃತವನ್ನು ರಚಿಸಿದರು. ಅವುಗಳಿಗೆ ಯತಿ ವೃಷಭಾಚಾರ್ಯರು ಚೂರ್ಣೀಸೂತ್ರ ಮತ್ತು ಉಚ್ಚಾರಣಾಚಾರ್ಯರು ಉಚ್ಚರಣಾಸೂತ್ರಗಳೆಂಬ ಟೀಕೆಗಳನ್ನು ರಚಿಸಿದ್ದಾರೆ.

ಆದರೆ ಅವು ಬಲು ಕ್ಲಿಷ್ಟತರವಾದುದೆಂದರಿತು ಶ್ರೀ ವೀರಸೇನಾಚಾರ್ಯರು ಅವುಗಳಿಗೆ ಬಲು ವಿಸ್ತಾರವಾಗಿ ಅರ್ಥವನ್ನು ಬರೆದರು. ಆ ಟೀಕಾಗ್ರಂಥಕ್ಕೆ ಜಯಧವಲ ಸಿದ್ಧಾಂತವೆಂಬ ಹೆಸರು ಪ್ರಸಿದ್ಧವಾಗಿದೆ. 'ಇದಕ್ಕೆ ವೀರಸೇನಿಯಾ ಟೀಕಾ' ಎಂದು ಪ್ರಸಿದ್ಧವಿದ್ದರೂ ೨೦ ಸಾವಿರ ಶ್ಲೋಕಸಂಖ್ಯಾ ಪರಿಮಿತವಾದ ಆದ್ಯಂತವನ್ನು ರಚಿಸಿ ಪೂರೈಸುವಷ್ಟರಲ್ಲಿಯೇ ಅವರು ಸ್ವರ್ಗಸ್ಥರಾದ ಕಾರಣ ಉಳಿದ ಭಾಗವನ್ನು ಅವರ ಪರಮಶಿಷ್ಯರಾದ ಶ್ರೀ ಜಿನಸೇನಾಚಾರ್ಯರು ಶಾ. ಶಕ ೭೫೯, ವಿ. ಶ. ೮೯೪ರಲ್ಲಿ ರಚಿಸಿ ಪೂರ್ತಿಗೊಳಿಸಿದರು. ಅಂದರೆ ಧವಲಸಿದ್ಧಾಂತದ ರಚನೆಯಾಗಿ ಸುಮಾರು ೨೦ ವರ್ಷಗಳಲ್ಲಿ ಈ ಸಿದ್ಧಾಂತವನ್ನು ಪೂರ್ತಿಗೊಳಿಸಿದರೆಂದರ್ಥವು. ಈ ಗ್ರಂಥ ನಿರ್ಮಾಣವಾಗಿ ೧೧೦೫ ವರ್ಷಗಳಾದವು. ಇದರ ಪರಿಮಾಣ ೬೦ ಸಾವಿರ ಶ್ಲೋಕಸಂಖ್ಯೆ; ಇದರಲ್ಲಿ ಪೂರ್ವೋಕ್ತ ರೀತಿಯಾಗಿ—ಗಣಸ್ಥಾನ ಮತ್ತು ಮಾರ್ಗಣ ಸ್ಥಾನಗಳ ಆಶ್ರಯದಿಂದ ಕ್ರೋಧಾದಿ ಕಷಾಯಗಳು ಜೀವನ ನಿಜಸ್ವಭಾವಗಳಾಗಿರದೆ ಪರಭಾವಗಳಾಗಿವೆ ಎಂದು ಬಲು ವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ.

ಶ್ರೀ ಮಹಾಬಂಧ ಸಿದ್ಧಾಂತ

ಇದಕ್ಕೆ ಮಹಾಧವಲ ಸಿದ್ಧಾಂತವೆಂಬ ಹೆಸರೂ ರೂಢಿಯಲ್ಲಿದೆ. ಇದು ಮೇಲೆ ಹೇಳಿದ ಷಟ್ಖಂಡಾಗಮ ಶಾಸ್ತ್ರದ ಆರನೆಯ ಭೇದವಾದ ಮಹಾಬಂಧದ ವಿಸ್ತಾರವಾದ ಟೀಕಾ ಗ್ರಂಥವಾಗಿದೆ. ಇದರ ಮೂಲ ಮತ್ತು ಟೀಕಾಕರ್ತರು ಶ್ರೀ ಭೂತಬಲಿ ಆಚಾರ್ಯರು; ಇದು ೪೦ ಸಾವಿರ ಶ್ಲೋಕಸಂಖ್ಯಾಪರಿಮಿತವಾದ ಗ್ರಂಥ; ಇದರಲ್ಲಿ ಪ್ರಕೃತಿ, ಸ್ಥಿತಿ, ಅನುಭಾಗ ಮತ್ತು ಪ್ರದೇಶಬಂಧಗಳೆಂಬ ನಾಲ್ಕು ಕರ್ಮಬಂಧಗಳಾಗುವ ವಿಷಯಗಳನ್ನು ಗುಣಸ್ಥಾನ ಮತ್ತು ಮಾರ್ಗಣ ಸ್ಥಾನಗಳ ಅಪೇಕ್ಷೆಯಿಂದ ಬಲು ಚೆನ್ನಾಗಿ ನಿರೂಪಿಸಿದ್ದಾರೆ. ಈ ಗ್ರಂಥದ ರಚನಾಕಾಲವನ್ನು ಊಹಿಸಲು ಯೋಗ್ಯವಾದ ಸಾಧನಗಳು ದೊರೆಯಲಿಲ್ಲ. ಆದರೆ, ಈ ಗ್ರಂಥವನ್ನು ಮಲ್ಲಿಕಬ್ಬೆಯು ಬರೆಯಿಸಿ ಶ್ರೀ ಮಾಘನಂದ್ಯಾಚಾರ್ಯರಿಗೆ ಶಾಸ್ತ್ರದಾನ ಮಾಡಿರುವಳೆಂದು ಅಂತಿಮ ಪ್ರಶಸ್ತಿಯಲ್ಲಿರುವುದರಿಂದ ಶ್ರೀ ಮಾಘನಂದ್ಯಾಚಾರ್ಯರ ಕಾಲಕ್ಕಿಂತ ಇದರ ರಚನಾಕಾಲವು ಮೊದಲಾಗಿರಬೇಕೆಂದು ಊಹಿಸಬಹುದು.

೧೧. ಮನೆಗಳಲ್ಲಿ ಜಿನಪೂಜೆ

ಜಿನ ಶ್ರಾವಕರ ದೈನಿಕ-ಷಟ್ಕರ್ಮಗಳಲ್ಲಿ ದೇವಪೂಜೆಗೆ ಪ್ರಥಮ ಸ್ಥಾನವಿರುತ್ತದೆ. ಮದ್ಯ ಮಾಂಸತ್ಯಾಗಾದಿ ಅಷ್ಟಮೂಲಗುಣಗಳನ್ನೂ ದೇವಪೂಜೆ, ಗುರೂಪಾಸ್ತಿ ಮೊದಲಾದ ಷಟ್ಕರ್ಮಗಳನ್ನೂ ಪಾಲಿಸುವವನೇ ನಿಜವಾದ ಶ್ರಾವಕನೆಂದು ಆಚಾರ ಗ್ರಂಥಗಳಲ್ಲಿ ಉಕ್ತವಾಗಿದೆ. ಹಿಂದಿನ ಕಾಲದಲ್ಲಿ ಶ್ರಾವಕರು ತಂತಮ್ಮ ಮನೆಗಳಲ್ಲಿ, ಜಿನಬಿಂಬಗಳನ್ನಿಟ್ಟು ನಿತ್ಯಪೂಜೆಯನ್ನು ಮಾಡುವುದರೊಂದಿಗೆ ಜಿನಮಂದಿರಗಳಲ್ಲಿಯೂ ನಿತ್ಯ-ನೈಮಿತ್ತಿಕ ಪೂಜೆಗಳನ್ನೂ ಮಾಡಿ ಅಲ್ಲಿರುವ ಜಿನಮುನಿಗಳಿಂದ ಧರ್ಮಶ್ರವಣವನ್ನು ಮಾಡಿ ಪ್ರತ್ಯಾಖ್ಯಾನ (ವ್ರತ-ನಿಯಮ)ಗಳನ್ನು ಸ್ವೀಕರಿಸಿ ಆ ಮೇಲೆ ತಮ್ಮ ಆಜೀವಿಕೆಯ ಕಾರ್ಯದಲ್ಲಿ ನಿರತರಾಗುತ್ತಿದ್ದರೆಂದು ಹಿಂದಿನ ಸಾಹಿತ್ಯಗಳಿಂದ ತಿಳಿದುಬರುತ್ತದೆ. "ನ ವಿತಸ್ತ್ಯಧಿಕಾಂ ಜಾತು ಪ್ರತಿಮಾಂ ಸ್ವಗೃಹೇಽರ್ಚಯೇತ್" ಎಂದು ಮೊದಲಾದ ಪ್ರತಿಷ್ಠಾ ಶಾಸ್ತ್ರಗಳ ಪ್ರಮಾಣಗಳಿಂದ ಮನೆಗಳಲ್ಲಿ ಜಿನಪ್ರತಿಮೆಯನ್ನಿಟ್ಟು ಪೂಜಿಸುವ ಪರಿಪಾಠಿಯು ಬಹಳ ಹಿಂದಿನ ಕಾಲದಿಂದ ನಡೆದು ಬಂದಿದ್ದಿತೆಂದು ಸ್ಪಷ್ಟವಾಗಿದೆ.

ಕೆಲವು ಸಮಯದಿಂದೀಚೆಗೆ ಹೊಸದಾಗಿ ಕಟ್ಟಿಸಿದ ಮನೆಗಳ ಹೊರತು ಹಿಂದಿನ ಜೈನರ ಪ್ರತಿ ಮನೆಗಳಳಲ್ಲಿಯೂ 'ದೇವರ ಕೋಣೆ' ಅಥವಾ 'ದೇವರ ಗೂಡು' ಎನ್ನುವ ಒಂದು ಸ್ಥಾನವು ಇದ್ದೇ ಇರುತ್ತದೆ. ಕೆಲವು ಮನೆಗಳಲ್ಲಿ ಆ ಸ್ಥಾನಗಳಲ್ಲಿ ಜಿನಬಿಂಬವನ್ನಿಟ್ಟು ಪೂಜಿಸುತ್ತಲೂ ಇದ್ದಾರೆ. ಇದು ಸ್ತುತ್ಯವೂ ಆವಶ್ಯಕವೂ ಆಗಿದೆ. ಜಿನಪ್ರತಿಮೆಯಿರುವುದು ಗೃಹಕ್ಕೆ ಭೂಷಣವೂ ಮಂಗಲಕರವೂ ಆಗಿದೆ. ಆದರೆ ಈಗೀಗ ನಮ್ಮ ಸಮಾಜದ ಪ್ರಮಾದದಿಂದಲೋ, ಉದಾಸೀನತೆಯಿಂದಲೋ, ಈ ಪರಿಪಾಠಿಯು ಲುಪ್ತವಾಗುತ್ತಾ ಬಂದಿದೆ.

ಜಿನಪ್ರತಿಮೆಯನ್ನು ಪೂಜಿಸುವುದರಿಂದ ಗೃಹದಲ್ಲಿ ಪವಿತ್ರತೆಯುಂಟಾಗುವುದಲ್ಲದೆ ಮನೆಯ ವಾತಾವರಣವೂ ಪರಿಶುದ್ಧವಾಗುತ್ತದೆ. ಮಾತ್ರವಲ್ಲದೆ ಆ ಮನೆಯ ಜನರಿಗೂ ಮುಂದಿನ ಸಂತತಿಗೂ ದೈವಭಕ್ತಿ ಮತ್ತು ಶುಭಭಾವವುಂಟಾಗಲು ಕಾರಣವಾಗುತ್ತದೆ. ಬೆಳಗ್ಗೆ ಹಾಸಿಗೆಯಿಂದೆದ್ದು ಮಂಗಲಕ್ಕಾಗಿ ಯಾವುದಾದರೊಂದು ಮಂಗಲ ವಸ್ತುವನ್ನು ನೋಡಬೇಕೆಂದು ಶಕುನ ಶಾಸ್ತ್ರದ ವಿಧಿ ಇರುತ್ತದೆ. ಅಂತಹ ಸಂದರ್ಭದಲ್ಲಿ ಲೋಕೋತ್ತರ ಮಂಗಲವಾದ ಜಿನಪ್ರತಿಮೆಯ ದರ್ಶನಕ್ಕಿಂತಲೂ ಹೆಚ್ಚಿನ ಮಂಗಲಕರವಾದ ದರ್ಶನೀಯ ವಸ್ತು ಬೇರೆ ಇರಲಾರದು. ಈ ಆಶಯವನ್ನು ಭೂಪಾಲ ಕವಿಯು "ಜಿನ ಚತುರ್ವಿಂಶತಿಕಾ" ಸ್ತೋತ್ರದಲ್ಲಿ ಎಷ್ಟು ಸುಂದರವಾಗಿ ವರ್ಣಿಸಿರುವನು ನೋಡಿರಿ!

ಸುಪ್ತೋತ್ಥಿತೇನ ಸುಮುಖೇನ ಸುಮಂಗಲಾಯ ।
ದೃಷ್ಟವ್ಯಮಸ್ತಿ ಯದಿ ಮಂಗಲಮೇವ ವಸ್ತು ॥
ಅನ್ಯೇನ ಕಿಂ ತದಿಹ ನಾಥ ತವೈವ ವಕ್ತ್ರಂ ।
ತ್ರೈಲೋಕ್ಯಮಂಗಲನಿಕೇತನಮೀಕ್ಷಣೀಯಮ್ ॥ ೧೯ ॥

ತಾತ್ಪರ್ಯ:—"ನಿದ್ರೆಯಿಂದೆದ್ದ ಸುಮುಖನು ಮಂಗಲವುಂಟಾಗುವುದಕ್ಕಾಗಿ ಯಾವುದಾದರೊಂದು ಮಂಗಲ ವಸ್ತುವನ್ನು ನೋಡಬೇಕೆಂದು ವಿಧಿಯಿರುವುದಾದರೆ ಹೇ ಸ್ವಾಮಿಯೇ! ಆತನು ಇತರ ವಸ್ತುಗಳನ್ನು ನೋಡುವುದರಿಂದೇನು ಪ್ರಯೋಜನವಾದೀತು? ಮೂರು ಲೋಕದ ಮಂಗಲಕ್ಕೆ ಸ್ಥಾನವಾದ ನಿನ್ನ ಮುಖವೇ ನೋಡಲು ಯೋಗ್ಯವಾದುದು." ಅಂತಹ ಜಿನಮುಖಾವಲೋಕನಕ್ಕಾಗಿ ಜಿನಬಿಂಬವು ಮನೆಯಲ್ಲಿರುವುದು ಅವಶ್ಯವಾಗಿದೆ. "ಜಿನಪ್ರತಿಮೆಯನ್ನೇನೋ ಮನೆಯಲ್ಲಿಡಬಹುದು; ಆದರೆ ಅದಕ್ಕೆ ಪೂಜೆ ಮಾಡುವವರು ಬೇಕಲ್ಲವೇ? ನಮಗೆ ಸಮಯವಿಲ್ಲ. ನಮ್ಮ ಮಕ್ಕಳಿಗೆ ತಿಳಿಯುವುದಿಲ್ಲ. ನಾವೇನು ಮಾಡಬೇಕು?" ಎಂದು ಕೆಲವರು ಕೇಳುವವರಿದ್ದಾರೆ. ಅಂತಹ ಮಹಾಶಯರುಗಳಲ್ಲಿ ವಿನಮ್ರ ವಿಜ್ಞಪ್ತಿಯೇನೆಂದರೆ:—"ನಾವು ಇತರ ಆವಶ್ಯಕ ಕಾರ್ಯಗಳಿಗಾಗಿ ಸಾಕಷ್ಟು ಸಮಯವನ್ನು ಹೇಗಾದರೂ ಒದಗಿಸಿಕೊಳ್ಳುತ್ತಿರುವೆವು. ಹಾಗೆಯೇ ದೇವಪೂಜೆಯೂ ಅತ್ಯಾವಶ್ಯಕ ಹಾಗೂ ಅನಿವಾರ್ಯ ಕಾರ್ಯ

ವೆಂದಿಟ್ಟುಕೊಂಡರೆ ಅದಕ್ಕೆ ಸಾಕಷ್ಟು ಸಮಯವನ್ನು ಒದಗಿಸಿಕೊಳ್ಳಲು ಕಷ್ಟವಾಗದು. 10-15 ಮಿನಿಟುಗಳೊಳಗೆ ಸಂಕ್ಷಿಪ್ತವಾಗಿ ನಿತ್ಯಪೂಜೆಯನ್ನು ಮಾಡಿ ಬಿಡಬಹುದು. ಇನ್ನು ತಮ್ಮ ಮಕ್ಕಳಿಗೆ ಅದನ್ನು ಕಲಿಸುವುದೂ ಕಷ್ಟವಲ್ಲ. ಹಿರಿಯರ ಅನುಕರಣೆಯಿಂದ ಅವರು ಸ್ವತಹ ಕಲಿಯಲು ಯತ್ನಿಸಲೂ ಬಹುದು. ಇದಕ್ಕೆ ಸಹಾಯಕವಾಗಿ ಸಂಕ್ಷಿಪ್ತ ಪೂಜಾವಿಧಿಗಳು ಪ್ರಕಟವಾಗುತ್ತವೆ. ಶ್ರದ್ಧೆಯಿಂದ ಈ ಕಾರ್ಯವನ್ನು ಆರಂಭಿಸಿದುದಾದರೆ ಇದರಲ್ಲಿ ಯಾವ ತೊಡಕೂ ಉಂಟಾಗದು."

ಇನ್ನು ಮನೆಗಳಲ್ಲಿಟ್ಟು ಪೂಜಿಸುವ ಜಿನಬಿಂಬಗಳ ಪರಿಮಾಣವೆಷ್ಟು? ಎಂಬ ಪ್ರಶ್ನೆಯುಂಟಾಗುತ್ತದೆ. ಈ ವಿಷಯದಲ್ಲಿ ಹಲವರು ಹಲವು ರೀತಿಯಿಂದ ಅಭಿಪ್ರಾಯಪಡುವರು. ಜಿನಪೂಜೆಯಿಂದ ಶುಭವಲ್ಲದೆ ಎಂದಿಗೂ ಅಶುಭವುಂಟಾಗಲಾರದಾದರೂ ಶಿಲ್ಪಶಾಸ್ತ್ರಕ್ಕನುಸಾರವಾಗಿ ಏಕಸಂಧಿ ಮೊದಲಾದ ಆಚಾರ್ಯರು ಸಂಹಿತಾಗ್ರಂಥಗಳಲ್ಲಿ 'ಗೃಹಬಿಂಬ'ದ ಪರಿಮಾಣವನ್ನೂ ಅದರ ಶುಭಾಶುಭ ಫಲಗಳನ್ನೂ ಹೇಳಿರುವರು:

"ನವಿತಸ್ತ್ಯಧಿಕಾಂ ಜಾತು ಪ್ರತಿಮಾ ಸ್ವಗೃಹೇಽರ್ಚಯೇತ್"

(ಆಶಾಧರಕೃತ ಪ್ರತಿಷ್ಠಾಸಾರೋದ್ಧಾರ)

"ವಿತಸ್ತಿರ್ದ್ವಾದಶಾಂಗುಲಃ" ಎಂದು ಅಮರಕೋಶದಲ್ಲಿ ಹೇಳಿರುವಂತೆ ಹನ್ನೆರಡು ಅಂಗುಲಗಳಿಗೆ ಒಂದು 'ವಿತಸ್ತಿ' ಎಂದು ಹೆಸರು. ವಿತಸ್ತಿ (೧೨ ಅಂಗುಲ)ಗಿಂತ ಅಧಿಕ ಪರಿಮಾಣವುಳ್ಳ ಜಿನಪ್ರತಿಮೆಯನ್ನು ಮನೆಯಲ್ಲಿಟ್ಟು ಪೂಜಿಸಬಾರದೆಂದು ಮೇಲಿನ ಶ್ಲೋಕಾರ್ಧದ ಅಭಿಪ್ರಾಯವಾಗಿದೆ.

"ಅಥಾತಃ ಸಂಪ್ರವಕ್ಷ್ಯಾಮಿ, ಗೃಹಬಿಂಬಸ್ಯ ಲಕ್ಷಣಂ ।
ಏಕಾಂಗುಲಂ ಭವೇಚ್ಛ್ರೇಷ್ಠಂ, ದ್ವ್ಯಂಗುಲಂ ಧನನಾಶನಂ ॥
ತ್ರ್ಯಂಗುಲೇ ಜಾಯತೇ ವೃದ್ಧಿಃ, ಪೀಡಾ ಸ್ಯಾಚ್ಚತುರಂಗುಲೇ ।
ಪಂಚಾಂಗುಲೇ ತು ವೃದ್ಧಿಃ ಸ್ಯಾ-ದುದ್ವೇಗಸ್ತು ಷಡಂಗುಲೇ ॥
ಸಪ್ತಾಂಗುಲೇ ಗವಾಂ ವೃದ್ಧಿ-ರ್ಹಾನಿರಷ್ಟಾಂಗುಲೇ ಮತಾ ।
ನವಾಂಗುಲೇ ಪುತ್ರವೃದ್ಧಿ-ರ್ಧನನಾಶೋ ದಶಾಂಗುಲೇ ॥
ಏಕಾದಶಾಂಗುಲಂ ಬಿಂಬಂ, ಸರ್ವಕಾಮಾರ್ಥಸಾಧಕಂ ।
ಏತತ್ಪ್ರಮಾಣಮಾಖ್ಯಾತ-ಮತ ಊರ್ಧ್ವಂ ನ ಕಾರಯೇತ್ ॥"

ಒಂದು ಅಂಗುಲ ಪರಿಮಾಣವುಳ್ಳ ಜಿನಬಿಂಬವು ಶ್ರೇಷ್ಠವಾಗಿದೆ. ಎರಡು ಅಂಗುಲದಿಂದ ಧನನಾಶವೂ, ಮೂರಂಗುಲದಿಂದ ವೃದ್ಧಿಯೂ, ನಾಲ್ಕಂಗುಲದಿಂದ ಪೀಡೆಯೂ, ಐದಂಗುಲದಿಂದ ವೃದ್ಧಿಯೂ, ಆರಂಗುಲದಿಂದ ಉದ್ವೇಗವೂ, ಏಳಂಗುಲದಿಂದ ಗೋವೃದ್ಧಿಯೂ, ಎಂಟು ಅಂಗುಲದಿಂದ ಹಾನಿಯೂ, ಒಂಬತ್ತು ಅಂಗುಲದಿಂದ ಪುತ್ರವೃದ್ಧಿಯೂ ಹತ್ತು ಅಂಗುಲದಿಂದ ಧನನಾಶವೂ ಉಂಟಾಗುವುದು; ಮತ್ತು ಹನ್ನೊಂದು ಅಂಗುಲ ಪರಿಮಾಣವುಳ್ಳ ಬಿಂಬವು ಸರ್ವ ಇಷ್ಟಾರ್ಥ ಸಾಧಕವೆಂದೂ, ಇದಕ್ಕಿಂತ ಹೆಚ್ಚಿನ ಪರಿಮಾಣವುಳ್ಳ ಬಿಂಬವನ್ನು ಮಾಡಿಸಬಾರದೆಂದೂ, ಮೇಲಿನ ಶ್ಲೋಕಗಳ ಅಭಿಪ್ರಾಯವಾಗಿದೆ. ಅಂದರೆ ಒಂದು ಅಂಗುಲದಿಂದ ಹನ್ನೊಂದು ಅಂಗುಲಗಳ ವರೆಗೆ ವಿಷಮಾಂಗುಲವುಳ್ಳ ಬಿಂಬಗಳು ಯೋಗ್ಯಗಳೆಂದೂ ಸಮಾಂಗುಲವುಳ್ಳವುಗಳು ಅಯೋಗ್ಯಗಳೆಂದೂ ಭಾವವು. ಹನ್ನೆರಡು ಅಂಗುಲವೂ ಸಮಾಂಗುಲವಾಗಿರುವುದರಿಂದ ಅಯೋಗ್ಯವಾಗಿದೆ. ಇದು ಗೃಹಬಿಂಬ (ಮನೆಯಲ್ಲಿ ಪೂಜಿಸುವ ಬಿಂಬ)ದ ಲಕ್ಷಣವು.

ಈ ಪ್ರಕಾರವಾಗಿ ಜಿನಬಿಂಬವನ್ನಿಟ್ಟು ಪೂಜಿಸುವವರೂ, ನೂತನ ಜಿನಬಿಂಬಗಳನ್ನು ಮಾಡಿಸುವವರೂ ಮೇಲಿನ ಪ್ರಮಾಣವನ್ನನುಸರಿಸಿ ಯೋಗ್ಯ ಬಿಂಬಗಳನ್ನು ಪೂಜಿಸುವುದೊಳ್ಳೆಯದು.

೧೨. ಭಾರತದಲ್ಲಿ ಜೈನಧರ್ಮದ ಪ್ರಭಾವ

ಜೈನರು ಪಂಡಿತರು; ಶಾಸ್ತ್ರಜ್ಞರು; ಕವಿಗಳು; ಲೌಕಿಕಕಲೆಗಳಲ್ಲಿಯೂ ನಿಪುಣರು. ಇವರ ಸಹವಾಸದಿಂದಲೂ ಸಹಕಾರದಿಂದಲೂ ಉತ್ತಮವಾದ ನೀತಿಮಾರ್ಗವು. ತಲೆದೋರಿತು. ನೀತಿಗ್ರಂಥಗಳು ಅಧಿಕವಾದುವು. ತಮಿಳ ಭಾಷೆಗೆ ಸರಿಯಾಗಿ ಹೊಂದುವಂತೆ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳ ಶಬ್ದಗಳನ್ನು ಹವಣಿಸಿ ತಮಿಳಂತೆ ಮಾಡಿದರು. ಆ ಭಾಷೆಗಳಲ್ಲಿಯ ಉತ್ತಮಕಾವ್ಯಗಳನ್ನೂ ಅವುಗಳ ಸಾರವನ್ನೂ ತಮಿಳಿಗೆ ತಂದು ಲಕ್ಷಣಗ್ರಂಥಗಳನ್ನೂ ಬರೆದರು. ವಾಙ್ಮಯದ ವೈಖರಿಯೇ ಇವರ ಕೈಗೆ ಬಂದ ಬಳಿಕ ಬೇರೊಂದು ಕಳೆಯನ್ನು ಪಡೆಯಿತು. ಇದು ಭಾಷೆಗೆ ನಡೆದ ಉಪಕಾರವು.

ಇನ್ನು ಜನಸಮಾಜಕ್ಕೆ ಮಾಡಿದ ಉಪಕಾರವನ್ನು ಹೇಳುವುದೆಂದರೆ ಸುಲಭವಲ್ಲ. ಇಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಮುಖ್ಯವಾಗಿ ಧರ್ಮೋಪದೇಶದಿಂದಲೂ ಸದ್ಧರ್ಮದ ಆಚರಣದಿಂದಲೂ ಅಹಿಂಸಾ ಜ್ಞಾನವು ನಲೆಗೊಂಡು ಬಹುಜನರು ಮಧುಮಾಂಸಗಳ ಸೇವನವನ್ನುಳಿದರು. ಬ್ರಾಹ್ಮಣರೂ ಮತ್ತಿನ ಉತ್ತಮವರ್ಣದವರೂ ಮಾಂಸಾಹಾರವನ್ನು ಬಿಡಲಿಕ್ಕೆ ಜೈನರು ಹಾಕಿದ ಮೇಲುಪಂಕ್ತಿಯೇ ಎಂದು ಕೆಲವರು ಹೇಳುವರು. ಇದಲ್ಲದೆ ಹಿಂಸಾಯಜ್ಞಗಳನ್ನು ಬಿಟ್ಟು ಜೀವ ಹಿಂಸೆಯಾಗದ ಯಜ್ಞಗಳನ್ನು ಮಾಡತೊಡಗಿದರು. ಭಗವಂತನು ಸೃಷ್ಟಿ ಸ್ಥಿತಿಲಯಗಳಿಗೆ ಅಧಿಕಾರಿಯಾಗಿದ್ದರೂ, ಜೀವನು ತಾನು ಮಾಡಿದ ದುಷ್ಕರ್ಮಕ್ಕೆ ಭಗವಂತನನ್ನು ನಿಂದಿಸದೆ, ಅದರ ದುಷ್ಫಲವನ್ನು ಅನುಭವಿಸುವಂದು ಭಗವಂತನನ್ನು ದೂರದೆ ಸತ್ಕರ್ಮನಿರತನಾಗಿರಬೇಕೆಂದು ಜನರ ಬಗೆಯನ್ನು ತಿದ್ದಿದರು.

ಇದಲ್ಲದೆ ವಿಗ್ರಹಾರಾಧನೆ, ಪುರಾಣಪುರುಷರ ಪೂಜೆ, ವೃಕ್ಷಪೂಜೆ, ನಾಗಪೂಜೆ, ಗಣಪತಿಪೂಜೆ, ದೇವಾಲಯುಗಳ ನಿರ್ಮಾಣ ಮತ್ತು ಅವುಗಳ ಜೀರ್ಣೋದ್ಧಾರವೇ ಮೊದಲಾದುವು ಶುದ್ಧಶೈವ—ವೈಷ್ಣವಮತಗಳಲ್ಲಿ ವಾಡಿಕೆಗೆ ಜೈನರ ಸಂಪ್ರದಾಯುವನ್ನು ನೋಡಿ ಬಂದುವೆಂದು ಕೆಲವರು ಹೇಳುವರು. ನಿರಂಜನನಿರ್ಲೇಪನಾದ ಭಗವಂತನ ಆರಾಧನೆಗೆ ಮತ್ತಿನ ವಿಗ್ರಹ ಮೊದಲಾದುವು ಅನವಶ್ಯವಾದುದರಿಂದ ಜೈನರು ಮಾಡುವ ಅರ್ಹತ್ಪೂಜೆ, ಕೇವಲಿಪೂಜೆ, ಇತ್ಯಾದಿಗಳಿಂದ ಮೇಲೆ ಹೇಳಿದ ಪದ್ಧತಿಗಳು ಬಂದಿರಬಹುದು.

ಜೈನರಿಂದ ದೇಶಕ್ಕೆ ಒದಗಿದ ಉಪಕಾರಗಳನ್ನು ಪರಿಗಣಿಸುವಲ್ಲಿ ಮೊದಲು ಭಾಷೆಯುನ್ನು (ದೇಶಭಾಷೆಯುನ್ನು) ಸರಿಪಡಿಸಿ (ಸಂಸ್ಕಾರಗೊಳಿಸಿ) ಕಾವ್ಯನಾಟಕವೇ ಮೊದಲಾದ ಗ್ರಂಥಗಳ ರಚನೆಗೆ ಅನುಕೂಲಿಸಿದೊಂದು. ಈ ಭಾಷೆಯಲ್ಲಿ ಲಕ್ಷಣಗ್ರಂಥಗಳ ರಚನೆ ಮತ್ತೊಂದು. ಇದಲ್ಲದೆ ಅತಿ ಸುಲಭವಾಗಿ ಜೀವಾದಿತತ್ವಗಳನ್ನು ಜನರು ತಿಳಿವಂತೆ ಅನೇಕ ವಿಷಯುಗಳನ್ನೊಳಗೊಂಡ ಉಪದೇಶಗಳು; ವಿವಿಧವಾದ ಮತಶಾಸ್ತ್ರಗಳ ಸಂಬಂಧವಾದ ಗ್ರಂಥಗಳು; ಸರ್ವಜನ ಸಾಮಾನ್ಯವಾದ ಕಥೆಗಳು; ಶಿಲ್ಪ, ವಿಶ್ವಕರ್ಮ, ವೈದ್ಯ, ಜ್ಯೋತಿಷ ಮೊದಲಾದ ಕಲೆಗಳ ವಿಜ್ಞಾನ ಶಾಸ್ತ್ರಗಳೂ ಹೊರಬಿದ್ದು ವೃದ್ಧಿಗೊಳಿಸಿದುದು. ಅಸಾಧಾರಣವಾದ ಜೈನತತ್ವಶಾಸ್ತ್ರವನ್ನು ಚೆನ್ನಾಗಿ ವಿಮರ್ಶೆ ಮಾಡಿದಲ್ಲಿ ಅವರ ತರ್ಕ, ಪ್ರಮಾಣ, ನ್ಯಾಯುಶಾಸ್ತ್ರಗಳು ಉತ್ಕೃಷ್ಟವಾದುವೆಂದು ಪಂಡಿತರು ಒಪ್ಪಿಕೊಳ್ಳುವರು. ಇವುಗಳಲ್ಲಿ ಜೈನೇತರರಿಗೆ ಪರಿಚಯುವು ಹೆಚ್ಚಿದಲ್ಲಿ ಸಮಾಜ ಸಂಸ್ಕಾರಕ್ಕೆ ಸಹಕಾರವಾಗುವುದೆನ್ನುವರು. ನಮ್ಮ ಈಗಳಿನ ಭೌತಿಕಶಾಸ್ತ್ರಪರಿಚಯುವುಳ್ಳವರು ಜೈನತತ್ವಗಳು ಅಮೋಘವಾದುವೆಂದು ಹೇಳುವರು.

ಪಾಶ್ಚಾತ್ಯಪಂಡಿತರು ಜೈನಗ್ರಂಥಗಳ ಪರಿಚಯುದಿಂದ ಜೈನಧರ್ಮವನ್ನು ಗೌರವಿಸುವುದು ಮಾತ್ರವಲ್ಲದೆ ಈ ಧರ್ಮವೇ ಮತ್ತಿನ ಧರ್ಮಗಳಿಗಿಂತ ಶ್ರೇಷ್ಠವಾದುದೆಂದು ನಂಬಿ ಅನೇಕರು ಮಧುಮಾಂಸಗಳನ್ನು ವರ್ಜಿಸಿ ಶುದ್ಧರಾಗಿರುವರು. ಮಾಂಸ ಮದ್ಯಸೇವನೆ ಈ ಶರೀರದ

ಪೋಷಣೆಗೆ ಅನವಶ್ಯವೆಂದು ಈಗಳಿನ ಶಾಸ್ತ್ರಜ್ಞರು ಕಂಡುಹಿಡಿಯಲಿ; ಈ ತತ್ವವು ಜಿನಧರ್ಮಕ್ಕೆ ಹೊಸದಲ್ಲ. ತಿರ್ಯಗ್ಜೀವಗಳಿಗೆ ಆತ್ಮವಿಲ್ಲವೆಂದು ಕೆಲವರು ವಾದಿಸಿಯಾಯ್ತು; ಸಸ್ಯಾದಿಗಳಲ್ಲಿಯೂ ಜೀವನಿರುವನೆಂಬು ದನ್ನು ಈಗಳಿನ ಶಾಸ್ತ್ರಜ್ಞರು ಈಗ ಒಪ್ಪಿಕೊಳ್ಳಲಿ. ಇದನ್ನು ಬಹು ಕಾಲಕ್ಕೆ ಹಿಂದೆಯೇ ಜೈನಧರ್ಮದಲ್ಲಿ ಕಂಡುಹಿಡಿದಿದ್ದುದರಿಂದ ಇದೇನೂ ಹೊಸ ಸುದ್ದಿಯಲ್ಲ. ಇನ್ನೂ ನಾವು ಜೈನಗ್ರಂಥಗಳನ್ನು ಓದುತ್ತ ಓದುತ್ತ ಬಂದಲ್ಲಿ ನಮಗೆ ನೂತನ ಭೌತಿಕ ಶಾಸ್ತ್ರಜ್ಞರ ಪ್ರವಚನಗಳು ನಿಜವೆಂದು ಒಪ್ಪಿಕೊಳ್ಳುವ ಸಮಯಕ್ಕೆ ಅನಾದಿ ಸಂಸಿದ್ಧವಾದ ಜೈನಧರ್ಮದ ಮಹತ್ವವು ವಿಶದವಾಗುವುದು.

ಉದಾಹರಣಕ್ಕಾಗಿ ಗ್ರಂಥಗಳ ಆಧಾರದಿಂದ ದೊರೆವ ಒಂದೆರಡು ಪದ್ಧತಿಗಳನ್ನು ನೋಡುವ:—

(೧) ಶ್ರೀಯಾಂಸಮಹಾರಾಜನು ಆದಿತೀರ್ಥೇಶ್ವರರಿಗೆ ವೈಶಾಖ ಶುದ್ಧ ತದಿಗೆಯಲ್ಲಿ ಇಕ್ಷುರಸವನ್ನು ಪಾಣಿಪುಟದೊಳೆರೆಯಲು, ಆ ದಾನ ವನ್ನು ದೇವತೆಗಳು ಅಕ್ಷಯದಾನವೆಂದು ಕೊಂಡಾಡಲು, ಅಂದಿನಿಂದಿತ್ತ **ಅಕ್ಷತೃತೀಯೆ**ಯಾಯ್ತು.

(೨) ಬ್ರಾಹ್ಮಣರ ಸದಾಚಾರಕ್ಕೆ ಮೆಚ್ಚಿ ಭರತಚಕ್ರೇಶ್ವರನು ಪದ್ಮ ನಿಧಿಯಿಂದ ದಿವ್ಯಸೂತ್ರವನ್ನು ತರಿಸಿ, ಅವರವರ ವ್ರತಶೀಲದೃಢಚರ್ಯೆ ಗಳನ್ನು ಪ್ರಕಟಿಸಿ ಷಡ್ದ್ರವ್ಯ, ಪಂಚಾಸ್ತಿಕಾಯ, ಸಪ್ತತತ್ವ, ನವ ಪದಾರ್ಥಗಳೆಂಬ ೨೭ ಮಡಿಯಾಗಿ ನವದೇವತಾಸಂಕಲ್ಪದಿಂದ ೯ ಎಳೆ ಗಳನ್ನೂ ಹುರಿಗೊಳಿಸಿ, ಸಮ್ಯಗ್ದರ್ಶನಜ್ಞಾನಚಾರಿತ್ರಗಳೆಂಬ ರತ್ನತ್ರಯ ದಿಂದ ಪವಿತ್ರಗಾತ್ರರಾಗಿರುವ ಇವರ ಭಾವಸೂತ್ರಕ್ಕೆ ದಿವ್ಯಸೂತ್ರವನ್ನು ಅವರ ಕೊರಲಲ್ಲಿಕ್ಕಿಸಿ, ವಸ್ತ್ರಾಭರಣಾದಿಗಳಿಂದ ಪೂಜಿಸಿ ಗೃಹಗ್ರಾಮ ಕ್ಷೇತ್ರಾದಿಗಳನ್ನು ಕೊಟ್ಟು ಮನ್ನಿಸಿ, ಅವರನ್ನು ಧರಾಮರರೆಂದು ಕೊಂ ಡಾಡಿದನು. ಅಂದಿನಿಂದ ಆ ದ್ವಿಜರಿಗೆ ಶ್ರಾವಣ ಶುದ್ಧ ಪೂರ್ಣಮಿಯು ಶ್ರವಣ ನಕ್ಷತ್ರವು **ಉಪಾಕರ್ಮ** ಪರ್ವತಿಥಿಯಾಯ್ತು.

(೩) ಶ್ರೀಮದಾದಿಪರಮೇಶ್ವರನು ಮಾಘ ಬಹುಳ ಚತುರ್ದಶಿ ಯಂದು ಶಿವಲೋಕಪ್ರಾಪ್ತನಾಗಲು, ದೇವೇಂದ್ರಾದಿಚತುರ್ನಿಕಾಯಾ

ಮರರು ಬಂದು ದಿವ್ಯವಾದ ಜಲ, ಗಂಧ, ಅಕ್ಷತೆ, ಪುಷ್ಪ, ಚರು, ದೀಪ, ಧೂಪ, ಫಲ, ಅರ್ಘ್ಯಗಳಿಂದ ಅನೇಕಾರ್ಚನೆಗಳಿಂದ ಆ ಕೈಲಾಸವನ್ನು ಪೂಜಿಸಿ ಪರಿನಿರ್ವಾಣಕಲ್ಯಾಣೋತ್ಸವವನ್ನು ಮಾಡಿ ಹೋಗಲು ಅಂದಿ ನಿಂದಿತ್ತ ಆ ತಿಥಿ **ಶಿವರಾತ್ರಿ**ಯೆಂಬ ಪುಣ್ಯದಿನವಾಯ್ತು.

(೪) ಸಾಕೇತನಗರದಲ್ಲಿ ಆನಂದಮಹಾರಾಜನು ಗುರೂಪದೇಶ ದಿಂದ ಸೂರ್ಯಬಿಂಬದಲ್ಲಿದ್ದ ದೇವನನ್ನು ತ್ರಿಕಾಲದಲ್ಲಿಯೂ ಅರ್ಘ್ಯ ಪಾದ್ಯಾದಿಗಳಿಂದ ಅಷ್ಟವಿಧಾರ್ಚನೆಯಿಂದ ಅರ್ಚಿಸುತ್ತ, ಸ್ತೋತ್ರ ನಮ ಸ್ಕಾರಗಳನ್ನು ಮಾಡಲು ಅಂದಿನಿಂದಿತ್ತ ಸೂರ್ಯದೇವರ ಉಪಾಸನೆ ಯನ್ನು ಮಾಡುತ್ತ ಬಂದರು. ಆದರಿಂದ **ಸೌರಮತ**ವಾಯಿತು.

(೫) ಅಯೋಧ್ಯಾಪುರದ ರಾಮಸ್ವಾಮಿಯ ತ್ರಿಜಗದ್ಭೂಷಣವೆಂಬ ಪಟ್ಟಗಜೇಂದ್ರವು ಮದದಿಂದ ಬರುತ್ತಿರುವಲ್ಲಿ ಭರತನನ್ನು ಕಂಡು ಜಾತಿ ಸ್ಮರವಾಗಿ, ಪೂರ್ವಭವವನ್ನು ತಿಳಿದು ಭರತನೊಡನಿದ್ದು ಹುಲ್ಲುಕವಳ ವನ್ನು ಕೊಳ್ಳದಿರಲು, ಅದರ ವೃತ್ತಾಂತವನ್ನು ತ್ರಿಜ್ಞಾನಧರರು ಅರಸನಿಗೆ ಅರಿಪಲು, ಅದಕ್ಕೆ ವ್ರತನಿಯಮವನ್ನು ಕೊಟ್ಟ ಬಳಿಕ, ಅದಕ್ಕೆ ನೆನೆದಕ್ಕಿ, ಕಡಲೆ, ಚಿಗುಳಿ, ತಂಬಿಟ್ಟು ಹಣ್ಣುಕಾಯನ್ನು ಕೊಡುತ್ತಿರಲು, ಅದರಿಂದ ಜೀವಿಸಿ ಕಾಲವನ್ನು ನೂಕಿ ಜೀವಿತಾಂತದಲ್ಲಿ ಅದು ದೇವನಾಗಲು,— ಅದರ ಪ್ರತಿರೂಪವನ್ನು ಶಿಲೆ ಮೊದಲಾದುವುಗಳಲ್ಲಿ ಮಾಡಿ ಪೂಜಿಸಲು, ಆ ದೇವನು ಪ್ರತ್ಯಕ್ಷನಾಗಿ ಜನರ ಅಭೀಷ್ಟವನ್ನು ಸಲಿಸುತ್ತಿರಲು,— ದೇವಸಮೂಹಕ್ಕೆ ಅಧೀಶನಾದುದರಿಂದ **ಗಣೇಶ**ನೆಂದು ಭಾದ್ರಪದ ಶುದ್ಧ ಚತುರ್ಥಿಯಲ್ಲಿ ಪ್ರತಿಷ್ಠೆಯನ್ನು ಮಾಡಿದರು.

(೬) ವಜ್ರಬಾಹುವೆಂಬ ಅರಸನು ವನವಿಹಾರಕ್ಕೆ ಹೋದಲ್ಲಿ ಒಂದು ರಮ್ಯಪ್ರದೇಶದಲ್ಲಿ ಹತ್ತಿಯ ಗಿಡಕ್ಕೆ ಮಲ್ಲಿಕಾರೋಹಣವಾಗಿರಲು ಅಲ್ಲಿ ಹೋಗಿ ಆ ಅತಿಶಯವನ್ನು ನೋಡಿ ದೇವತಾಮಹತ್ವವನ್ನು ಕಂಡು ಎಲ್ಲರೂ ಪೂಜಿಸಲು, ಅವರವರಿಗೆ ವರವನ್ನು ಸಲ್ಲಿಸಿದುದರಿಂದ **ಮಲ್ಲಿ ಕಾರ್ಜುನ**ನೆಂದು ಅಂದಿನಿಂದಿತ್ತ ಸರ್ವರೂ ಪೂಜಿಸಿದರು.

೧೩. ಜೈನಧರ್ಮ

ಜೈನಧರ್ಮವು ಭಾರತವರ್ಷದ ಪ್ರಾಚೀನವೂ ಮಹತ್ತ್ವಪೂರ್ಣವೂ ಆದ ಒಂದು ಆಸ್ತಿಕ ಧರ್ಮವಾಗಿದೆ. ಆದರೆ ಇಂದೂ ಕೆಲವು ವಿದ್ವಾಂಸರು ಭ್ರಮೆಯಿಂದ ಇದನ್ನು ನಾಸ್ತಿಕ ಧರ್ಮಗಳಲ್ಲಿ ಪರಿಗಣಿಸುವುದುಂಟು. ವಸ್ತುತಃ ಇವರು ಆಸ್ತಿಕನಾಸ್ತಿಕ ಶಬ್ದಗಳ ಅರ್ಥವನ್ನು ವಿಚಾರ ಮಾಡಿ ಹೀಗೆನ್ನುವುದಿಲ್ಲ. ಇವರ ಈ ಅಭಿಪ್ರಾಯಕ್ಕೆ ಪರಂಪರಾಗತ ಸಂಸ್ಕಾರವೇ ಕಾರಣ. ಆಚಾರ್ಯ ಪಾಣಿನಿಯು ವಿಶ್ವವಿಖ್ಯಾತ ಒಬ್ಬ ಪ್ರಾಚೀನ ಸಂಸ್ಕೃತ ವೈಯಾಕರಣಿ. ಅದರಲ್ಲೂ ಶುದ್ಧ ವೇದಾನುಯಾಯಿ. ಅವನು ತನ್ನ ಸುಪ್ರಸಿದ್ಧ ವ್ಯಾಕರಣದಲ್ಲಿ ಆಸ್ತಿಕನಾಸ್ತಿಕ ಶಬ್ದಗಳ ವ್ಯುತ್ಪತ್ತಿಯನ್ನು ಸ್ಪಷ್ಟವಾಗಿ ಹೇಳಿರುವನು. ಪರಲೋಕಾದಿ ಪರೋಕ್ಷವಸ್ತುಗಳನ್ನು ನಂಬುವವನು ಆಸ್ತಿಕನೆಂದೂ ಅವುಗಳನ್ನು ನಂಬದವನು ನಾಸ್ತಿಕನೆಂದೂ ಆಚಾರ್ಯ ಪಾಣಿನಿಯ ಅಭಿಪ್ರಾಯ. ಜೈನಧರ್ಮವು ಪಾಪಪುಣ್ಯ, ಸ್ವರ್ಗನರಕ, ಆತ್ಮಪರಮಾತ್ಮ ಮೊದಲಾದ ಪರೋಕ್ಷ ವಸ್ತುಗಳನ್ನು ಸ್ಪಷ್ಟವಾಗಿ ನಂಬುತ್ತದೆ. ಹೀಗಿರುತ್ತ ಜೈನರನ್ನು ನಾಸ್ತಿಕರೆಂದೂ ಜೈನಧರ್ಮವನ್ನು ನಾಸ್ತಿಕ ಧರ್ಮವೆಂದೂ ಹೇಳುವುದು ನ್ಯಾಯಸಂಗತವೆ?

ಜೈನಧರ್ಮವು ಈಶ್ವರನನ್ನು ಸೃಷ್ಟಿಕರ್ತನನ್ನಾಗಿ ಒಪ್ಪುವುದಿಲ್ಲ. ಹಾಗೂ ಋಕ್ ಮೊದಲಾದ ನಾಲ್ಕು ವೇದಗಳನ್ನು ನಂಬುವುದಿಲ್ಲ. ಆದುದರಿಂದ ಅದು ವೇದಬಾಹ್ಯವಾದ ನಾಸ್ತಿಕ ಧರ್ಮವೆಂದೂ ಕೆಲವರು ಹೇಳುವುದುಂಟು. ಹಾಗಾದರೆ ಜೈನರೂ ಅಂತಹವರನ್ನು ನಾಸ್ತಿಕರೆಂದು ಏಕೆ ಹೇಳಬಾರದು? ಒಬ್ಬರ ಧರ್ಮಗ್ರಂಥಗಳನ್ನು ಇನ್ನೊಬ್ಬರು ಒಪ್ಪದ ಮಾತ್ರಕ್ಕೆ ಅಥವಾ ಒಬ್ಬರ ಈಶ್ವರನನ್ನು ಅಂದರೆ ದೇವರನ್ನು ಇನ್ನೊಬ್ಬರು ನಂಬದ ಮಾತ್ರಕ್ಕೆ ಅವರನ್ನು ನಾಸ್ತಿಕರೆಂದು ಹೇಳುವುದು ಧರ್ಮವೆ?

ವಸ್ತುತಃ ಇತಿಹಾಸಜ್ಞರ ದೃಷ್ಟಿಯಲ್ಲಿಯೂ ಬ್ರಾಹ್ಮಣಧರ್ಮ, ಜೈನಧರ್ಮ ಮತ್ತು ಬೌದ್ಧಧರ್ಮ ಈ ಮೂರೂ ಆರ್ಯಧರ್ಮ ಪ್ರಮುಖ ಮೂಲ ಶಾಖೆಗಳಾಗಿವೆ. ಈ ಪ್ರತಿಯೊಂದರಲ್ಲಿಯೂ ಆರ್ಯಸಂಸ್ಕೃತಿಯು ನಮಗೆ ಒಡೆದು ಕಾಣುವುದು.

ಜೈನಧರ್ಮದ ಉಲ್ಲೇಖನೀಯ ಪ್ರಧಾನ ಸಿದ್ಧಾಂತಗಳು ಇವು— ಅಹಿಂಸಾವಾದ ಅನೇಕಾಂತ ಅಥವಾ ಅಪೇಕ್ಷಾವಾದ, ಸಾಮ್ಯವಾದ, ಆಚಾರವಾದ ಮತ್ತು ಕರ್ಮವಾದ. ಅಹಿಂಸಾಸಿದ್ಧಾಂತಗಳನ್ನು ಬೇರೆ ಧರ್ಮಗಳೂ ಒಪ್ಪಿರುತ್ತವೆ ನಿಜ. ಆದರೆ ಜೈನಾಚಾರ್ಯರು ಇದನ್ನು ಬಹಳ ಆಳವಾಗಿ ವಿಚಾರಮಾಡಿರುವರು. ಈ ಸಿದ್ಧಾಂತವನ್ನು ಇಷ್ಟು ಸೂಕ್ಷ್ಮವಾಗಿ ಬೇರೆ ಧರ್ಮಗಳು ವಿಚಾರ ಮಾಡಲಿಲ್ಲ. ಈ ಮಾತಿನ ಯಥಾರ್ಥತ್ವದಲ್ಲಿ ಸಂದೇಹವುಳ್ಳವರು ಜೈನರ ಪುರುಷಾರ್ಥಸಿದ್ಧ್ಯುಪಾಯ, ಪಂಚಾಧ್ಯಾಯಿ ಮೊದಲಾದ ಗ್ರಂಥಗಳನ್ನು ಒಂದಾವರ್ತಿ ಅಗತ್ಯ ಓದಬೇಕು. ಡಾ. ಮುಂಜೆಯಂತಹ ಕೆಲವು ಮುಖಂಡರು ಭಾರತವರ್ಷದ ಪರಾಧೀನತೆಗೆ ಜೈನರ ಹಾಗೂ ಬೌದ್ಧರ ಅಹಿಂಸೆಯೇ ಕಾರಣವೆಂದು ಹೇಳಿರುವುದುಂಟು. ಅಂತಹವರು ನಿಜವಾಗಿ ಭಾರತ ವರ್ಷದ ಪ್ರಾಚೀನ ಇತಿಹಾಸವನ್ನು ಒಂದಾವರ್ತಿ ಚೆನ್ನಾಗಿ ಮನನ ಮಾಡಬೇಕು. ಏಕೆಂದರೆ, ಪ್ರಸಿದ್ಧ ಭಾರತೀಯ ಶಾಸಕರಾದ ಚಂದ್ರ ಗುಪ್ತ, ಅಶೋಕ, ಸಂಪ್ರತಿ, ಖಾರವೇಲ ಮೊದಲಾದವರು ಶುದ್ಧ ಅಹಿಂಸಾವಾದಿಗಳು. ಭಾರತವರ್ಷವು ಅವರ ಕಾಲದಲ್ಲಿ ಅದೇಕೆ ಪರಾಧೀನವಾಗಲಿಲ್ಲ? ಇವರ ರಾಜ್ಯಶಾಸನ ಪ್ರಣಾಲಿಯನ್ನು ಸ್ವದೇಶಿಯರು ಮಾತ್ರವಲ್ಲ; ವಿದೇಶಿಯರೂ ಮುಕ್ತಕಂಠವಾಗಿ ಹೊಗಳಿರುವುದಿಲ್ಲವೇ? ಜೈನಧರ್ಮವಲ್ಲಿ ಹಿಂಸೆಯು ನಾಲ್ಕು ಪ್ರಕಾರ ಹೇಳಲ್ಪಟ್ಟಿದೆ. ಔದ್ಯೋಗಿಕ ಹಿಂಸೆ, ಆರಂಭಿಕ ಹಿಂಸೆ, ವಿರೋಧಿ ಹಿಂಸೆ, ಸಾಂಕಲ್ಪಿಕ ಹಿಂಸೆ. ಇವುಗಳಲ್ಲಿ ಜೈನ ಗೃಹಸ್ಥನು ಸಾಂಕಲ್ಪಿಕ (ಬೇಕೆಂದು ಕೊಲ್ಲುವುದು) ಹಿಂಸೆಯನ್ನು ಮಾತ್ರ ಮಾಡುವುದಿಲ್ಲ. ಉಳಿದ ಮೂರು ವಿಧವಾದ ಹಿಂಸೆಗಳನ್ನು ಆತನು ಬಿಡಲಾರ. ಅಂದರೆ ಶಾಸ್ತ್ರೀಯ ದೃಷ್ಟಿಯಿಂದಲೂ ಇವು ಅವನಿಗೆ ತ್ಯಾಜ್ಯವಲ್ಲ. ಆದುದರಿಂದಲೇ ಜೈನ

ಧರ್ಮಾವಲಂಬಿ ದೊಡ್ಡ ದೊಡ್ಡ ರಾಜಮಹಾರಾಜರು ಶತ್ರುಪಕ್ಷವನ್ನು ನಿರ್ಮೂಲ ಮಾಡಿ ತಮ್ಮ ಧರ್ಮವನ್ನು ಅಕ್ಷುಣ್ಣವಾಗಿ ಕಾಪಾಡಿ ಕೊಂಡದ್ದುಂಟು.

ಅಪೇಕ್ಷಾವಾದವೂ ಜೈನಧರ್ಮದ ಒಂದು ಉಲ್ಲೇಖನೀಯ ಪ್ರಧಾನ ತತ್ತ್ವ. ಉಪನಿಷತ್ ಮೊದಲಾದ ಪ್ರಾಚೀನ ಬ್ರಾಹ್ಮಣ ಗ್ರಂಥಗಳಲ್ಲಿ ಇದರ ಬೀಜವು ದೊರೆತರೂ ಇದನ್ನು ಬೆಳಸಿದ ಪೂರ್ಣ ಶ್ರೇಯಸ್ಸು ಜೈನಾಚಾರ್ಯರಿಗೇನೇ ಸಲಬೇಕು. ಸಮಂತಭದ್ರ, ಅಕಲಂಕ, ವಿದ್ಯಾನಂದಿ ಪ್ರಭಾಚಂದ್ರ, ವಾದಿರಾಜ ಮತ್ತು ಮಾಣಿಕ್ಯನಂದಿ ಮೊದಲಾದವರು ಇದಕ್ಕಾಗಿ ಬಹಳ ದುಡಿದಿರುವರು. ಅಪೇಕ್ಷಾವಾದದ ಉಪೇಕ್ಷೆಯಿಂದ ಇಲ್ಲಿ ನಮ್ಮ ಯಾವ ಕೆಲಸವೂ ನಡಿಯಲಾರದು. ನಾವು ಮಾಡುತ್ತಿರುವ ಪ್ರತಿಯೊಂದು ಕೆಲಸದಲ್ಲಿ ಅಪೇಕ್ಷಾವಾದವು ಅವಿತುಕೊಂಡಿರುತ್ತದೆ. ನಾವು ಮಾತ್ರ ಆ ಕಡೆಗೆ ಲಕ್ಷ್ಯ ಕೊಡುವುದಿಲ್ಲ. ಇತ್ತೀಚೆಗೆ ಸಹೃದಯ ದಾರ್ಶನಿಕರ ಧ್ಯಾನವು ಇದರ ಕಡೆಗೆ ಆಕರ್ಷಿಸಲ್ಪಡುತ್ತಿರುವುದು ಒಂದು ಶುಭಚಿಹ್ನೆಯೇ ಎಂದು ಹೇಳಬೇಕಾಗಿದೆ.

ಜೈನರ ಪರಿಗ್ರಹ ಪರಿಮಾಣುವ್ರತ ವಸ್ತುತಃ ಸಾಮ್ಯವಾದದ ಒಂದು ರೂಪಾಂತರ. ಪ್ರತಿಯೊಬ್ಬ ಗೃಹಸ್ಥನು ತನ್ನ ಪ್ರತಿಯೊಂದು ವಸ್ತುವನ್ನು ಪರಿಮಾಣಮಾಡಿಕೊಳ್ಳಬೇಕೆಂದು ಜೈನಧರ್ಮದ ಕಟ್ಟಪ್ಪಣೆ. ಹೀಗೆ ಪ್ರತಿಯೊಬ್ಬನು ನಿಯಮ ಮಾಡಿಕೊಂಡರೆ ಅದೇ ಸಾಮ್ಯವಾದ ವಾಗುವುದಿಲ್ಲವೆ?

ಜೈನರ ಆಚಾರ-ವಾದವೂ ಬಹಳ ಮಹತ್ತ್ವಪೂರ್ಣವಾದುದು. ಇದು ಎರಡು ವಿಧವಾಗಿದೆ. ಒಂದು ಶ್ರಾವಕಾಚಾರ; ಇನ್ನೊಂದು ಯತ್ಯಾಚಾರ. ಹೆಚ್ಚೇಕೆ ಒಬ್ಬ ಜೈನಶ್ರಾವಕ (ಗೃಹಸ್ಥ)ನು ಐದು ಅಣು ವ್ರತಗಳನ್ನು ಮಾತ್ರ ನಿರ್ದೋಷವಾಗಿ ಪಾಲಿಸಿದರೆ ಸಾಕು. ಅವನು ಈಗಿನ ಪೆನಲ್‌ಕೋಡಿಗೆ ಸಂಬಂಧಪಟ್ಟ ಯಾವ ಅಪರಾಧಕ್ಕೂ ಬಲಿ ಯಾಗಲಾರನು. ಹಿಂಸೆಯೇ ಮೊದಲಾದ ೫ ಅಣುವ್ರತಗಳೊಡನೆ ದಿಗ್ವ್ರತವೇ ಮೊದಲಾದ ೩ ಗುಣವ್ರತಗಳನ್ನೂ ದೇಶಾವಕಾಶಿಕವೇ ಮೊದಲಾದ ೪ ಶಿಕ್ಷಾವ್ರತಗಳನ್ನೂ ನಿರ್ದೋಷವಾಗಿ ಪಾಲಿಸುವವನು ವಸ್ತುತಃ ಒಬ್ಬ ಆದರ್ಶ ಗೃಹಸ್ಥನೇ ಸರಿ. ಇದರಲ್ಲಿನ ಯತಿಗಳ

ಆಚಾರವಂತು ಬಹಳ ಘನವಾದುದು. ಜೈನ ಯತಿಗಳನ್ನು ಕಂಡೊಡನೆ ಒಂದಾವರ್ತಿ ಜೈನೇತರರಿಗೂ ಉಪನಿಷದ್‌ಗಳಲ್ಲಿ ವರ್ಣಿಸಲ್ಪಟ್ಟ ಪರಮ ಹಂಸರು ಥಕ್ಕನೆ ನೆನಪಾಗಲೇ ಬೇಕು. ಇವರು ಧನಧಾನ್ಯವೇ ಮೊದಲಾದ ಸಂಪೂರ್ಣ ವಸ್ತುಗಳ ಮೋಹವನ್ನು ತೊರೆದು ಸರ್ವಸಂಗಪರಿತ್ಯಾಗಿಗಳಾಗಿ ರಾತ್ರಿ ಹಗಲು ಸಂಚಿತ ಕರ್ಮಗಳನ್ನು ನಿರ್ಮೂಲ ಮಾಡುವುದಕ್ಕೋಸ್ಕರವೂ ನವೀನ ಕರ್ಮಗಳನ್ನು ತಡೆಯುವುದಕ್ಕೋಸ್ಕರವೂ ಪ್ರಯತ್ನಿಸುವರು. ಯಥಾರ್ಥತಃ ಜೈನಯತಿಗಳ ಆಚಾರವು ಒಂದು ಆದರ್ಶ ಆಚಾರವಾಗಿದೆ.

ಹೀಗೆಯೇ ಜೈನರ ಅಧ್ಯಾತ್ಮವಾದ ಸಂಬಂಧಿ ಸಾಹಿತ್ಯವೂ ಬಹಳ ವಿಶಾಲವಾದುದು. ಇದಕ್ಕೆ ಸಂಬಂಧಪಟ್ಟ ಆತ್ಮಾನುಶಾಸನ, ಆತ್ಮ ಪ್ರಬೋಧ ಮೊದಲಾದುವು ಒಂದಾವರ್ತಿ ಓದಬೇಕಾದ ಗ್ರಂಥಗಳು. ಇರಲಿ. ಇವೆಲ್ಲವುಗಳನ್ನು ವಿಮರ್ಶಿಸುವುದಕ್ಕೆ ಇಲ್ಲಿ ಅವಕಾಶವಿಲ್ಲ. ಇನ್ನು ಕೊನೆಯ ಕರ್ಮವಾದದ ಸಂಬಂಧದಲ್ಲಿಯೂ ಎರಡು ಶಬ್ದಗಳನ್ನು ಹೇಳುವುದು ಅತ್ಯಗತ್ಯ.

ಕರ್ಮವಾದವು ಜೈನ ಸಿದ್ಧಾಂತದ ಒಂದು ಮುಖ್ಯ ಅಂಗ. ಅಧ್ಯಾತ್ಮವಾದದೊಡನೆ ಇದಕ್ಕೆ ಘನಿಷ್ಠ ಸಂಬಂಧವಿದೆ. ಇಷ್ಟೇ ಅಲ್ಲ, ಮುಕ್ತಿಯು ಪ್ರಾಪ್ತವಾಗಬೇಕಾದರೆ ಧ್ಯಾನ ಅಥವಾ ಯೋಗವು ಅತ್ಯಗತ್ಯ. ಆದರೆ ಪ್ರಾರಂಭಿಕ ಅವಸ್ಥೆಯಲ್ಲಿ ಮನಸ್ಸನ್ನು ಏಕಾಗ್ರ ಮಾಡುವುದು ಬಹಳ ಕಷ್ಟ. ಕರ್ಮಶಾಸ್ತ್ರದ ಗಹನ ಅಧ್ಯಯನದಿಂದ ಈ ಕಾರ್ಯವು ಸುಲಭವಾಗುವುದು. ಪ್ರಥಮದಲ್ಲಿ ಇದರ ಅಧ್ಯಯನವು ನೀರಸವಾಗಿ ಕಂಡರೂ, ಅಭ್ಯಾಸವಾದ ಮೇಲೆ ಅದರಲ್ಲಿ ತನ್ನಷ್ಟಕ್ಕೆ ರುಚಿ ಹುಟ್ಟುವುದು. ಕೊನೆಗೆ ಅಧ್ಯೇತನು ಅದರಲ್ಲಿ ತನ್ಮಯನಾಗಿ ಧ್ಯಾನಿಯಾಗುವನು. ಜೈನ ಸಾಹಿತ್ಯದಿಂದ ಕರ್ಮಸಾಹಿತ್ಯವನ್ನು ಬೇರೆ ಮಾಡಿದರೆ ದೊಡ್ಡ ಕ್ಷತಿಯುಂಟಾಗುವುದು ಮಾತ್ರವಲ್ಲ, ಅದರ ಮಹತ್ತ್ವವೂ ಕಡಿಮೆಯಾಗದಿರಲಾರದು. ಸಂಸ್ಕೃತ ಸಾಹಿತ್ಯದಲ್ಲಿ ವ್ಯಾಕರಣಕ್ಕಿರುವ ಮಹತ್ವವೇ ಜೈನ ಸಾಹಿತ್ಯದಲ್ಲಿ ಕರ್ಮಸಾಹಿತ್ಯಕ್ಕಿದೆ. ಜೈನ ಕರ್ಮಸಾಹಿತ್ಯದಲ್ಲಿ ಷಟ್ಖಂಡಾಗಮ, ಕಷಾಯಪ್ರಾಭೃತ, ಕರ್ಮಪ್ರಕೃತಿ, ಪಂಚಸಂಗ್ರಹ ಮತ್ತು ಗೊಮ್ಮಟಸಾರ ಮೊದಲಾದುವು ಬಹು ಮಹತ್ತ್ವಪೂರ್ಣವಾದ ಗ್ರಂಥಗಳು.

೧೪. ಗೃಹಸ್ಥ-ಶ್ರಾವಕಧರ್ಮ

ಶಾಸ್ತ್ರದಲ್ಲಿ ಬ್ರಹ್ಮಚಾರೀ, ಗೃಹೀ, ವಾನಪ್ರಸ್ಥ, ಭಿಕ್ಷು ವೆಂದು ನಾಲ್ಕು ಆಶ್ರಮಗಳು ಹೇಳಲ್ಪಟ್ಟಿವೆ. ಅವುಗಳಲ್ಲಿ ಮದುವೆಯಾಗದಿರುವವನೂ ಬ್ರಹ್ಮ ಚಾರಿಯೂ ಆಗಿದ್ದು ಶಾಸ್ತ್ರಾಧ್ಯಯನವನ್ನು ಮಾಡುವವನಿಗೆ ಬ್ರಹ್ಮಚರ್ಯಾಶ್ರಮಿಯೆಂದೂ ವಿವಾಹಿತನಾಗಿರುವವನಿಗೆ ಗೃಹಸ್ಥಾಶ್ರಮಿಯೆಂದೂ ಹೆಸರು. ಈಗ ಇಲ್ಲಿ ಗೃಹಸ್ಥಾಶ್ರಮಧರ್ಮವೇ ಪ್ರಕೃತವಾದುದು.

ಗೃಹಶಬ್ದಕ್ಕೆ ಮನೆಯೆಂದು ಅರ್ಥವಾಗಿರುವುದಾದರೂ ಆಶ್ರಮದ ಗಣನೆಯಲ್ಲಿ ವಿವಾಹಿತನಿಗೆ ಗೃಹಸ್ಥನೆಂದು ಹೆಸರಾಗಿರುವುದರಿಂದ "ಗ್ರಹಂ ಹಿ ಗೃಹಿಣೀಮಾಹುರ್ನಕುಡ್ಯಕಟಸಂಹತಿಂ" ಎಂದಿರುವಂತೆ ಗೃಹಿಣಿ ಅಂದರೆ ಪತ್ನಿಯನ್ನು ಗೃಹವೆಂದು ಹೇಳುವುದಲ್ಲದೆ ಗೋಡೆ ಮಣ್ಣು ಚಾಪೆಗಳ ಸಮೂಹ ಇಟ್ಟಿಗೆಗಳ ರಾಶಿ—ಇವುಗಳನ್ನು ಗೃಹವೆಂದು ಹೇಳುವುದಲ್ಲವೆಂದು ಸಿದ್ಧವಾಗುವುದು. ಪತ್ನಿಯುಳ್ಳವನಾದ ಗೃಹಸ್ಥನು ಕ್ಷೇತ್ರ, ವಾಸ್ತು, ಧನಧಾನ್ಯ ಮೊದಲಾದ ಸಕಲ ಪರಿಗ್ರಹಗಳಿಂದಲೂ ಕೂಡಿದವನಾಗಿಯೇ ಇರಬೇಕಾಗುವುದು. ಅವನು ಆಚರಿಸತಕ್ಕ ಆಚಾರ ವ್ಯವಹಾರಕ್ಕೆ ಗೃಹಸ್ಥ-ಶ್ರಾವಕಧರ್ಮವೆಂದು ಹೆಸರು. ಇದು ನಿವೃತ್ತಿ ಧರ್ಮವೆಂದೂ ಪ್ರವೃತ್ತಿಧರ್ಮವೆಂದೂ ಎರಡು ಪ್ರಕಾರವಾಗಿರುತ್ತದೆ. ನಿವೃತ್ತಿಧರ್ಮವೆಂದರೆ ಪ್ರಾಣಿಹಿಂಸೆ ಅಸತ್ಯವಚನ ಚೌರ್ಯ ಮೊದಲಾದ ತ್ಯಜಿಸತಕ್ಕ ಧರ್ಮ. ಪ್ರವೃತ್ತಿಧರ್ಮವೆಂದರೆ ಅಹಿಂಸೆ, ಸತ್ಯವಚನ ಅಚೌರ್ಯ ಮೊದಲಾದ ಸ್ವೀಕರಿಸತಕ್ಕ ಧರ್ಮವೆಂದರ್ಥ.

ಆಚಾರಶಾಸ್ತ್ರದಲ್ಲಿ ಗೃಹಸ್ಥನಿಗೆ ಉಪಾಸಕನೆಂದೂ ಶ್ರಾವಕನೆಂದೂ ನಾಮಾಂತರಗಳಿವೆ. ಉಪಾಸಕನೆಂದರೆ ದೇವಗುರು ಸಾಧುಸಂತರ

ಸೇವಾ-ಶುಶ್ರೂಷೆಯನ್ನು ಮಾಡತಕ್ಕವನೆಂದೂ ಶ್ರಾವಕನೆಂದರೆ ಗುರುವಿನಿಂದ ಧರ್ಮಶ್ರವಣವನ್ನು ಮಾಡತಕ್ಕವನೆಂದೂ ಅರ್ಥ. ಅವನ ಆಚಾರ ವ್ಯವಹಾರಗಳನ್ನು ಬೋಧಿಸುವ ಗ್ರಂಥಗಳಿಗೆ ಉಪಾಸಕಾಚಾರ ಶಾಸ್ತ್ರ ಗ್ರಂಥಗಳೆಂದೂ ಶ್ರಾವಕಾಚಾರ ಶಾಸ್ತ್ರಗ್ರಂಥಗಳೆಂದೂ ಹೆಸರು. ಗೃಹಸ್ಥ ಧರ್ಮವು ಇದನ್ನು ಪಾಲಿಸುವವರ ಶಕ್ತಿಯ ತಾರತಮ್ಯದಿಂದ, ಹನ್ನೊಂದು ಪ್ರಕಾರವಾಗಿರುವುದು. ಅವುಗಳಿಗೆ ಏಕಾದಶಗುಣಸ್ಥಾನಗಳೆಂದೂ ಏಕಾದಶ ಪ್ರತಿಮಾಗಳೆಂದೂ ಹನ್ನೊಂದು ನೆಲೆಗಳೆಂದೂ ಹೆಸರು.

ದಂಸಣವದ ಸಾಮಾಯಿಯಪೋ ಸಹಸಚ್ಚಿತ್ತರಾಯಿ ಭತ್ತೇಯ ।
ಬಮ್ಹಾರಂಭಪರಿಗ್ಗಹ ಅಣುಮಣುಮುದ್ದಿಟ್ಟದೇಸವಿರದೇ ದೇ ॥

ಎಂದು ಗೋಮಟಸಾರ ಗ್ರಂಥದಲ್ಲಿ ಹೇಳಲ್ಪಟ್ಟಿರುವಂತೆ ೧ ದರ್ಶನಿತ್ವ ೨ ವ್ರತಿತ್ವ ೩ ಸಾಮಾಯಿಕತ್ವ ೪ ಪ್ರೋಷಧಿತ್ವ ೫ ಸಚಿತ್ತವಿರತತ್ವ ೬ ರಾತ್ರಿಭಕ್ತತ್ವ ೭ ಬ್ರಹ್ಮಚಾರಿತ್ವ ೮ ಆರಂಭವಿರತತ್ವ ೯ ಪರಿಗ್ರಹವಿರತತ್ವ ೧೦ ಅನುಮತಿವಿರತತ್ವ ೧೧ ಉದ್ದಿಷ್ಟವಿರತತ್ವಗಳೆಂದು ಅವುಗಳ ಹೆಸರುಗಳು.

ನಿಜವಾದ ದೇವ ಗುರು ಶಾಸ್ತ್ರಗಳಲ್ಲಿಯೂ ಜೀವಾದಿತತ್ತ್ವಗಳಲ್ಲಿಯೂ ದೃಢವಾದ ಶ್ರದ್ಧೆಗೆ ದರ್ಶನಿತ್ವವೆಂದೂ ಅಂತಹ ಶ್ರದ್ಧೆಯುಳ್ಳವನಿಗೆ ದರ್ಶನಿಕನೆಂದೂ ಹೆಸರು. ಈ ದರ್ಶನಿಕನು ಮಹಾನರ್ಥಕಾರಿಗಳೂ ಪಾಪಕಾರಿಗಳೂ ಆದ ಜೂಜಾಟ, ಮಾಂಸಭಕ್ಷಣ, ಮದ್ಯಪಾನ, ವೇಶ್ಯಾಸೇವನ, ಬೇಟೆಯಾಟ, ಕಳುವು, ಪರಸ್ತ್ರೀಗಮನಗಳೆಂಬ ಸಪ್ತ ವ್ಯಸನಗಳನ್ನೂ ಬಹು ಜೀವೋತ್ಪತ್ತಿಸ್ಥಾನಗಳಾದ ಅತ್ತಿ ಆಲ ಅರಳಿ ಬಸುರಿ ಕಲ್ಲತ್ತಿ ಈ ಹಾಳು ಹಣ್ಣುಗಳ ಭಕ್ಷಣವನ್ನೂ, ಪ್ರಾಣಿಹಿಂಸಾ ನಿವೃತ್ತಿಯ ದೃಷ್ಟಿಯಿಂದಲೂ ಆಹಾರಶುದ್ಧಿಯ ದೃಷ್ಟಿಯಿಂದಲೂ ಆರೋಗ್ಯ ದೃಷ್ಟಿಯಿಂದಲೂ ರಾತ್ರಿ ಭೋಜನವನ್ನು ತ್ಯಜಿಸಬೇಕು. ಇದು ಜೈನ ಗೃಹಸ್ಥ—ಶ್ರಾವಕನ ಮೊದಲನೆಯ ಧರ್ಮವೆಂದು ಆಚಾರಶಾಸ್ತ್ರದಲ್ಲಿ ಹೇಳಿದೆ.

ಜೈನಗೃಹಸ್ಥ-ಶ್ರಾವಕನ ಎರಡನೆಯ ಧರ್ಮವು ವ್ರತಗಳನ್ನು ಪಾಲಿಸುವುದಾಗಿದೆ. ವ್ರತಗಳಲ್ಲಿ ಅಣುವ್ರತ ಗುಣವ್ರತ ಶಿಕ್ಷಾವ್ರತಗಳೆಂದು ಮೂರು ಮೂಲ ಭೇದಗಳೂ, ಅಣುವ್ರತದಲ್ಲಿ ಅಹಿಂಸಾಣುವ್ರತ, ಸತ್ಯಾಣುವ್ರತ, ಅಚೌರ್ಯಾಣುವ್ರತ, ಪರಸ್ತ್ರೀತ್ಯಾಗ-ಸ್ವಸ್ತ್ರೀಸಂತೋಷಾಣುವ್ರತ, ಪರಿಮಿತ ಪರಿಗ್ರಹಾಣುವ್ರತಗಳೆಂದು ಐದು ಅಂತರ್ಭೇದಗಳೂ ಗುಣವ್ರತದಲ್ಲಿ ದಿಗ್ಗುಣವ್ರತ, ಅನರ್ಥದಂಡಗುಣವ್ರತ, ಭೋಗೋಪಭೋಗ ಪರಿಮಾಣ ಗುಣವ್ರತಗಳೆಂದು ಮೂರು ಅಂತರ್ಭೇದಗಳೂ ಶಿಕ್ಷಾವ್ರತದಲ್ಲಿ ದೇಶಾವಕಾಶಿಕ ಶಿಕ್ಷಾವ್ರತ, ಸಾಮಾಯಿಕ ಶಿಕ್ಷಾವ್ರತ, ಪ್ರೋಷಧೋಪವಾಸ ಶಿಕ್ಷಾವ್ರತ, ವೈಯ್ಯಾವೃತ್ಯ ಶಿಕ್ಷಾವ್ರತಗಳೆಂದು ನಾಲ್ಕು ಅಂತರ್ಭೇದಗಳೂ ಇರುತ್ತವೆ. ಇವುಗಳಲ್ಲಿ ಗುಣವ್ರತ ಶಿಕ್ಷಾವ್ರತಗಳಿಗೆ ಸಪ್ತಶೀಲಗಳೆಂದೂ ಹೆಸರಿದೆ.

ಮೇಲೆ ಹೇಳಲ್ಪಟ್ಟ ವ್ರತಗಳನ್ನು ಯಥಾಕ್ರಮವಾಗಿ ವಿಚಾರ ಮಾಡುವುದಾದರೆ ತನ್ನಂತೆ ಸಕಲ ಪ್ರಾಣಿಗಳಿಗೂ ದುಃಖಾನುಭವವಿದೆಯೆಂದು ತಿಳಿದು, ಮನೋವಾಕ್ಕಾಯಗಳಿಂದಲೂ ಕೃತಕಾರಿತಾನುಮೋದಗಳಿಂದಲೂ ಕ್ರಿಮಿಕೀಟಾದಿ ಪ್ರಾಣಿಗಳನ್ನು ಹಿಂಸಿಸದಿರುವುದಕ್ಕೆ ಅಹಿಂಸಾಣುವ್ರತವೆಂದೂ, ಪ್ರಾಣಿಪೀಡಾಕರವಾದ ಅಸತ್ಯವಚನವನ್ನೂ, ಸತ್ಯವಚನವನ್ನೂ ನುಡಿಯದಿರುವುದಕ್ಕೆ ಸತ್ಯಾಣುವ್ರತವೆಂದೂ, ಬಾಹ್ಯ ಪ್ರಾಣಸದೃಶವಾಗಿರುವ ಪರವಸ್ತುವನ್ನು ಅಪಹರಿಸದಿರುವುದಕ್ಕೆ ಅಚೌರ್ಯಾಣುವ್ರತವೆಂದೂ, ದುಃಖಾನರ್ಥಹೇತುವಾದ ಪರಸ್ತ್ರೀಸೇವನೆಯನ್ನು ಮಾಡದೆ ಸ್ವಸ್ತ್ರೀಸಂತುಷ್ಟನಾಗಿರುವುದಕ್ಕೆ ಪರಸ್ತ್ರೀ ತ್ಯಾಗ—ಸ್ವಸ್ತ್ರೀಸಂತೋಷಾಣುವ್ರತವೆಂದೂ, ಸೌದೆಯನ್ನು ಬೆಂಕಿಗೆ ಹಾಕಿದಷ್ಟು ಅದರ ಜ್ವಾಲೆಯು ಹೆಚ್ಚುವಂತೆ ಗೃಹ ಧನಧಾನ್ಯ ವಸ್ತ್ರವಾಹನ ಮೊದಲಾದ ವಸ್ತುಗಳು ಹೆಚ್ಚಿದಷ್ಟೂ ಆಶೆಯು ಹೆಚ್ಚುವುದರಿಂದಲೂ "ಆಶಾ ಹಿ ಪರಮಂ ದುಃಖಂ" ಎನ್ನುವಂತೆ ಅದು ಸಕಲ ಪಾಪಾನರ್ಥಗಳಿಗೂ ದುಃಖಕ್ಕೂ ಕಾರಣವಾಗಿರುವುದರಿಂದಲೂ, ಅದನ್ನು ನಿಗ್ರಹಿಸಿ "ನಿರಾಶಾ ಪರಮಂ ಸುಖಂ" ಎನ್ನುವಂತೆ ಅಪರಿಮಿತಪರಿಗ್ರಹದಲ್ಲಿ ನಿರಾಶನೂ ಪರಿಮಿತಪರಿಗ್ರಹದಲ್ಲಿ ಸಂತೋಷಚಿತ್ತನೂ ಆಗಿರುವುದಕ್ಕೋಸ್ಕರ ಭೋಗೋಪಭೋಗ ಸಾಮಗ್ರಿ

ಗಳನ್ನು ಬೇಕಾದಷ್ಟೆ—ಪರಿಮಿತವಾಗಿಟ್ಟುಕೊಳ್ಳುವುದಕ್ಕೆ ಪರಿಮಿತಪರಿಗ್ರಹಾಣುವ್ರತವೆಂದೂ ಹೆಸರು.

ದಶದಿಕ್ಕುಗಳಲ್ಲಿ ಗುರುತುಮಾಡಿಕೊಂಡು ಅವುಗಳ ಹೊರಗೆ ಯಾವಜ್ಜೀವವೂ ಗೃಹಕೃತ್ಯ ಸಂಬಂಧವಾದ ಯಾವ ವ್ಯವಹಾರವನ್ನೂ ಮಾಡುವುದಿಲ್ಲವೆಂದೂ ಹೋಗುವುದಿಲ್ಲವೆಂದೂ ಮಾಡುವ ಸಂಕಲ್ಪಕ್ಕೆ ದಿಗ್ಗುಣವ್ರತವೆಂದೂ, ತಾನು ಸಂಕಲ್ಪಿಸಿದ ದಿಕ್ಕುಗಳ ಒಳಗೂ ಪ್ರಯೋಜನವಿಲ್ಲದ ಪಾಪಕಾರ್ಯಗಳನ್ನು ತ್ಯಜಿಸುವುದಕ್ಕೆ ಅನರ್ಥದಂಡಗುಣವ್ರತವೆಂದೂ, ಪರಿಮಿತಪರಿಗ್ರಹಾಣುವ್ರತದಲ್ಲಿ ಯಾವಜ್ಜೀವ ಪರಿಗ್ರಹ ವಸ್ತುಗಳು ಇಷ್ಟೇ ಸಾಕೆಂದು ನಿಯಮಮಾಡಿಕೊಂಡಿದ್ದರೂ ಪ್ರತಿದಿನಕ್ಕೆ ಬೇಕಾದಷ್ಟನ್ನು ಮಾತ್ರ ಸಂಕಲ್ಪಪೂರ್ವಕವಾಗಿ ಪರಿಗ್ರಹಿಸುವುದಕ್ಕೆ ಭೋಗೋಪಭೋಗಪರಿಮಾಣ ಗುಣವ್ರತವೆಂದೂ ಹೆಸರು.

ದಿಗ್ಗುಣವ್ರತದಲ್ಲಿ ಸಂಕಲ್ಪಿಸಿಕೊಂಡಿರುವಷ್ಟು ಪ್ರದೇಶಗಳಿಗೆ ಪ್ರತಿದಿನವೂ ಹೋಗುವುದಿಲ್ಲವಾದುದರಿಂದ ಆಯಾ ಕಾಲಗಳಲ್ಲಿ ತಾನು ಗೃಹಕೃತ್ಯನಿಮಿತ್ತವಾಗಿ ಎಷ್ಟು ಪ್ರದೇಶಕ್ಕೆ ಹೋಗಬೇಕಾಗುವುದೋ ಅಷ್ಟು ಪ್ರದೇಶವನ್ನು ದಿನ ಪಕ್ಷ ಮೊದಲಾದ ಕಾಲಪರಿಮಿತಿಯಿಂದ ಕ್ಲಪ್ತಮಾಡಿಕೊಳ್ಳುವುದಕ್ಕೆ ದೇಶಾವಕಾಶಿಕ ಶಿಕ್ಷಾವ್ರತವೆಂದೂ, ಬಂಧುವಿನಲ್ಲಿಯೂ ಶತ್ರುವಿನಲ್ಲಿಯೂ ಸುಖದಲ್ಲಿಯೂ ದುಃಖದಲ್ಲಿಯೂ ಜೀವಿತದಲ್ಲಿಯೂ ಮರಣದಲ್ಲಿಯೂ ಲಾಭದಲ್ಲಿಯೂ ಅಲಾಭದಲ್ಲಿಯೂ ಸಂಯೋಗದಲ್ಲಿಯೂ ವಿಯೋಗದಲ್ಲಿಯೂ ನನಗೆ ಯಾವಾಗಲೂ ಸಮತಾಭಾವವಿದೆ; ನಾನು ಅಶರಣವೂ ಅಶುಭವೂ ಅನಿತ್ಯವೂ ದುಃಖರೂಪವೂ ಅನಾತ್ಮಸ್ವರೂಪವೂ ಆದ ಸಂಸಾರದಲ್ಲಿ ವಾಸಮಾಡುತ್ತಿದ್ದೇನೆ; ಮೋಕ್ಷವಾದರೋ ಶರಣವೂ ಶುಭವೂ ನಿತ್ಯವೂ ಸುಖರೂಪವೂ ಆತ್ಮಸ್ವರೂಪವೂ ಆಗಿರುತ್ತದೆ" ಎಂದು ತ್ರಿಸಂಧ್ಯಾಕಾಲದಲ್ಲಿ ಧ್ಯಾನಿಸುವುದಕ್ಕೆ ಸಾಮಾಯಿಕ ಶಿಕ್ಷಾವ್ರತವೆಂದೂ, ಸಪ್ತಮೀ ನವಮೀ ತಿಥಿಗಳಲ್ಲಿಯೂ ತ್ರಯೋದಶೀ ಅಮಾವಾಸ್ಯಾ ಅಥವಾ ಪೂರ್ಣಿಮಾ ತಿಥಿಗಳಲ್ಲಿಯೂ ಏಕಭೋಜನವನ್ನೂ ಅಷ್ಟಮೀ ಚತುರ್ದಶೀ ತಿಥಿಗಳಲ್ಲಿ ಅನ್ನ ಪಾನ ಖಾದ್ಯ ಲೇಹ್ಯಗಳೆಂಬ ಚತುರ್ವಿಧಾಹಾರನಿವೃತ್ತಿರೂಪವಾದ ಉಪವಾಸವನ್ನು ಮಾಡು

ವುದಕ್ಕೆ ಪ್ರೋಷಧೋಪವಾಸ ಶಿಕ್ಷಾವ್ರತವೆಂದೂ, ಮನೆಯಿಲ್ಲದವನೂ ಗುಣವಂತನೂ ಆದ ತಪಸ್ವಿಗೆ ಪ್ರತ್ಯುಪಕಾರಾಪೇಕ್ಷೆಯಿಲ್ಲದ ಆಹಾರಾಭಯ ಭೈಷಜ್ಯಶಾಸ್ತ್ರಗಳೆಂಬ ನಾಲ್ಕು ದಾನಗಳನ್ನು ಕೊಡುವುದಕ್ಕೆ ಅಥವಾ ಅಂತಹ ಭಾವನೆಗೆ ವೈಯ್ಯಾವೃತ್ಯ ಶಿಕ್ಷಾವ್ರತವೆಂದೂ ಹೆಸರು.

ಮೇಲೆ ಹೇಳಲ್ಪಟ್ಟ ಅಹಿಂಸಾದಿಪಂಚಾಣುವ್ರತಗಳೂ ಮಕಾರತ್ರಯ (ಮದ್ಯ ಮಾಂಸ ಮಧು) ತ್ಯಾಗವೂ ಸೇರಿ ಎಂಟು ಗುಣಗಳು ಗೃಹಸ್ಥ-ಶ್ರಾವಕನ ಅಷ್ಟಮೂಲ ಗುಣಗಳೆನ್ನಿಸುತ್ತವೆ.

ಮೇಲ್ಕಂಡ ಹನ್ನೊಂದು ನೆಲೆಗಳಲ್ಲಿ ಮೂರನೆಯದಾದ ಸಾಮಾಯಿಕವೂ ನಾಲ್ಕನೆಯದಾದ ಪ್ರೋಷಧೋಪವಾಸವೂ ಶಿಕ್ಷಾವ್ರತದ ಎರಡನೆಯ ಮತ್ತು ಮೂರನೆಯ ಭೇದಗಳಾಗಿವೆ. ಜೀವದ ಸಂಬಂಧವಿರುವ ಹಸಿಯದಾದ ಪದಾರ್ಥವನ್ನು ತ್ಯಜಿಸುವವನು ಸಚಿತ್ತವಿರತನೆಂಬ ಐದನೆಯ ನೆಲೆಯ ಶ್ರಾವಕನೂ, ದಿವಾ ಮೈಥುನವನ್ನು ತ್ಯಜಿಸಿ ರಾತ್ರಿಯಲ್ಲಿ ಮಾತ್ರ ಸ್ವಸ್ತ್ರೀಸೇವನೆಯನ್ನು ಮಾಡುವವನು ರಾತ್ರಿಭಕ್ತನೆಂಬ ಆರನೆಯ ನೆಲೆಯ ಶ್ರಾವಕನೂ, ಸ್ವಸ್ತ್ರೀಸಂಬಂಧವನ್ನು ತ್ಯಜಿಸಿರುವವನು ಬ್ರಹ್ಮಚಾರಿಯೆಂಬ ಏಳನೆಯ ನೆಲೆಯ ಶ್ರಾವಕನೂ, ಕೃಷಿವಾಣಿಜ್ಯಾದ್ಯಾರಂಭವನ್ನು ತ್ಯಜಿಸಿರುವವನು ಆರಂಭವಿರತನೆಂಬ ಎಂಟನೆಯ ನೆಲೆಯ ಶ್ರಾವಕನೂ, ಧನ ಧಾನ್ಯ ಕ್ಷೇತ್ರ ವಾಸ್ತು ವಸ್ತುವಾಹನ ಮೊದಲಾದ ಪರಿಗ್ರಹಗಳನ್ನು ತ್ಯಜಿಸುವವನು ಪರಿಗ್ರಹವಿರತನೆಂಬ ಒಂಬತ್ತನೆಯ ನೆಲೆಯ ಶ್ರಾವಕನೂ, ತನಗಾಗಿ ತಯಾರಿಸಲ್ಪಡುವ ಭಕ್ಷ್ಯಭೋಜ್ಯಾದಿ ವಸ್ತುಗಳಿಗೆ ಅನುಮತಿಯನ್ನೀಯದವನು ಅನುಮತಿವಿರತನೆಂಬ ಹತ್ತನೆಯ ನೆಲೆಯ ಶ್ರಾವಕನೂ, ತನ್ನನ್ನುದ್ದೇಶಿಸಿ ತಯಾರಿಸಿರುವುದೆಂದು ಗೊತ್ತಾದರೆ ಆ ವಸ್ತುವನ್ನು ತ್ಯಜಿಸುವವನು ಉದ್ದಿಷ್ಟವಿರತನೆಂಬ ಹನ್ನೊಂದನೆಯ ನೆಲೆಯ ಶ್ರಾವಕನೂ ಆಗಿರುತ್ತಾರೆ. ಈ ಹನ್ನೊಂದನೆಯ ನೆಲೆಯಲ್ಲಿ ಕ್ಷುಲ್ಲಕ ಮತ್ತು ಐಲಕನೆಂದು ಎರಡು ಭೇದಗಳಿವೆ. ಮೊದಲನೆಯವನು ಮೂರು ಮೊಳದ ಖಂಡವಸ್ತ್ರಧಾರಿಯೂ ಏಕಭೋಜನಕಾರಿಯೂ ಶಸ್ತ್ರದಿಂದ ಲೋಚಕಾರಿಯೂ ಆಗಿರಬೇಕು. ಎರಡನೆಯವನು ಕೌಪೀನಧಾರಿಯೂ, ಲೋಚವನ್ನು ಮಾಡಿಕೊಳ್ಳುವವನೂ, ಹಸ್ತಪಾತ್ರದಲ್ಲಿ

ಭುಂಜಿಸುವವನೂ ಪಿಂಛವನ್ನೂ ಕಮಂಡಲುವನ್ನೂ ಧರಿಸುವವನೂ ಆಗಿರಬೇಕು. ಮೊದಲನೆಯ ನೆಲೆಯಿಂದ ಆರನೆಯ ನೆಲೆಯ ವರೆಗಿನವರು ಜಘನ್ಯಶ್ರಾವಕರೆಂದೂ; ಏಳು, ಎಂಟು ಮತ್ತು ಒಂಬತ್ತನೆಯ ನೆಲೆಗಳವರು ಮಧ್ಯಮ ಶ್ರಾವಕರೆಂದೂ; ಹತ್ತು ಮತ್ತು ಹನ್ನೊಂದನೆ ನೆಲೆಯವರು ಉತ್ತಮ ಶ್ರಾವಕರೆಂದೂ ತಿಳಿಯಬೇಕು. ಇಷ್ಟು ಹನ್ನೊಂದು ನೆಲೆಗಳ ಸಾಮಾನ್ಯ ವರ್ಣನೆ.

ಮೇಲೆ ಹೇಳಲ್ಪಟ್ಟ ಏಕಾದಶಪ್ರತಿಮಾಧಾರಿಗಳು ೧ ದೇವಪೂಜಾ ೨ ಗುರೂಪಾಸ್ತಿ ೩ ಸ್ವಾಧ್ಯಾಯ ೪ ಸಂಯಮ ೫ ತಪಃ ೬ ದಾನಗಳೆಂಬ ಷಟ್ಕರ್ಮಗಳನ್ನು ಆಚರಿಸಬೇಕೆಂಬ ವಿಧಿಯಿದೆ. ಸಕಲದೋಷರಹಿತನೂ ಪರಿಶುದ್ಧಪರಮಾತ್ಮನೂ ಆದ ದೇವರನ್ನು ಪೂಜಿಸುವುದಕ್ಕೆ ದೇವಪೂಜೆಯೆಂದೂ, ಸಕಲ ಪರಿಗ್ರಹ ಮತ್ತು ಆಶಾರಹಿತರೂ ಜ್ಞಾನಧ್ಯಾನತಪಸ್ಸುಗಳಲ್ಲಿ ಆಸಕ್ತರೂ ಆಗಿರುವ ಗುರುಗಳ ಸೇವೆಗೂ ಅಂಥವರು ಸಾಕ್ಷಾತ್ತಾಗಿ ಸಿಕ್ಕದಿದ್ದರೆ ಅವರ ಸೇವೆಯನ್ನು ಮಾಡಬೇಕೆಂಬ ಭಾವನೆಗೂ ಗುರೂಪಾಸ್ತಿಯೆಂದೂ, ಆತ್ಮಹಿತಕರವಾದ ಶಾಸ್ತ್ರವನ್ನು ಪಾರಾಯಣ ಮಾಡುವುದಕ್ಕೆ ಸ್ವಾಧ್ಯಾಯವೆಂದೂ, ಪ್ರಾಣಗಳ ರಕ್ಷಣೆಗೂ ತನ್ನ ಇಂದ್ರಿಯಗಳನ್ನು ವಶದಲ್ಲಿಟ್ಟುಕೊಳ್ಳುವುದಕ್ಕೂ ಸಂಯಮವೆಂದೂ, ಶಕ್ತ್ಯನುಸಾರವಾಗಿ ಏಕಭೋಜನ ಜಪಾನುಷ್ಠಾನಾದಿಗಳನ್ನು ಮಾಡುವುದಕ್ಕೆ ತಪವೆಂದೂ ಪಾತ್ರವರಿತು ಯಥಾಶಕ್ತಿ ದಾನವನ್ನು ಕೊಡುವುದಕ್ಕೆ ವೈಯ್ಯಾವೃತ್ಯವೆಂದೂ ಹೆಸರು.

ಗ್ರಹಸ್ಥ-ಶ್ರಾವಕನ ಧರ್ಮದ ಸಾರವನ್ನು ಸಂಗ್ರಹಿಸಿ ಹೇಳುವುದಾದರೆ—

"ನ್ಯಾಯೋಪಾತ್ತಧನೋ ಯಜನ್ ಗುಣಗುರೂನ್ ಸದ್ಧೀಸ್ತ್ರಿವರ್ಗಂ ಭಜನ್ ।
ಅನ್ಯೋನ್ಯಾನುಗುಣಂ ತದರ್ಹಗೃಹಿಣೀ ಸ್ಥಾನಾಲಯೋ ಹ್ರೀಮಯಃ ॥
ಯುಕ್ತಾಹಾರವಿಹಾರ ಆರ್ಯಸಮಿತಿಃ ಪ್ರಾಜ್ಞಃ ಕೃತಜ್ಞೋ ವಶೀ ।
ಶೃಣ್ವನ್ ಧರ್ಮವಿಧಿಂ ದಯಾಲುರಘಭೀಃ ಸಾಗಾರಧರ್ಮಂ ಚರೇತ್ ॥"

ಎಂಬೀ ಶ್ಲೋಕದಲ್ಲಿ ಹೇಳಿರುವಂತೆ ನ್ಯಾಯವಾದ ರೀತಿಯಿಂದ ದ್ರವ್ಯಾರ್ಜನೆಯನ್ನು ಮಾಡುವವನೂ, ಗುಣವಂತರನ್ನು ಭಜಿಸುವವನೂ, ಹಿತ

ಮಿತವಾದ ಉತ್ತಮವಚನವುಳ್ಳವನೂ, ಪರಸ್ಪರಾನುಗುಣವಾಗಿ ಧರ್ಮ ಅರ್ಥ ಕಾಮ ಪುರುಷಾರ್ಥಗಳನ್ನು ಸೇವಿಸುವವನೂ, ಯೋಗ್ಯಳಾದ ಪತ್ನೀ ಸ್ಥಾನ ಮತ್ತು ಮನೆಯುಳ್ಳವನೂ, ಗುರುಹಿರಿಯರಲ್ಲಿ ಲಜ್ಜಾಪರನೂ, ನಿರ್ದುಷ್ಟವಾದ ಆಹಾರ ಮತ್ತು ವಿಹಾರವುಳ್ಳವನೂ, ಸತ್ಪುರುಷರ ಸಹವಾಸವುಳ್ಳವನೂ, ಪ್ರಾಜ್ಞನೂ, ಕೃತಜ್ಞನೂ, ಇಂದ್ರಿಯಗಳನ್ನು ವಶದಲ್ಲಿಟ್ಟಿರುವವನೂ, ದಯಾಪರನೂ, ಪಾಪಭೀತನೂ ಆಗಿದ್ದು, ಧರ್ಮವಿಧಿಗಳನ್ನು ಕೇಳುತ್ತ ಮೇಲೆ ಹೇಳಿದಂತೆ ನಿವೃತ್ತಿ ಮತ್ತು ಪ್ರವೃತ್ತಿ ರೂಪವಾದ ಗೃಹಸ್ಥಧರ್ಮವನ್ನು ಪಾಲಿಸುತ್ತ ಇಹಪರ ಕೀರ್ತಿ ಸುಖ ಸಂಪತ್ತುಗಳಿಗೆ ಪಾತ್ರನಾಗಬೇಕು. ಇದು ಗೃಹಸ್ಥಧರ್ಮದ ಸಾರ.



೧೫. ಧರ್ಮಫಲ

ಧರ್ಮ ಶಬ್ದ, ಧರ್ಮ ಆಚರಣೆ, ಧರ್ಮ ಫಲ ಈ ಮೂರು ಅನಾದಿಕಾಲದಿಂದ ನಡೆದು ಬಂದು ಅನಂತಕಾಲದ ವರೆಗೆ ನಡೆಯುವ ಉತ್ತಮ ವಸ್ತುಗಳು. ಕೆಲವು ಕಾಲದಲ್ಲಿ ಧರ್ಮದ ಆಚರಣೆ ತುಸು ಮಟ್ಟಿಗೆ ಕಡಮೆಯಾಗಿರಬಹುದು; ಆದರೆ ಧರ್ಮ ಈ ಲೋಕದಿಂದ ಎಂದೆಂದಿಗೂ ಲೋಪವಾಗಿ ಹೋಗಿರಲಿಲ್ಲ. ದೇವ, ನಾರಕ, ತಿರ್ಯಕ ಜಂತುಗಳಲ್ಲಿ ಕೂಡ ಸಮ್ಯಗ್‌ದೃಷ್ಟಿಗಳಿದ್ದಾರೆ. ಮನುಷ್ಯರಲ್ಲಿಯೂ ಸಮ್ಯಗ್‌ದೃಷ್ಟಿಗಳು ಅಸಂಖ್ಯಾತರಾಗಿದ್ದಾರೆ. "ದುಃಖದಿಂದ ಪೀಡಿತರಾದ ಜೀವಿಗಳನ್ನು ಸುಖದ ಕಡೆಗೆ ಒಯ್ಯುವುದೇ ಧರ್ಮ" ಎಂದು ಸಮಂತಭದ್ರಾಚಾರ್ಯರು ಹೇಳಿದ್ದಾರೆ.

ವಿದೇಹಕ್ಷೇತ್ರದಲ್ಲಿ ಧರ್ಮ ಸದಾ ಸರ್ವದಾ ನಾಲ್ಕು ಕಾಲಗಳಲ್ಲಿ ನಿಂತಿದೆ ಎಂದು ನಂಬಿಕೆ. ಭರತಕ್ಷೇತ್ರದ ಆರ್ಯಖಂಡದಲ್ಲಿ ಮಾತ್ರ ಆಗಾಗ ಧರ್ಮ ವಿಚ್ಛೇದವಾಗುವುದು ಕಂಡುಬರುತ್ತಿದೆ. ಅಂತಹ ವೇಳೆಯಲ್ಲಿ ತೀರ್ಥಂಕರರು ಜನ್ಮವೆತ್ತಿ ಧರ್ಮೋದ್ಧರಣ ಮಾಡಿ ಸಂಸಾರವನ್ನು ಉದ್ಧರಿಸಿದ್ದಾರೆ. ಈ ರೀತಿಯಲ್ಲಿ ಧರ್ಮೋದ್ಧಾರ ಮಾಡಿದವರಲ್ಲಿ ಶ್ರೀ ಭಗವಾನ್ ಮಹಾವೀರ ಸ್ವಾಮಿಯವರು ಕಡೆಯ ತೀರ್ಥಂಕರರು. ಇವರ ಕಾಲವಾಗಿ ಈಗ ಎರಡೂವರೆಸಾವಿರ ವರ್ಷಗಳು ಸಂದುವಷ್ಟೆ. ಈಗ ನಮ್ಮ ದೇಶದಲ್ಲಿ ಧರ್ಮವೆಂಬುದು ತುಸುಮಟ್ಟಿಗೆ ಅಲ್ಲಾಡತೊಡಗಿದೆ. ಪರಿಸ್ಥಿತಿಯೇ ಕಾರಣವಾಗಿ ಈಗ ಹಿಂಸೆ, ಅಸತ್ಯ ಭಾಷಣ, ವ್ಯಭಿಚಾರ, ಪರಿಗ್ರಹ, ಈರ್ಷ್ಯೆ, ದ್ವೇಷ, ಅನುರಾಗ, ಪರನಿಂದೆ, ಸ್ವಯಂಪ್ರಶಂಸೆ, ಮದ್ಯಪಾನ, ದ್ಯೂತ, ಅಭಕ್ಷ್ಯಭಕ್ಷಣ, ಕೃತಘ್ನತೆ, ಇಂದ್ರಿಯ

ಲೋಲುಪತೆ, ಮೊದಲಾದ ಪಾಪಾಚರಣೆಗಳ ಕೈಯೇ ಮೇಲಾಗಿ ತೋರುತ್ತದೆ. ಪರಿಸ್ಥಿತಿ ಹೀಗಿರುವುದರಿಂದ ಧರ್ಮದ ಪ್ರಚಾರ, ಪಾಲನೆಗಳು ಈಗಿನ ಕಾಲಕ್ಕೆ ಅತ್ಯವಶ್ಯವಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ.

ಸಮ್ಯಗ್‌ದರ್ಶನ, ಸಮ್ಯಗ್‌ಜ್ಞಾನ, ಸಮ್ಯಕ್‌ಚಾರಿತ್ರಗಳನ್ನು ಅರಿತುಕೊಂಡು, ದಯೆ, ಧ್ಯಾನ, ಉಪವಾಸ, ಕ್ಷಮೆ, ಅಹಿಂಸೆ, ಸತ್ಯ ಮೊದಲಾದ ಉತ್ತಮ ಗುಣಗಳನ್ನು ಅನುಷ್ಠಿಸುವುದು ಪ್ರತಿಯೊಬ್ಬನ ಕರ್ತವ್ಯ ಧರ್ಮವೆಂದು ತಿಳಿಯಬೇಕು.

ಧರ್ಮಾಚರಣೆಯಿಂದ ಆತ್ಮಶುದ್ಧಿಯಾಗಿ, ಆತ್ಮನನ್ನು ಬಂಧಿಸಿರುವ ಕರ್ಮದ ಸಂಕಲೆ ಕಡಿದು ಹೋಗುವುದು. ಭೋಗಭೂಮಿ ದೊರಕುವುದೆಂಬ ಆಸೆಯಿಂದ ಆಚರಿಸುವ ಧರ್ಮ ಕೇವಲ ವಿಡಂಬನೆ ಮಾತ್ರ. ಪುಣ್ಯಮಾಡಿ ಭೋಗಸುಖ ಪಡೆಯುವೆನೆಂಬ ಆಸೆಯನ್ನು ಬಿಟ್ಟು, ಸ್ವಾರ್ಥವನ್ನು ತೊರೆದು, ಕೇವಲ ಆತ್ಮಶುದ್ಧಿಗಾಗಿ, ಆತ್ಮಶುದ್ಧಿಯ ಮೂಲಕ ಲೋಕಕಲ್ಯಾಣಕ್ಕಾಗಿ ಧರ್ಮಪರಿಪಾಲನೆ ಮಾಡಬೇಕು. ಇಂದ್ರಿಯ ಸುಖಾಭಿಲಾಷೆ ಎಂದೆಂದಿಗೂ ಆತ್ಮಕಲ್ಯಾಣ ಮಾಡಲಾರದೆಂದು ಶ್ರೀ ದೇವನಂದಿ ಮುನಿಗಳು ಸಾರಿ ಹೇಳಿದ್ದಾರೆ.

ಅಜ್ಞಾನಿಯಾದ ಜೀವ ಯಾವಾಗಲೂ ವಿಷಯಸುಖದ ಕಡೆಗೆ ಒಲೆದಿರುತ್ತದೆ. ಅತಿ ಬಡವೆಯೊಬ್ಬಳಿಗೆ ನಾಲ್ಕು ಮಕ್ಕಳಿದ್ದುವಂತೆ; ಆ ಮಕ್ಕಳು ಅನ್ನ ಅನ್ನವೆಂದು ಅಳುತ್ತಿದ್ದುವಂತೆ; ಅದನ್ನು ಅಲ್ಲೇ ಹೋಗುತ್ತಿದ್ದ ಮಕ್ಕಳಿಲ್ಲದ ಮಹಾರಾಣಿಯೊಬ್ಬಳು ಈ ಮಕ್ಕಳು ನನಗೆ ಇದ್ದಿದ್ದರೋ ಎಂದು ಹಾತೊರೆದಳಂತೆ; ಆ ಬಡವೆ ಮಹಾರಾಣಿಯನ್ನು ನೋಡಿ ಇಂತಹ ರಾಜವೈಭವ ತನಗಿದ್ದಿದ್ದರೋ ಎಂದು ಮರುಗಿದಳಂತೆ. ಇಲ್ಲಿ ತಿಳಿಯಬೇಕಾದುದಿಷ್ಟೆ. ಆ ಅತಿಬಡವೆಯೂ, ಮಹಾರಾಣಿಯೂ, ಸುಖದುಃಖಗಳೆಂಬ ಕರ್ಮಬಂಧನದಲ್ಲಿ ಬಿದ್ದು ತೊಳಲಾಡುತ್ತಿದ್ದಾರೆಂಬುದು ಮಾತ್ರ.

"ಆತ್ಮಜ್ಞಾನದ ವಿಷಯವೊಂದನ್ನು ಬಿಟ್ಟು ಬೇರೆ ಯಾವ ವಿಷಯವನ್ನೂ ಬಹುಕಾಲ ಚಿಂತಿಸಬೇಡ" ಎಂದು "ಸಮಾಧಿತಂತ್ರ"ವೆಂಬ

ಗ್ರಂಥದಲ್ಲಿ ಬರೆದಿದೆ. ಕ್ಷಮೆ, ಅಹಿಂಸೆ, ಬ್ರಹ್ಮಚರ್ಯ ಮೊದಲಾದುವು ಆತ್ಮಸ್ವರೂಪ ಜ್ಞಾನಕ್ಕೆ ಅಗತ್ಯವಾಗಿ ಬೇಕಾದವುಗಳು. ಅರ್ಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸರ್ವಸಾಧು, ಜಿನಧರ್ಮ, ಜಿನಾಗಮ, ಜಿನಚೈತ್ಯ, ಜಿನಚೈತ್ಯಾಲಯವೆಂಬ ಒಂಬತ್ತು ದೇವತೆಗಳಲ್ಲಿ ಎಂಟು ದೇವತೆಗಳು ಇಲ್ಲೇ ಉಳಿದು ಧರ್ಮದೇವತೆಯೊಂದೇ ಸಿದ್ಧಾವಸ್ಥೆಯಲ್ಲಿಯೂ ದೊರಕುವಂತಹದಾಗಿದೆ. ಮೋಕ್ಷಗಾಮಿಯಾಗಬೇಕಾದರೆ ಸಮ್ಯಕ್‌ಚಾರಿತ್ರ, ಅಹಿಂಸಾ, ಬ್ರಹ್ಮಚರ್ಯೆಗಳ ಸಹಾಯವಿಲ್ಲದೆ ಏನೇನೂ ಸಾಧ್ಯವಿಲ್ಲವೆಂಬುದು ಅನಂತಸತ್ಯವಾಗಿದೆ.

ಶ್ರದ್ಧಾಭಕ್ತಿಪೂರ್ವಕ ಜಿನದರ್ಶನ ಮಾಡುವುದು ಅತಿ ಸುಲಭದ ಸಣ್ಣ ಪ್ರಮಾಣದ ಧರ್ಮಾಚರಣೆಯಾಗಿದೆ. ಹೀಗೆ ಧರ್ಮವನ್ನು ಆರಂಭಿಸಿಕೊಂಡು ಧರ್ಮಮಾರ್ಗದಲ್ಲಿ ಮುಂದುವರಿಸಬೇಕು. ಇಚ್ಛೆ ಎಂಬುದು ಇಂದ್ರಿಯಲೋಲುಪತೆಯ ಕಡೆಗೆ ಸೆಳೆದು ನಾಶದ ದಾರಿಯನ್ನು ತೋರಿಸುವುದು. ಅದಕ್ಕಾಗಿ ಇಚ್ಛೆ ಎಂಬುದನ್ನು ತಡೆ ಹಿಡಿಯಬೇಕು. ಮನಸ್ಸನ್ನು ಸ್ವಕರ್ತವ್ಯದ ಕಡೆಗೆ ತಿರುಗಿಸಿ, ವ್ರತಧಾರಣೆ, ಇಂದ್ರಿಯ ವಿಜಯ ಮೊದಲಾದ ಸದ್ವೃತ್ತಿಯಲ್ಲಿ ತೊಡಗಿಸಬೇಕು.

ಧರ್ಮಕಾರ್ಯ ಯಾವುದೇ ಇರಲಿ, ಅದನ್ನು ಮನ, ವಚನ, ಕಾಯಶುದ್ಧಿಗಳಿಂದ ಆಚರಿಸಬೇಕು. ಶ್ರಾವಕ ಜನರು ರಾಗದ್ವೇಷಗಳನ್ನು ತೊರೆದು, ದಯಾದಾನಗಳಲ್ಲಿ ಮನಸ್ಸಿಟ್ಟು ಶುದ್ಧಧರ್ಮವನ್ನಾಚರಿಸಬೇಕು.

ಈಗಿನ ಕಾಲದಲ್ಲಿ ದಾನಧರ್ಮಾದಿಗಳನ್ನು ಮಾಡುವುದು ಕೂಡ ಒಂದು ಬಗೆಯ 'ಪೊಲಿಸಿ' ಎಂದು ಹೇಳುವವರಿದ್ದಾರೆ. ಆದರೆ 'ಪೋಲಿಸಿ' ಗಾಗಿ ದಾನಧರ್ಮ ಎಂಬ ಢೋಂಗೀಭಾವನೆಯನ್ನು ಆದಷ್ಟು ಬೇಗನೆ ಬಿಟ್ಟುಬಿಡಬೇಕು.

"ಜೈನಧರ್ಮ ಇತರ ಧರ್ಮಗಳಿಗಿಂತ ಆಚರಣೆಗೆ ಸುಗಮ; ಫಲದಲ್ಲಿ ಸಮೃದ್ಧ" ಎಂಬುದನ್ನು ಯಾರೂ ಮರೆಯಬಾರದು. ಜೈನೇತರ ಧರ್ಮದಲ್ಲಿ ಮಧು ಮಾಂಸ ಸೇವನೆ ಮೊದಲಾದ ನಿಂದ್ಯಕರ್ಮಗಳಿವೆ

ಜೈನಧರ್ಮದಲ್ಲಿ ನಿಂದ್ಯಕರ್ಮವೆಂಬುದು ಇಲ್ಲವೇ ಇಲ್ಲ. ಜೈನಧರ್ಮದಲ್ಲಿ ಕರ್ಮಸಿದ್ಧಾಂತ, ಸ್ಯಾದ್ವಾದ, ನಿಷ್ಕಾಂಕ್ಷೆ, ಶಾಂತಿ, ಪ್ರೇಮ, ವೈರಾಗ್ಯ, ಅಹಿಂಸೆ ಮೊದಲಾದ ಅತ್ಯುತ್ತಮ ಗುಣಗಳಿವೆ. "ಅಹಿಂಸಾ ಪರಮೋ ಧರ್ಮ" ಎಂಬುದು ಜೈನರ ಜೀವವಾಕ್ಯ. ಈ ಜೀವ ಜೈನ ಧರ್ಮಿಯಾಗಿರುವುದಕ್ಕಿಂತ ಮೇಲಾದ ಪರಮ ಭಾಗ್ಯವೇ ಇಲ್ಲವೆಂಬುದು ಖಂಡಿತ. ಆದುದರಿಂದ ಈ ಜನ್ಮವನ್ನು ಸಾರ್ಥಕಗೊಳಿಸಲೋಸುಗ ಧರ್ಮಮಾರ್ಗದಲ್ಲಿ ನಡೆಯುವುದು ಪ್ರತಿಯೊಬ್ಬ ಜೈನನ ಕರ್ತವ್ಯವಾಗಿರಬೇಕು.

ನಮ್ಮಲ್ಲಿ ಹಲವರು ಧರ್ಮಮಾರ್ಗವೆಂಬುದು ಅತಿ ಕಠಿಣವೆನ್ನುವವರಿದ್ದಾರೆ, ಅದು ತಪ್ಪು. ವಿಷಯವಾಸನೆಯಲ್ಲಿ ಸಿಲುಕಿದವರಿಗೆ ಮಾತ್ರ ಧರ್ಮಮಾರ್ಗ ಕಠಿಣವಾಗಿ ತೋರುವುದೇ ವಿನಾ ಬೇರೆಯವರಿಗಲ್ಲ. ಧರ್ಮಮಾರ್ಗದಲ್ಲಿ ನಡೆವಾಗ ದೊರಕುವ ಆನಂದ ಇತರ ಯಾವ ಮಾರ್ಗಗಳಲ್ಲಿ ನಡೆಯುವವರಿಗೂ ದೊರಕದು.

೧೬. ಸಿದ್ಧ - ಶಿಲಾ

ಸಿದ್ಧ-ಶಿಲಾ ಅಂದರೇನು? ಅದು ಆಧಾರರಹಿತವೇ ಅಲ್ಲವೇ? ಒಂದು ವೇಳೆ ಆಧಾರರಹಿತವಾದರೆ ಹೇಗೆ ಮತ್ತು ಏಕೆ ಹಾಗೆ? ಅಲ್ಲಿ ಬೆಳಕು ಇದೆಯೋ ಅಥವಾ ಕತ್ತಲೆಯೋ? ಅಲ್ಲಿ ಬೆಳಕು ಇದೆಯಾದರೆ ಅದು ಯಾರ ಬೆಳಕು? ಭೌತಿಕ ಬಂಧನದಿಂದ ಮುಕ್ತತೆ ಹೊಂದಿದ ಎಲ್ಲಾ ಜೀವಿಗಳಿಗೆ ನಿಲ್ಲಲು ಅವಕಾಶ ಕೊಡುವಷ್ಟು ಸ್ಥಳ ಅಲ್ಲಿದೆಯೇ? ಮುಕ್ತಜೀವಿಗಳು ಬೇರೆಲ್ಲೂ ಹೋಗದೆ ಅದೇ ಸ್ಥಳಕ್ಕೆ ಹೋಗುವುದರ ಔಚಿತ್ಯವೇನು?

ಉತ್ತರ

ಮುಕ್ತತೆ ಹೊಂದಿದ ಆತ್ಮಗಳ ಆಶ್ರಯುವೇ ಸಿದ್ಧ-ಶಿಲಾ. ಕರ್ಮದ ಕೊನೆಯ ಅವಶೇಷವನ್ನು ಕಳಚಿಕೊಂಡು ಶುದ್ಧವಾದ ಎಲ್ಲಾ ಪವಿತ್ರ ಆತ್ಮಗಳು ಅಲ್ಲಿ ದೇವತ್ವವನ್ನು ಹೊಂದಿಕೊಂಡು ಜೀವಿಸಿಕೊಂಡಿರುತ್ತವೆ.

ಲೋಕದ ತುಟ್ಟತುದಿಯಲ್ಲಿದೆ ಈ ಸ್ಥಳ. ಲೋಕ ಮತ್ತು ಅಲೋಕ ಎಂಬ ಎರಡು ವಿಭಾಗಗಳು. ಲೋಕದಲ್ಲಿ ಎರಡು ನಾಶರಹಿತ ವಸ್ತುಗಳು ಇಲ್ಲವೆ ದ್ರವ್ಯಗಳು, ಜೀವ ಮತ್ತು ಅಜೀವ— ಅಜೀವಕ್ಕೆ 5 ರೂಪಗಳು: ಪುದ್ಗಲ, ಧರ್ಮ ಮತ್ತು ಅಧರ್ಮ, ಕಾಲ, ಆಕಾಶ. ಹೀಗೆ ಲೋಕದಲ್ಲಿ ಒಟ್ಟು 6 ವಿಭಾಗಗಳು. ಈ ಆರು ಪದಾರ್ಥಗಳು ಲೋಕದಲ್ಲಿ ಮಾತ್ರ ಇವೆ. ಅದರ ಹೊರಗಿಲ್ಲ. ಅಲೋಕದಲ್ಲಿ ಜೀವ, ಚಲನ, ವಿಶ್ರಾಂತಿ ಇವು ಇರುವುದಿಲ್ಲ. ಅಲೋಕವೆಂದರೆ ಒಂದು ಶೂನ್ಯ ಕಲ್ಪನೆ. ಅದನ್ನು ಸ್ಪಷ್ಟ ಶಬ್ದಗಳಿಂದ ವಿವರಿಸುವುದು ಸಾಧ್ಯವಿಲ್ಲ. ಅದು ಲೋಕಕ್ಕಿಂತ ತೀರಾ ಭಿನ್ನವಾಗಿದೆ. ನಮಗೆ ಲೋಕದ ವಿಚಾರ ಮಾತ್ರ ಗೊತ್ತು. ಅಲೋಕದ ಕುರಿತು ನಾವು ಏನನ್ನೂ ಅರಿಯೆವು.

ಆದುದರಿಂದ ಅಲೋಕದ ಕುರಿತು ಏನಾದರೂ ಕಲ್ಪಿಸುವುದಿದ್ದರೆ ಲೋಕದ ಕುರಿತು ಯೋಚಿಸಿಯೇ ವಿವೇಚಿಸಬೇಕು.

ಲೋಕ ಅಥವಾ ಪ್ರಪಂಚದಲ್ಲಿರುವ ಜೀವಿಗಳು ಕರ್ಮಸಂಬಂಧವಾದ ಪದಾರ್ಥದಿಂದ ಕೂಡಿದವರಿರುತ್ತಾರೆ. ಕರ್ಮದಿಂದೊಡಗೂಡಿದ ಜೀವಿಯು ಸಂಸಾರವೆಂಬ ಜಲಾಶ್ರಯದಲ್ಲಿ ಮುಳುಗಿರುತ್ತದೆ. ಮೈಗೆ ಅಂಟಿಕೊಂಡಿರುವ ಕರ್ಮದ ಕೆಸರು ಹೋಗಿ ಹಗುರವಾದರೆ ಮಾತ್ರ ಅದು ನೀರಿನ ಮಟ್ಟಕ್ಕೆ ಬರುವುದು ಸಾಧ್ಯ. ಸಿದ್ಧ-ಶಿಲಾ ಎಂಬುದು ಲೋಕ ಮತ್ತು ಅಲೋಕಗಳ ನಡುವೆ ಇರುವ ಮಧ್ಯಮ ಅಂತರ.

ಅದನ್ನು ಎಂಟನೇ ಪೃಥ್ವಿ ಎಂದೂ ಕರೆಯುತ್ತಾರೆ. ಇತರ 7 ಪೃಥ್ವಿಗಳಂತೆ ಅದು ಸುತ್ತಲೂ ಘನೋದದಿ, ಘನ ಮತ್ತು ತನುವಾತ ವಲಯಗಳಿಂದ ಆವರಿಸಿಕೊಂಡಿದೆ. ಈ ಮೂರು ಆವರಣಗಳು ಅದನ್ನು ಆಧರಿಸಿಕೊಂಡಿವೆ.

ಸಿದ್ಧ-ಶಿಲಾದಲ್ಲಿ ಬೆಳಕು ಇರುವುದೋ? ಇಲ್ಲವೆ ಕತ್ತಲೆ ಪಸರಿಕೊಂಡಿರುವುದೋ ಎಂಬ ಪ್ರಶ್ನೆ ನಿರರ್ಥಕ. ಸರ್ವಜ್ಞತೆಯೇ ಇದಕ್ಕೆ ಹೇಗೆ ಮತ್ತು ಏಕೆ ಎಂಬ ಉತ್ತರ ಕೊಡಬಲ್ಲುದು. ಬೆಳಕು ಮತ್ತು ಕತ್ತಲೆ ಇವು ಭೌತಿಕತೆಗೆ ಸಂಬಂಧಪಟ್ಟವುಗಳಾಗಿವೆ. ಬೆಳಕು ಜೈನತತ್ವದಂತೆ, ಪಂಚಭೂತಗಳಲ್ಲಿ ಒಂದಾಗಿದೆ. ಸಿದ್ಧ-ಶಿಲಾದಲ್ಲಿರುವ ಬೆಳಕು ಎಂತಹದೇ ಇರಲಿ, ಯಾವುದೇ ಜಾತಿಯದಿರಲಿ, ಜ್ಞಾನವು ಆ ಬೆಳಕಿನಲ್ಲಿ ಅತ್ಯಂತ ಶಕ್ತಿಪೂರ್ಣವಾಗಿ ಅತ್ಯಂತ ಶುದ್ಧ ಪ್ರಕಾಶದಲ್ಲಿ ಅಲ್ಲಿ ಕಾಣುವುದು.

ಸಿದ್ಧ-ಶಿಲಾ ಎಲ್ಲಾ ಮುಕ್ತತೆ ಹೊಂದಿದ ಜೀವಿಗಳಿಗೆ ಆಶ್ರಯ ಕೊಡಬಲ್ಲುದು. ಇದಕ್ಕೆ ದೃಷ್ಟಾಂತ ಒಂದು ಭೌತಿಕ ನಿದರ್ಶನವನ್ನೇ ಕೊಡಬಹುದಾಗಿದೆ. ಒಂದು ಚಿಕ್ಕ ದೀಪದ ಬೆಳಕು ಹೇಗೆ ಇಡೀ ಕೋಣೆಯಲ್ಲಿ ಪ್ರಕಾಶ ತುಂಬಿಸಬಲ್ಲುದೋ, ಅದೇ ರೀತಿ ಮತ್ತೊಂದು ದೀಪವನ್ನು ತಂದು ಮೊದಲಿನ ದೀಪದ ಬಳಿಯಲ್ಲಿಟ್ಟರೆ ಅದರ ಪ್ರಕಾಶವೂ ಕೋಣೆಯಲ್ಲಿ ಹೇಗೆ ತುಂಬಬಲ್ಲುದೋ, ಮಗದೊಂದು ವಿದ್ಯುತ್ ದೀಪವನ್ನು ತಂದರೆ ಅದರ ಬೆಳಕಿಗೂ ಅಲ್ಲಿ ಆಶ್ರಯ ಹೇಗೆ ದೊರೆಯು

ಬಲ್ಲುದೋ, ಇನ್ನಿತರ ಹಲವು ದೀಪಗಳ ಪ್ರಕಾಶ ಅದೇ ಕೋಣೆಯನ್ನು ಆವರಿಸುವುದು ಹೇಗೆ ಸಾಧ್ಯವೋ, ತದ್ರೀತಿ ಯಾವತ್ತೂ ಸಂಖ್ಯೆಯ ಪವಿತ್ರ ಆತ್ಮಗಳು ಏನೊಂದು ಪ್ರಯಾಸವಿಲ್ಲದೆ, ಸಿದ್ಧ-ಶಿಲಾದಲ್ಲಿ ಆಶ್ರಯ ಪಡೆಯ ಬಲ್ಲುವು.

ಎಲ್ಲಾ ಬಂಧಮುಕ್ತತೆ ಹೊಂದಿದ ಜೀವಗಳು ಸಿದ್ಧ-ಶಿಲೆಯನ್ನು ಸೇರಲೇ ಬೇಕು. ಕಾರಣ, ಬಂಧವಿಮೋಚನೆ ಹೊಂದಿದ ಹಾಗೆಲ್ಲಾ ಮೇಲೆ ಮೇಲೆ ಏರುವುದು ಅವುಗಳ ನಿಯಮವಾಗಿದೆ. ಅವು ಪ್ರಪಂಚದ ತುಟ್ಟ ತುದಿಯನ್ನು ಏರಿ ಆದ ನಂತರ ಮುಂದೆ ಏರಲು ಅವಕಾಶವಿರುವು ದಿಲ್ಲ—ಕಾರಣ ಅದಕ್ಕಿಂತ ಮೇಲಿರುವ ಅಲೋಕದಲ್ಲಿ ಚಲನವಲನ ವ್ಯವಹಾರವಿರುವುದಿಲ್ಲ.

ಆಕಾಶಕ್ಕೆ ಆದಿ ಅಂತ್ಯ ಎಂದಿಲ್ಲ. ಜೈನರು ಅದನ್ನು ಲೋಕಾ ಕಾಶ (ತುಂಬಿದ ಜಾಗೆ) ಮತ್ತು ಅಲೋಕ (ಖಾಲಿ ಜಾಗೆ) ಎಂದು ವಿಭಾಗಿಸುತ್ತಾರೆ. ಮೊದಲಿನದು ಮನುಷ್ಯ ದೇಹದ ರೂಪದಲ್ಲಿದೆ— ನರಕದ ಕೆಳಗಿರುವ ಅದರ ಪದತಲಕ್ಕೆ ನಿಗೋದ ಎನ್ನುವರು. ಲೋಕಾ ಕಾಶದ ತುದಿಯೇ ಸಿದ್ಧ-ಶಿಲಾ. ಅದಕ್ಕೆ 'ಪ್ರಾಗ್-ಭಾರಾ' ಎನ್ನು ವರು. ಈ ಸ್ಥಳದಿಂದ ಒಂದು ಯೋಜನ ದೂರದಲ್ಲಿ ಲೋಕಾಕಾಶ ಅಂತ್ಯವಾಗುತ್ತದೆ. ಪೂರ್ಣತೆ ಹೊಂದಿದ ಜೀವಿಗಳು (ಸಿದ್ಧರು) ಈ ಪ್ರದೇಶದಲ್ಲಿ ವಾಸಿಸಿಕೊಂಡಿರುತ್ತಾರೆ.

ಸಿದ್ಧ-ಶಿಲೆಯೂ ಲೋಕಾಕಾಶದ ಒಂದು ಭಾಗವೆಂದಾಯಿತು. ಇನ್ನುಳಿದ ಪ್ರಶ್ನೆ ಎಂದರೆ ಅದು ಯಾವ ಆಧಾರದ ಮೇಲೆ ಹೊಂದಿ ಕೊಂಡಿದೆ, ಅದರ ಆಧಾರ ಎಲ್ಲಿದೆ ಎಂಬುದು. ಈ ಪ್ರಶ್ನೆಯನ್ನು ಉತ್ತರಿಸಲು ಒಂದು ಸುಲಭ ಮಾರ್ಗವೆಂದರೆ 'Law of gravitation' ಈ ಪ್ರದೇಶದಲ್ಲಿ ಜ್ಯಾರಿಯಲ್ಲಿರುವುದಿಲ್ಲ ಎನ್ನುವುದು. ಆದರೆ ಸಿದ್ಧ-ಶಿಲಾ ಪ್ರದೇಶವೂ ಭೌತಿಕತೆಗೆ ಸಂಬಂಧ ಪಟ್ಟದ್ದಿರುವುದರಿಂದ ಮೇಲಿನ ಪ್ರಕೃತಿ ನಿಯಮ ಅಲ್ಲಿ ಇರಲೇ ಬೇಕಷ್ಟೆ. ಸಿದ್ಧ-ಶಿಲಾದಲ್ಲಿ ವಾಸಿಸುವ ಜೀವಿಗಳಿಗೆ ದೈಹಿಕ ಆಕಾರವಿರುವುದಿಲ್ಲ. ಸಿದ್ಧ-ಶಿಲಾದಲ್ಲಿ ಭೌತಿಕತೆಯ ಅಂಶವಾದ ಪುದ್ಗಲವು, ಇದು ಬಹಳ ಸೂಕ್ಷ್ಮರೂಪದ್ದಾಗಿದೆ. ಸಿದ್ಧ-

ಶಿಲೆಯಿಂದ ಕೆಳಗಿರುವ ಸರ್ವಾರ್ಥಸಿದ್ಧಿ ಪ್ರದೇಶಕ್ಕಿಂತಲೂ ಸೂಕ್ಷ್ಮ ವಾದುದೆನ್ನಬಹುದು. ಸರ್ವಾರ್ಥಸಿದ್ಧಿಯಲ್ಲಿ ವಾಸಿಸುವವರಿಗೆ ಆಕಾರ ವಿದೆ. ಈ ಎರಡು ಪ್ರದೇಶಗಳ ನಡುವೆ ಇರುವ ಅಂತರವೇ ಸಿದ್ಧ-ಶಿಲೆ ಯನ್ನು ಆಧರಿಸಿಕೊಂಡಿದೆ ಎನ್ನಬಹುದು.

ಸಿದ್ಧ-ಶಿಲೆಯು ಕತ್ತಲೆಯ ಪ್ರದೇಶವಲ್ಲ. ಅದು ಅತ್ಯಂತ ಪ್ರಕಾಶ ಮಾನವಾಗಿದೆ. ಈ ಪ್ರಕಾಶ ಪುದ್ಗಲದಿಂದ ಬರುತ್ತದೆ. ಸಿದ್ಧರಿಂದಲೇ ಸಿದ್ಧ-ಶಿಲಾದಲ್ಲಿ ಪ್ರಕಾಶ ತುಂಬಿದೆ ಎನ್ನುವ ಮಾತು ಸಮರ್ಪಕವಲ್ಲ.

ಸಿದ್ಧ-ಶಿಲಾ ಒಂದು ನಿಯತ ಕ್ಷೇತ್ರ—ಆದರೆ ಸಿದ್ಧರಿಗೆ ಅದು ಯಥೇಷ್ಟ ಆಶ್ರಯ ಕೊಡಬಲ್ಲದು. ಪೂರ್ಣತೆ ಹೊಂದಿದ ಜೀವಗಳಿಗೆ ಇರಲು ಹೆಚ್ಚಿನ ಸ್ಥಳ ಬೇಕಾಗಿಲ್ಲ. ಮಾತ್ರವಲ್ಲ 'ಅವ್ಯಬಾಧಾ' ಎಂಬ ಗುಣಕ್ಕನುಗುಣವಾಗಿ ಹಲವು ಮಂದಿ ಸಿದ್ಧರು ಒಂದೇ ಜಾಗೆಯಲ್ಲಿ ಇರಬಲ್ಲರು. ಅವರು ಭೌತಿಕತೆಯಿಂದ ಪೂರ್ಣ ಮೋಕ್ಷ ಹೊಂದಿದುದ ರಿಂದ ಇದು ಸಾಧ್ಯವಿದೆ.

ಮುಕ್ತಜೀವಿಗಳು ಕರ್ಮದಿಂದ ಪೂರ್ಣ ಮುಕ್ತತೆ ಹೊಂದಿರುವುದ ರಿಂದ ಸಿದ್ಧ-ಶಿಲಾ ಸೇರಬಲ್ಲುವು. ಕರ್ಮಬಂಧನವು ತೊಳೆದು ಹೋದಂತೆ ಜೀವವು ಮೇಲಕ್ಕೇಳುವುದು. ಇದೇ ರೀತಿ ಕರ್ಮಬಂಧನವು ಪೂರ್ಣ ಬಿಟ್ಟು ಹೋಗುವಾಗ ಅದು ಸಿದ್ಧ-ಶಿಲೆಯನ್ನು ಸೇರುವುದು. ಅದರ ಮೇಲಿರುವುದು ಅಲೋಕ. ಅಲ್ಲಿಗೆ ಜೀವ ಏರಲಾರದು. ಕಾರಣ ಆ ಲೋಕದಲ್ಲಿ ಧರ್ಮವಿಲ್ಲ. ಅಲ್ಲಿ ಜೀವಕ್ಕೆ ಚಲಿಸಿಕೊಂಡಿರುವುದೂ ಸಾಧ್ಯವಿಲ್ಲ. ಆದುದರಿಂದ ಮುಕ್ತತೆ ಹೊಂದಿದ ಜೀವ ಚಿರಕಾಲ ಸಿದ್ಧ-ಶಿಲೆಯಲ್ಲೇ ಇರುವುದು.

೧೭. ಅಪರಾಜಿರ ಮಹಾಮಂತ್ರ

ಈ ಮಹಾಮಂತ್ರವು ವಸ್ತುತಃ ಬಹಳ ಮಹತ್ತ್ವಪೂರ್ಣವಾದುದು. ಆದುದರಿಂದಲೇ ಮಹರ್ಷಿಗಳು ಇದನ್ನು ದೃಷ್ಟಿವಾದದ ಸಾರವನ್ನಾಗಿ ಹೇಳಬೇಕಾಯಿತು. ಇದಕ್ಕೆ ಪ್ರಾಕೃತದಲ್ಲಿ ಣಮೋಕಾರಮಂತ್ರವೆಂದೂ ಸಂಸ್ಕೃತದಲ್ಲಿ ನಮಸ್ಕಾರಮಂತ್ರವೆಂದೂ ಹೆಸರುಂಟು. ನಮಸ್ಕಾರದ ಪ್ರಾಮುಖ್ಯತೆಯಿಂದಲೇ ಇದಕ್ಕೆ ಈ ಹೆಸರು ಬಂತು. ಮೈತ್ರಿ, ಪ್ರಮೋದ, ಕಾರುಣ್ಯ ಮತ್ತು ಮಾಧ್ಯಸ್ಥ ಈ ಭಾವಗಳ ಮೂಲಕವಾಗಿ ತನ್ನ ಮನಸ್ಸನ್ನು ಪವಿತ್ರ ಮಾಡಿಕೊಂಡವನ ಜೀವನವು ಉನ್ನತಿಯನ್ನು ಹೊಂದುವುದರಲ್ಲಿ ಯಾವ ಸಂದೇಹವೂ ಇಲ್ಲ. ನಿಜವಾಗಿ ಈ ನಾಲ್ಕು ಭಾವನೆಗಳನ್ನು ಧರ್ಮಪ್ರಾಪ್ತಿಯ ಅಸಾಧಾರಣ ಸಾಧನವನ್ನಾಗಿ ಹೇಳಬಹುದು.

ಅಪರಾಜಿತ ಮಂತ್ರದ ಸಂಬಂಧದಲ್ಲಿ ಸೂಕ್ಷ್ಮವಾಗಿ ವಿಚಾರ ಮಾಡಿದರೆ ಪ್ರತಿಯೊಬ್ಬ ವಿಚಾರಕನು ಪ್ರಮೋದಭಾವನೆಯನ್ನು ಹೊಂದಬಲ್ಲನು. ಪ್ರಮೋದಭಾವನೆಯ ಅಭ್ಯಾಸದಿಂದ ದ್ವೇಷಾದಿ ದುರ್ಗುಣಗಳು ಸಂಪೂರ್ಣ ನಷ್ಟವಾಗಿ ಬಹು ಮೂಲ್ಯ ಗುಣಗಳು ಪ್ರಾಪ್ತವಾಗುವುವು. ಗುಣವನ್ನು ಪ್ರೀತಿಸುವುದಕ್ಕೆ ಪ್ರಮೋದಭಾವನೆಯೆಂದು ಹೆಸರು. ಈ ಗುಣಪೂಜೆಯಲ್ಲಿ ದೇಶ, ವೇಶ, ಜಾತಿ ಮತ್ತು ಸಂಪ್ರದಾಯವೇ ಮೊದಲಾದ ಯಾವ ಬಂಧನವೂ ಬಾಧಕವಾಗಲಾರದು. ಈಗ ನಾವು ನಮಸ್ಕಾರ-ಮಂತ್ರವು ಮೇಲಿನ ಭಾವನೆಗಳಿಗೆ ಹೇಗೆ ಪೋಷಕವಾಗಿದೆಯೆಂಬುದನ್ನು ಮೊದಲು ವಿಚಾರ ಮಾಡೋಣ.

“ಣಮೋ ಲೋಯೇ ಸವ್ವಸಾಹೂಣಂ”–‘ಲೋಕದಲ್ಲಿರುವ ಸಮಸ್ತ ಸಾಧುಗಳಿಗೆ ನಮಸ್ಕಾರ’. ಈ ಮಂತ್ರದ ಪ್ರತ್ಯೇಕ ಅಕ್ಷರದಲ್ಲಿ ಪ್ರಮೋದ

ಭಾವನೆಯು ತುಂಬಿ ತುಳುಕುತ್ತಿದೆ. ಇದರಲ್ಲಿ ಎಷ್ಟು ದೊಡ್ಡ ಉದಾರತೆಯು ಒಡೆದು ಕಾಣುತ್ತದೆ. ಮಂತ್ರವು ದೇಶ, ಜಾತಿ, ಸಂಪ್ರದಾಯವೇ ಮೊದಲಾದ ಯಾವ ಪ್ರಕಾರವಾದ ಪ್ರತಿಬಂಧಕ್ಕೂ ಎಡೆಕೊಡದೆ ಕೇವಲ ಯಥಾರ್ಥವಾದ ಸಾಧುವಿಗೆ ಮಹತ್ವವನ್ನು ಕೊಟ್ಟಿದೆ. ವಸ್ತುತಃ ಈ ವಿಶಾಲ ಭಾವನೆಯೇ ಆತ್ಮೋನ್ನತಿಯ ಮೂಲ. ಇನ್ನೊಂದು ಮಾತು. ಪ್ರಸ್ತುತ ಮಂತ್ರದಲ್ಲಾಗಲಿ ಮುಂದೆ ಹೇಳುವ ಮಂತ್ರಗಳಲ್ಲಾಗಲಿ ಕೇವಲ ವರ್ತಮಾನಕಾಲೀನ ವ್ಯಕ್ತಿಗಳನ್ನು ಮಾತ್ರ ತೆಗೆದುಕೊಳ್ಳುವುದಲ್ಲ. ಭೂತ ಮತ್ತು ಭವಿಷ್ಯತ್ ಕಾಲಕ್ಕೆ ಸಂಬಂಧಪಟ್ಟ ವ್ಯಕ್ತಿಗಳನ್ನೂ ಅಗತ್ಯ ತೆಗೆದುಕೊಳ್ಳಬೇಕು.

"ಣಮೋ ಉವಜ್ಝಾಯಾಣಂ"—'ಲೋಕದಲ್ಲಿರುವ ಎಲ್ಲಾ ಉಪಾಧ್ಯಾಯರಿಗೆ ನಮಸ್ಕಾರ.' ಹಿಂದೆ ತಿಳಿಸಿರುವಂತೆ ಇಲ್ಲಿಯೂ ಭೂತ ಹಾಗೂ ಭವಿಷ್ಯತ್ಕಾಲೀನ ಉಪಾಧ್ಯಾಯರನ್ನೂ ಅಗತ್ಯ ತೆಗೆದುಕೊಳ್ಳಬೇಕು. ಅಧ್ಯಾಪಕರಿಗೆ ಉಪಾಧ್ಯಾಯರೆಂದು ಹೇಳುವ ರೂಢಿ. ಮಂತ್ರದಲ್ಲಿ ಹೇಳಿರುವ ಉಪಾಧ್ಯಾಯರೂ ಈ ಅರ್ಥದಿಂದ ಬಹಿರ್ಭೂತರಾಗಿರುವುದಿಲ್ಲ. ಇವರು ಸಾಧುಗಳ ವಾಸ್ತವಿಕ ವಿಕಾಸದಲ್ಲಿ ಪ್ರಯತ್ನಮಾಡುತ್ತಿರುತ್ತಾರೆ. ಆದರೆ ಇವರ ಶಿಕ್ಷಣವು "ಸಾ ವಿದ್ಯಾ ಯಾ ವಿಮುಕ್ತಯೇ" 'ಯಾವುದು ಮುಕ್ತಿಗೆ ಸಾಧಕವೋ ಅದೇ ವಿದ್ಯೆ' ಎಂಬ ಸಿದ್ಧಾಂತವನ್ನು ಸಂಪೂರ್ಣವಾಗಿ ಕಾಪಾಡುತ್ತದೆ. ಇದೇ ಇದರಲ್ಲಿರುವ ವೈಶಿಷ್ಟ್ಯ.

"ಣಮೋ ಆಯರಿಯಾಣಂ"–'ಲೋಕದಲ್ಲಿರುವ ಎಲ್ಲಾ ಆಚಾರ್ಯರಿಗೆ ನಮಸ್ಕಾರ.' ಆಚರಣೆಯಿಂದಲೇ ಶಿಕ್ಷಣಕ್ಕೆ ಬೆಲೆ ಬರುತ್ತದೆ. ಆದುದರಿಂದಲೇ ಪ್ರತಿಯೊಬ್ಬ ಧರ್ಮಸಂಸ್ಥಾಪಕನು ಕ್ರಿಯೆ ಮತ್ತು ಜ್ಞಾನ ಇವೆರಡನ್ನೂ ಆತ್ಮವಿಕಾಸದ ಸಾಧನವನ್ನಾಗಿ ಹೇಳಿರುವುದು. ವಿವೇಕದಿಂದ ಶೂನ್ಯವಾದ ಕ್ರಿಯೆಯಿಂದ ಜಡತ್ವವು ಬೆಳೆಯುತ್ತದೆ. ಆಚರಣೆಯಿಂದ ಶೂನ್ಯವಾದ ವಿದ್ಯೆಯು ಉದ್ದಂಡತೆಯನ್ನು ಬೆಳೆಸುತ್ತದೆ. ಶ್ರುತಶೀಲಗಳಿಂದ ಸಂಪನ್ನನಾದ ವ್ಯಕ್ತಿಯು ಎಲ್ಲರಿಂದಲೂ ಆರಾಧಿಸಲ್ಪಡುತ್ತಾನೆ. ಅಹಿಂಸೆ, ಸತ್ಯ, ಆಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ, ಈ ಐದು ಪ್ರಕಾರವಾದ ಆಚಾರಗಳನ್ನು ಸಂಪೂರ್ಣವಾಗಿ ಆಚರಿಸು

ವವನೂ ಹಾಗೂ ಇತರರಿಗೆ ಆಚರಿಸುವಂತೆ ಬೋಧಿಸುವವನೂ ಆಚಾರ್ಯನು. ಇವನೂ ಪೂಜ್ಯನು. ಇವನು ತನ್ನ ಇಂದ್ರಿಯಗಳನ್ನು ವಶದಲ್ಲಿಟ್ಟುಕೊಳ್ಳುತ್ತಾನೆ; ಬ್ರಹ್ಮಚರ್ಯವನ್ನು ನಿರತಿಚಾರವಾಗಿ ಪಾಲಿಸುತ್ತಾನೆ; ಕ್ರೋಧ, ಮಾನ, ಮಾಯೆ ಮತ್ತು ಲೋಭ ಇವುಗಳನ್ನು ತ್ಯಾಗ ಮಾಡುತ್ತಾನೆ; ಅಹಿಂಸಾದಿ ಮಹಾವ್ರತಗಳನ್ನೂ ಪಂಚ ಸಮಿತಿಗಳನ್ನೂ ಸಾವಧಾನದಿಂದ ಪಾಲಿಸುತ್ತಾನೆ ಮತ್ತು ಮನವಚನಕಾಯಗಳ ಅಶುಭ ಪ್ರವೃತ್ತಿಯನ್ನು ತಡೆಯುತ್ತಾನೆ. ಉಪಾಧ್ಯಾಯ ಸಾಧು ಶಬ್ದಗಳಲ್ಲಿರುವ ವಿಶಾಲ ಭಾವನೆಯೇ ಆಚಾರ್ಯ ಶಬ್ಧದಲ್ಲಿಯೂ ಅಡಕವಾಗಿದೆ.

"ಣಮೋ ಸಿದ್ಧಾಣಂ"—'ಲೋಕದಲ್ಲಿರುವ ಎಲ್ಲಾ ಸಿದ್ಧರಿಗೆ ನಮಸ್ಕಾರ'. ಭಯಂಕರವಾದ ಜ್ಞಾನಾವರಣಾದಿ ಕರ್ಮಗಳಿಂದ ಮುಕ್ತನೂ, ಪೂರ್ಣಜ್ಞಾನ, ಪೂರ್ಣದರ್ಶನಾದಿ ಅನಂತ ಗುಣಗಳಿಂದ ಯುಕ್ತನೂ, ಅಶರೀರಿಯೂ, ಪರಿಶುದ್ಧನೂ, ಆದ ಆತ್ಮನು ಸಿದ್ಧನು. ಪವಿತ್ರನಾದ ಇವನೂ ಪೂಜ್ಯನು. ಸಿದ್ಧ, ಮುಕ್ತ, ಪರಮಾತ್ಮ ಮೊದಲಾದ ಅನೇಕ ಹೆಸರುಗಳಿಂದ ಇವನನ್ನು ಸಂಬೋಧಿಸುವುದುಂಟು. ಇಷ್ಟೇ ಅಲ್ಲ. ಬೇರೆ ಬೇರೆ ಅಪೇಕ್ಷೆಯಿಂದ ಮಹರ್ಷಿಗಳು ಇವನನ್ನು ಬುದ್ಧ, ಶಂಕರ, ಪುರುಷೋತ್ತಮ, ಬ್ರಹ್ಮ ಮೊದಲಾದ ಹೆಸರುಗಳಿಂದಲೂ ಕರೆಯುತ್ತಾರೆ. ಉಳಿದವುಗಳಂತೆಯೇ ಸಿದ್ಧ ಶಬ್ದದ ಅರ್ಥವೂ ಉದಾರವಾದುದು.

"ಣಮೋ ಅರಿಹಂತಾಣಂ"—'ಲೋಕದಲ್ಲಿರುವ ಎಲ್ಲಾ ಅರಹಂತರಿಗೆ ನಮಸ್ಕಾರ.' ತನ್ನ ಪ್ರಭಾವದಿಂದ ನವೀನ ತೀರ್ಥವನ್ನು ಸ್ಥಾಪಿಸಿ, ಲೋಕಕ್ಕೆ ಕಲ್ಯಾಣಮಾರ್ಗವನ್ನು ಬೋಧಿಸಿ, ಶುಷ್ಕ ಧಾರ್ಮಿಕ ಕ್ರಿಯಾಕಾಂಡವನ್ನು ವಿರೋಧಿಸಿ, ಲೋಕಕ್ಕೆ ಹೊಸ ಬೆಳಕನ್ನು ತೋರಿಸಿಕೊಡುವ ಯುಗಪ್ರವರ್ತಕ ಮಹಾಪುರುಷನೇ ಅರಹಂತನು. ಯಾವುವುಗಳ ಪ್ರಭಾವದಿಂದ ಸಂಪೂರ್ಣ ಸಂಸಾರ ಅಸಹ್ಯವಾದ ದುಃಖವನ್ನನುಭವಿಸುತ್ತದೆಯೋ, ಯಾವುವುಗಳ ಸಾಮ್ರಾಜ್ಯವು ಪ್ರತಿಯೊಂದು ಪ್ರಾಣಿಯಲ್ಲಿ ವ್ಯಾಪ್ತವಾಗಿದೆಯೋ ಅಂತಹ ಕಾಮ, ಕ್ರೋಧ, ಮದ, ಮೋಹ, ಲೋಭ, ರಾಗ, ದ್ವೇಷ ಮೊದಲಾದ ಅಭ್ಯಂತರ ಶತ್ರುಗಳನ್ನು ಜಯಿಸುವವನೆಂದು ಅರಹಂತ ಶಬ್ದದ ಸಾಮಾನ್ಯ ಅರ್ಥ. ಸಿದ್ಧರ ಅಪೇಕ್ಷೆ

ಯಿಂದ ಅರಹಂತರಿಗೆ ಪ್ರಥಮ ಸ್ಥಾನವು ಸಿಗುವುದಕ್ಕೊಂದು ಕಾರಣ ವುಂಟು. ಸಿದ್ಧರು ಶರೀರ ರಹಿತರಾಗಿರುವುದರಿಂದ ಏನೂ ಮಾಡಲಾರರು. ಅರಹಂತರು ಸಶರೀರಿಯಾಗಿರುವುದರಿಂದ ಅನಾಸಕ್ತರಾಗಿದ್ದು ಲೋಕ ಕಲ್ಯಾಣಕ್ಕೋಸ್ಕರ ಪ್ರಯತ್ನ ಮಾಡುತ್ತಿರುತ್ತಾರೆ. ಲೋಕೋಪಕಾರದ ದೃಷ್ಟಿಯಿಂದಲೇ ಸಿದ್ಧರ ಅಪೇಕ್ಷೆಯಿಂದ ಅರಹಂತರನ್ನು ಮೊದಲು ಸ್ಮರಿಸುವುದು. ಹೀಗೆ ಐದು ಮಂತ್ರಗಳ ಸಾಮಾನ್ಯ ಅರ್ಥವಾಯಿತು.



೧೮. ಸ್ಯಾದ್ವಾದ

ಜೈನಸಿದ್ಧಾಂತವು ಅದರ ಪುರಾತನ ತತ್ವದಿಂದ ಮಾತ್ರವೇ ಅಲ್ಲದೆ, ಅದು ನಮಗೆ ಅನೇಕ ವಿಧಗಳಲ್ಲಿ ಬೆಲೆಯುಳ್ಳುದಾಗಿರುವುದು. ಭರತಖಂಡದ ಸಾಮಾಜಿಕ ಚರಿತ್ರೆಯನ್ನು ಅಭ್ಯಾಸಿಸುವವರು ಈ ಸಿದ್ಧಾಂತಕ್ಕೆ ಬಹಳ ಬೆಲೆಯನ್ನು ಕೊಡುತ್ತಾರೆ. ಜೈನಧರ್ಮವು ಹಿಂದುಸ್ಥಾನಕ್ಕೆ ಮಾಡಿರುವ ಉಪಕಾರವನ್ನು ಬಿಟ್ಟಲ್ಲಿ ಇಂಡಿಯಾ ದೇಶದ ಸಂಸ್ಕೃತಿಯು ಚರಿತ್ರೆಯು ಪೂರ್ಣವಾಗಲಾರದು. ಎರಡು ಸಂಸ್ಕೃತಿಗಳು ಒಟ್ಟಿಗಿದ್ದರೆ ಒಂದನ್ನು ಮತ್ತೊಂದು ಅನುಸರಿಸುವುದು ಸಾಮಾಜಿಕ ಶಾಸ್ತ್ರದ ಅಭಿಪ್ರಾಯವಾಗಿದೆ. ಬೌದ್ಧಮತವೂ ಹೀಗೆಯೇ ಸರಿ. ನಮ್ಮ ಪೂರ್ವಿಕರ ಬೆಳವಣಿಗೆಯು ಆಗಾಗ್ಗೆ ಅನೇಕ ಸಂಸ್ಕೃತಿಗಳ ಬಂಧನಕ್ಕೊಳಪಟ್ಟಿರಬೇಕು. ಇದು ಸಾಧಾರಣವಾಗಿ ನಿರ್ವಿವಾದ ಸತ್ಯವೆಂದೇ ಪರಿಗಣಿಸಬೇಕು. ಈಚೆಗೆ ಕಂಡುಹಿಡಿದಿರುವ ಪುರಾತನ ಶಾಸನ ಕಲಾಕೌಶಲ್ಯಗಳೇ ಮೊದಲಾದುವುಗಳಿಂದ ಈ ಸತ್ಯವು ಅನೇಕ ರೀತಿಗಳಿಂದ ನಿರ್ಧರವಾಗುತ್ತಿದೆ.

ಜೈನಧರ್ಮವು ಭರತಖಂಡದ, ಮುಖ್ಯವಾಗಿ ದಕ್ಷಿಣ ಹಿಂದುಸ್ಥಾನದ ರಾಜಕೀಯ ಚರಿತ್ರೆಯಲ್ಲಿ ಹೆಚ್ಚಾಗಿ ಕೆಲಸ ಮಾಡಿರುವುದೆಂಬುದು ನಿರ್ಧರವಾದ ವಿಷಯ. ಹಾಗೆಯೇ ರಹಸ್ಯವಾಗಿಯೇ ಸಾಮಾಜಿಕ ಚರಿತ್ರೆಯಲ್ಲಿಯೂ ತನ್ನ ಉತ್ತೇಜಕ ಶಕ್ತಿಯನ್ನು ತೋರಿಸಿರುವುದು. ನಮ್ಮಲ್ಲಿ ಬಹಳ ಆಚರಣೆಯಲ್ಲಿರುವ ಮತ್ತು ನಾವು ಭಕ್ತಿಪುರಸ್ಸರವಾಗಿ ಅನುಸರಿಸುತ್ತಿರುವ ಕೆಲವು ಪದ್ಧತಿಗಳು ಮಹಾವೀರಸ್ವಾಮಿಯವರಿಂದ ಬೋಧಿಸಲ್ಪಟ್ಟಿರಬೇಕು. ಇದಕ್ಕಾಗಿ ಇಲ್ಲಿ ನಾನು ಒಂದು ಉದಾಹರಣೆಯನ್ನು ತೆಗೆದುಕೊಳ್ಳುತ್ತೇನೆ. ಅದೇ ಅಹಿಂಸಾ ತತ್ತ್ವ. ಇನ್ನೂ ಅನೇಕ ಕಾಲದ ವರೆಗೆ ಹುಡುಕಿ ತೆಗೆಯಬೇಕಾದ

ಅನೇಕ ವಿಷಯಗಳಿರುವುದರಿಂದ ಈ ವಿಷಯದಲ್ಲಿ ನಾನು ಹೆಚ್ಚಿಗೆ ಹೇಳುವುದಿಲ್ಲ. ಈಗ ನಾನು ಹೇಳುವುದೇನೆಂದರೆ, ಜೈನಧರ್ಮವು ಭರತಖಂಡದ ಇತರ ತತ್ತ್ವಸಿದ್ಧಾಂತಗಳೆಲ್ಲಕ್ಕೂ ಬೇರೆಯಾದ ತನ್ನ ಅನುಪಮ ಸಿದ್ಧಾಂತವನ್ನು ಬೋಧಿಸುವ ವಿಷಯದಲ್ಲಿ ಕೆಲವು ಮಾತುಗಳನ್ನಾಡುತ್ತೇನೆ. ಜೈನಧರ್ಮವು ತನ್ನ ಸ್ಯಾದ್ವಾದದಿಂದ ನನ್ನ ಹೃದಯವನ್ನು ಆಕರ್ಷಿಸಿರುವುದು. ಸ್ಯಾದ್ವಾದವೇ ಮುಖ್ಯವಾಗಿ ಜೈನಧರ್ಮವನ್ನು ಇತರ ಧರ್ಮಗಳಿಂದ ಬೇರೆ ಮಾಡಿರುವುದರಿಂದ ಜೈನತತ್ತ್ವ ಮತ್ತು ಮತಬೋಧನೆಗೆ ಸರಿಯಾದ ಹೆಸರು ಸ್ಯಾದ್ವಾದವೇ ಸರಿ.

ಅನೇಕರಿಗೆ ಸ್ಯಾದ್ವಾದ ಶಬ್ದದ ರಹಸ್ಯವು ಗೊತ್ತಾಗುವುದಿಲ್ಲ. ಅವರಿಗೆ ಇದೊಂದು ತೊಡಕು. ಜೈನಧರ್ಮದ ಸಿದ್ಧಾಂತವೆಲ್ಲ ಈ ಸ್ಯಾದ್ವಾದದಲ್ಲಿ ಸೇರಿರುವುದರಿಂದ ಈ ಶಬ್ದದ ಯಥಾರ್ಥವಾದ ಅರ್ಥವು ಅನೇಕರಿಗೆ ತಿಳಿಯದೆ ಈ ಧರ್ಮದ ತಪ್ಪು ತಿಳುವಳಿಕೆಗೂ, ತಪ್ಪು ಬೋಧೆಗೂ ಕಾರಣವಾಗಿರುತ್ತದೆ. ವಿದ್ಯಾಪಾರಂಗತರಾದ ಶಂಕರಾಚಾರ್ಯರೇ ಈ ತತ್ತ್ವಕ್ಕೆ ಅನ್ಯಾಯ ಮಾಡಿರುತ್ತಾರೆ. ಸಣ್ಣಪುಟ್ಟವರು ಈ ತಪ್ಪನ್ನು ಮಾಡಿದ್ದರೆ ಕ್ಷಮಿಸಬಹುದಾಗಿದ್ದಿತು. ಈ ತತ್ತ್ವವನ್ನು ಅವರು ತಿರಸ್ಕಾರಭಾವದಿಂದ "ವಿವಸನಸಮಯ" ಅಂದರೆ ಬೆತ್ತಲೆಯ ಮತವೆಂದು ಕರೆದಿರುತ್ತಾರೆ. ಆದರೂ ಇದನ್ನು ಸರಿಯಾದ ರೀತಿಯಲ್ಲಿ ನೋಡಿದರೆ "ವಿವಸನಸಮಯ"ವೆಂಬ ಶಬ್ದವನ್ನು ಸ್ಯಾದ್ವಾದಕ್ಕೆ ಹೋಲಿಸಿ ಅದರ ಗೌರವವನ್ನು ಮತ್ತಷ್ಟು ಹೆಚ್ಚಿಸಬಹುದು.

ಸ್ಯಾದ್ವಾದದ ಮುಖ್ಯ ತತ್ತ್ವವೇನೆಂದರೆ ಲೋಕದ ಒಂದು ಪರ್ಯಾಯವಾಗಲಿ ಒಂದು ಭಾಗದ ಪರ್ಯಾಯವಾಗಲಿ ಸಂಪೂರ್ಣವಾಗಲಿಲ್ಲ. ಅನೇಕ ಅಪೇಕ್ಷೆಗಳಿಂದ ಒಂದೇ ಪದಾರ್ಥವನ್ನು ನೋಡುವುದು ಸಾಧ್ಯ. ಎಲ್ಲಾ ಅಪೇಕ್ಷೆಗಳಿಂದ ಸಿದ್ಧ ಮಾಡಿದ ವಿಷಯವು ಆಯಾ ಅಪೇಕ್ಷೆಗಳಿಂದ ಸತ್ಯವಾದದ್ದೇ. ಈ ವಿಷಯವು ನೋಡುವವನ ಅಪೇಕ್ಷೆಯಿಂದಲೂ ಪದಾರ್ಥಾಪೇಕ್ಷೆಯಿಂದಲೂ ಸತ್ಯವಾಗಿಯೇ ಇದೆ. ಲೋಕವು ಅನೇಕ ಪರ್ಯಾಯಗಳಿಂದ ಕೂಡಿದೆ. ನಾವು ನಮ್ಮ ಸಂಕುಚಿತ ಜ್ಞಾನದಿಂದ ಎಲ್ಲವನ್ನೂ ತಿಳಿಯಲು ಸಾಧ್ಯವಿಲ್ಲ. ಸರ್ವಜ್ಞನೇ ಎಲ್ಲವನ್ನೂ

ಎಲ್ಲಾ ಪರ್ಯಾಯಗಳಲ್ಲಿಯೂ ಒಂದೇ ಕ್ಷಣದಲ್ಲಿ ನೋಡುವ ಶಕ್ತಿಯುಳ್ಳವನು. ನಾವು ನೋಡುವುದು ಒಂದು ಭಾಗವನ್ನು ಮಾತ್ರವಾದುದರಿಂದ ಸಂಪೂರ್ಣದ ವಿಷಯದಲ್ಲಿ ನಾವು ಏನನ್ನೂ ನಿರ್ಧಾರವಾಗಿ ಹೇಳಲಾರೆವು. ಇದು ಎಲ್ಲರಿಗೂ ಗೊತ್ತಾಗುವ ಸತ್ಯ. ಇಲ್ಲಿನ ಆಶ್ಚರ್ಯವೇನೆಂದರೆ:—ನಾವು ಸಂಕುಚಿತವಾದ ನಮ್ಮ ಅಪೂರ್ಣ ಜ್ಞಾನವನ್ನೇ ಪೂರ್ಣವೆಂದು ಭಾವಿಸಿ ನಾವೂ ಸರ್ವಜ್ಞನ ಸರಿಸಮಾನದವರೆಂದು ಭಾವಿಸುತ್ತೇವೆ. ನಾವು ಅಪೂರ್ಣ ಜ್ಞಾನಿಗಳಾಗಿರುವುದರಿಂದಲೇ ನಾವು ನಂಬಿದುದೇ ಸತ್ಯ, ಬೇರೊಂದಿಲ್ಲವೆಂದು ಮುಷ್ಕರ ಹಿಡಿದು ಇತರರ ಅಭಿಪ್ರಾಯಗಳನ್ನು ಕಿವಿಗೇ ಹಾಕಿಕೊಳ್ಳುವುದಿಲ್ಲ. ಆದರೆ ಅನೇಕ ಪರ್ಯಾಯವಿರುವ ಈ ಲೋಕದಲ್ಲಿ ನಾನು ಹೇಳುವುದೇ ಸತ್ಯ ಇತರರು ಹೇಳುವುದು ಅಸತ್ಯವೆಂದು ಭಾವಿಸದೆ, ನಿಷ್ಪಕ್ಷಪಾತತೆಯಿಂದ ವಿಚಾರ ಮಾಡಬೇಕು. ಮಲ್ಲಿಷೇಣನು (ಹೇಮಚಂದ್ರ) ಶ್ರೀ ಜಿನೇಂದ್ರ ಮಹಾವೀರರನ್ನು ಈ ರೀತಿ ಸ್ತೋತ್ರ ಮಾಡಿರುತ್ತಾನೆ.

ಒಂದೇ ಪದಾರ್ಥವನ್ನು ಅನೇಕ ಅಪೇಕ್ಷೆಗಳಿಂದ ನೋಡಲು ಸಾಧ್ಯವಿರುವುದೆಂದು ನೀನು ಹೇಳಿರುವುದರಿಂದ ನೀನು ಪಕ್ಷಪಾತಿಯಲ್ಲ. ಇದನ್ನು ತಿಳಿಯದವರು ವಿರುದ್ಧಾಭಿಪ್ರಾಯಗಳನ್ನು ಹೊಂದಿರುವುದರಿಂದ ಹೊಡೆದಾಡುತ್ತಾರೆ.

ಯಾವ ಪರ್ಯಾಯ ಅಥವಾ ಅಪೇಕ್ಷೆಯ ರೀತಿಯನ್ನು ಬಿಟ್ಟರೆ ಯಾವ ಪ್ರಾಕೃತಿಕ ಶಾಸ್ತ್ರಜ್ಞಾನವೂ, ತಾತ್ತ್ವಿಕರಹಸ್ಯವೂ ಸಾಧ್ಯವೋ ಆ ನಿಷ್ಪಕ್ಷಪಾತತೆಯಿಂದ ಕೂಡಿರುವ ಅಭಿಪ್ರಾಯವೇ ಸ್ಯಾದ್ವಾದದ ತಿರುಳು. ಆದರೆ ನಮ್ಮ ಅಭಿಪ್ರಾಯವನ್ನು ಸಿದ್ಧಮಾಡುವ ಪ್ರಯತ್ನದಲ್ಲಿ ನಾವು ಮುಗ್ಧರಾಗಿ ಅನೇಕ ಪೂರ್ವಾಪರವಿರುದ್ಧವಾದ ಸಂಗತಿಗಳಿಗೆ ಸ್ಥಳಕೊಡಬೇಕಾಗುವುದು. ಇದನ್ನೇ ಜೈನಧರ್ಮವು ಏಕಾಂತವಾದ ಅಥವಾ ಒಂದೇ ಪರ್ಯಾಯಾಲೋಚನೆಯೆಂದು ಕರೆಯುವುದು. ಇದು ಸರಿಯಾದ ಶಬ್ದ. ಸರಿಯಾದ ಅಭಿಪ್ರಾಯವು ಅನೇಕಾಂತವಾದ (The many-sided)ದಲ್ಲಿರುವುದು, ಅಲ್ಲಿಯೇ ಹೃದಯಕ್ಕೆ ಶಾಂತಿ. ಅಸಂಖ್ಯಾತ ವಿಷಯಗಳಿಂದ ತುಂಬಿರುವ, ಪ್ರತಿಕ್ಷಣವೂ ಬೆಳೆಯುತ್ತಿರುವ ಈ ಲೋಕವು ಒಂದೇ ಅಭಿಪ್ರಾಯಕ್ಕೆ ಹೇಗೆ ಒಳಗಾಗುವುದು? ಒಂದೇ ಸಾರಿ ಎಲ್ಲವನ್ನೂ ನೋಡುವುದಕ್ಕೆ ಹೇಗೆ ಸಾಧ್ಯ? ಲೋಕದ ವಿಷಯಗಳು ಅನೇಕ ವಿಧವಾಗಿರುವುದರಿಂದ ಅವೆಲ್ಲವೂ ಒಂದೇ ಎಂದು ಭಾವಿಸುವುದು ತಪ್ಪು.

ಅಹುದು, ಮನುಷ್ಯನು ಈ ಅನೇಕ ವಿಧಗಳಲ್ಲಿಯೂ ಐಕಮತ್ಯ ವನ್ನು ಕಾಣಬೇಕು. ಅಂತು ಅನೇಕರಲ್ಲಿ ಒಂದನ್ನು ನಾವು ಕಾಣಬೇಕಾ ಗಿದೆ. ಇದು ಮಾನುಷಿಕ ಕಷ್ಟವನ್ನು ಕಡಿಮೆ ಮಾಡಿಕೊಳ್ಳುವ ಒಂದು ಉಪಾಯವೇ ಸರಿ. ನಾವು ಸರ್ವಜ್ಞರಲ್ಲದುದರಿಂದ ಇದು ನಮಗೆ ಉಪಯೋಗವಾಗಿದೆ. ನಮ್ಮಗಳಿಗೆ ಉಪಯೋಗವಾಗುವ ಒಂದು ವಿಷ ಯುವು ಸತ್ಯದ ಯಥಾರ್ಥಸ್ವರೂಪವನ್ನು ತಿಳಿಸಲಾರದು. ಸ್ಯಾದ್ವಾದವು ಮನುಷ್ಯನಿಗೆ ಈ ಆಲೋಚನಾ ರೀತಿಯನ್ನು ಹೇಳಿಕೊಡುವುದರಿಂದ ಸತ್ಯದ ಪಥವನ್ನು ತೋರಿಸಲು ಸಹಾಯ ಮಾಡುವುದು. ಇದೇ ಸ್ಯಾದ್ವಾ ದದ ಮುಖ್ಯ ತತ್ತ್ವ. ಇದು ಪ್ರತಿಯೊಬ್ಬ ಮನುಷ್ಯನಿಗೂ ಆದರಣೀಯ. ಸ್ಯಾದ್ವಾದವು ಒಂದು ನೀತಿಶಾಸ್ತ್ರವನ್ನೂ ಬೋಧಿಸುತ್ತದೆ.

ತತ್ತ್ವವನ್ನು ಬೋಧಿಸುವುದರಲ್ಲಿ ನಿಷ್ಪಕ್ಷಪಾತತೆಯಿಂದ ಕೆಲಸ ಮಾಡುವ ಸ್ಯಾದ್ವಾದವು ಆಭಾರದಲ್ಲಿಯೂ ತನ್ನ ಪ್ರಭಾವವನ್ನು ತೋರಿಸ ದಿರದು. ಅದರ ಅಂತರಂಗ ರಹಸ್ಯವನ್ನು ನಾವು ಚೆನ್ನಾಗಿ ತಿಳಿದು ಕೊಂಡರೆ ಅದು ಲೋಕಕ್ಕೆ ಏನು ಬೋಧಿಸುತ್ತದೆಂಬುದು ಚೆನ್ನಾಗಿ ಗೊತ್ತಾಗುವುದು. ನಾವು ಆಲೋಚನೆಗಳಿಗಿಂತ ಆಚರಣೆಯಲ್ಲಿ ಬಹಳ ಉತ್ಸುಕರಾಗಿದ್ದೇವೆ. ನಮ್ಮ ನಮ್ಮ ವಿರುದ್ಧಾಭಿಪ್ರಾಯಗಳು ಮತ ಸಿದ್ಧಾಂತದ ಎಲ್ಲೆ ಕಟ್ಟಿಗೆ ಕಾಲಿಟ್ಟರೆ ಪ್ರಾಣ ಹೋಗುವುದು. ಅರಿವಿ ಲ್ಲದೆ ಹೊಡೆದಾಡುವವರಾಗುತ್ತೇವೆ. ನಾವು ಸಾಧಾರಣವಾಗಿ ಮತ ಸಿದ್ಧಾಂತವನ್ನು ಮೂಲೆಗೊತ್ತಿ ನಾವು ನಂಬಿರುವುದಕ್ಕೋಸ್ಕರ, ಅದು ಮೂಢಭಕ್ತಿಯಾದರೂ, ಹೊಡೆದಾಡಲು ಸಿದ್ಧರಾಗುತ್ತೇವೆ. ಇದರಿಂದಲೇ ಮನುಷ್ಯನ ಜೀವಮಾನ ಚರಿತ್ರೆಯಲ್ಲಿ ಮತಸಿದ್ಧಾಂತದ ಹೆಸರಿನಲ್ಲಿ ಎಷ್ಟೋ ಅಖಾಡಗಳಾಗಿ ರಕ್ತದ ಕೋಡಿ ಹರಿದಿರುವುದು. ನಮ್ಮ ನಮ್ಮ ದೊಡ್ಡಸ್ತಿಕೆಯನ್ನು ತೋರಿಸುವ ನೆಪದಲ್ಲಿ ನಾವು ಎಲ್ಲಾ ಮತಗಳೂ ಯಾವುದೋ ಒಂದು ಪವಿತ್ರವಾದ ಉದ್ದೇಶದ ಪೂರ್ತಿಗೋಸ್ಕರ ಹುಟ್ಟಿ ರುವುವೆಂಬುದನ್ನು ಮರೆತು ಕಾದಾಡುತ್ತೇವೆ.

ಎಲ್ಲಾ ಮತಗಳೂ ಸಾರಿ ಹೇಳುವುದು ಐಕಮತ್ಯವನ್ನಲ್ಲದೆ ವಿರೋಧವನ್ನಲ್ಲ. ನಾವು ಸತ್ಯವನ್ನು ಬಿಟ್ಟು ಛಾಯೆಗೋಸ್ಕರ ಹೊಡೆ

ಪಾಡುತ್ತೇವೆ. ನಾವು ಮಾಡುತ್ತಿರುವ, ನಾವು ಹೇಳುತ್ತಿರುವ ವಿಷಯ ಗಳೇ ಅನಾದಿಯೆಂದು ನಾವು ನಂಬಿ ಪರಿವರ್ತಿಸುತ್ತೇವೆ. ಆದರೆ ಸ್ಯಾದ್ವಾದವು ಹೇಗೆ ಪ್ರತಿಯೊಬ್ಬನ ಆಲೋಚನೆಗೂ ಸ್ಥಳ ಕೊಟ್ಟಿರುವುದೋ ಅದರಂತೆಯೇ ಎಲ್ಲಾ ಮತಗಳ ಅಭಿಪ್ರಾಯಕ್ಕೂ ಮನ್ನಣೆಯನ್ನಿತ್ತಿದೆ. (Relegious tolerance). ಅದು ಎಲ್ಲಾ ಮತಗಳಲ್ಲಿಯೂ ಸತ್ಯದ ಒಂದು ಭಾಗವನ್ನು ನೋಡುತ್ತದೆ; ಆದರೂ ಪಾರಮಾರ್ಥಿಕ ಜೀವನವು ಒಂದೇ ಅಭಿಪ್ರಾಯದಲ್ಲಿ ನೆಲೆಗೊಂಡಿರುವುದಿಲ್ಲವೆಂದು ಪ್ರತಿಪಾದಿಸುತ್ತದೆ. ಎಲ್ಲಾ ಮತಗಳೂ ಒಂದು ಸ್ಥಳದಲ್ಲಿ ಸೇರಿ ಅದರದರ ಸತ್ಯಾಂಶವನ್ನು ಕೊಡಲಿ, ಅದರಿಂದ ಹೊರಟ ಅಭಿಪ್ರಾಯಗಳಂತೆ ಎಲ್ಲರೂ ನಡೆಯಲಿ ಎಂಬುದೇ ಸ್ಯಾದ್ವಾದದ ಮುಖ್ಯಾಂಶವಾಗಿರಬೇಕು.

ನಮ್ಮ ಧರ್ಮದ ಪಾರಮಾರ್ಥಿಕ ತತ್ತ್ವಗಳು ಆವಿಯಾಗಿ ಹೋದುವು. ಏನು ಮಾಡಿದರೆ ನಮಗೆ ಹೆಚ್ಚಿನ ಲೌಕಿಕಸುಖವಾಗಬಹುದೆಂದು ನಾವು ಹಾರಾಡುತ್ತಿರುತ್ತೇವೆ. ಈಗಿನ ಭರತಖಂಡದ ರಾಜಕೀಯ ಸ್ಥಿತಿಯು ಮತಹೋರಾಟಗಳೆಂಬ ಬೆಂಕಿಗೆ ಉಪ್ಪು ಹಾಕಿದಂತೆ ಮಾಡಿದೆ. ಒಂದೊಂದು ಪಂಗಡದವರೇ ಮೇಲಕ್ಕೆದ್ದು ಅವರವರ ಸ್ಥಿತಿಗಳನ್ನು ನೋಡುವುದರಲ್ಲಿ ಮುಂದಾಗಿ ದ್ವೇಷಾಸೂಯೆಗಳು ಹೆಚ್ಚುತ್ತಿವೆ. ಮತಸಿದ್ಧಾಂತವು ರಾಜಕೀಯ ವಿಚಾರ ಮತ್ತು ಲೌಕಿಕಲಾಭಗಳಿಗಿಂತಲೂ ಎಷ್ಟೋ ಮೇಲಿರುವುದೆಂಬ ವಿಷಯವನ್ನು ನಾವು ಮರೆತಿದ್ದೇವೆ. ಈ ಹುಚ್ಚು ಕುಣಿತವು, ಈ ಸೋಂಕು ಜಾಡ್ಯದ ಪ್ರತಿಭೆಯು, ಎಲ್ಲೆಲ್ಲಿಯೂ ಬಹಳ ಹಬ್ಬುತ್ತಿರುವುದು. ಆದರೂ ಸ್ಯಾದ್ವಾದ ನೀತಿಗನುಸಾರವಾಗಿ ನಡೆದರೆ ಇದರಿಂದ ಪಾರಾಗಲು ಸಾಧ್ಯವೆಂದು ನಾನು ನಂಬಿರುತ್ತೇನೆ. ಆದುದರಿಂದ ಎಲ್ಲರೂ ತಮ್ಮ ಜೀವಮಾನಕಾಲದಲ್ಲಿ ಈ ಸ್ಯಾದ್ವಾದವನ್ನು ಸಂಪೂರ್ಣವಾಗಿ ಅನುಸರಿಸಬೇಕೆಂಬುದೇ ನನ್ನ ಪ್ರಾರ್ಥನೆ. ಈ ರೀತಿ ಮಾಡಿದರೆ ಮಾತ್ರ ಯಾರಿಂದ ಈ ಸ್ಯಾದ್ವಾದತತ್ತ್ವವು ಹೊರಟಿತೋ ಆ ಗುರುವರ್ಯರಿಗೆ ತಾವು ಭಕ್ತಿಪುರಸ್ಸರವಾದ ಆದರವನ್ನು ತೋರಿಸಿದಿರೆಂದು ಭಾವಿಸುತ್ತೇನೆ. ಜಿನೇಶ್ವರರ ಯಥಾರ್ಥವಾದ ಪೂಜೆಯು ಅವರು ಸ್ಯಾದ್ವಾದಾಗಮದಲ್ಲಿ ಹಾಕಿಕೊಟ್ಟಿರುವ ನಿಯಮಗಳಂತೆ ನಡೆಯುವುದೆಂದೇ ನಾನು ಭಾವಿಸುತ್ತೇನೆ.

೧೯. 'ಸಾರ್ವಜನಿಕ ಧರ್ಮ'

ಸೂರ್ಯನ ಬೆಳಕು ಗಾಳಿ ಮೊದಲಾದುವು ಸಕಲ ಪ್ರಾಣಿಗಳ ಮೇಲೂ ತಾರತಮ್ಯವಿಲ್ಲದೆ ಒಂದೇ ರೀತಿಯಾಗಿ ತಮ್ಮ ಪ್ರಭಾವವನ್ನು ಬೀರುತ್ತವಷ್ಟೆ. ಅವುಗಳ ಉಪಯೋಗವನ್ನು ಪಡೆಯಲು ಅವರಿವರೆಂಬ ಹಕ್ಕುದಾರರಿಲ್ಲವಷ್ಟೆ. ಅವು ಇವನು ಧನಕುಬೇರನು ಇವನು ಬೀದಿ ಭಿಕಾರಿ ಎಂಬ ಭೇದವನ್ನಾಗಲೀ, ಇವನು ಉಚ್ಚನು ಇವನು ನೀಚನು ಎಂಬ ಅಂತರವನ್ನಾಗಲೀ ತೋರಿಸಿಲ್ಲವಷ್ಟೆ. ಹಾಗೆಯೇ ಧರ್ಮವೆಂಬುದು ಕೂಡ ಪ್ರಕೃತಿಯಂತೆ ಸಕಲ ಪ್ರಾಣಿಗಳಿಗೆ ಸೇರಿದ್ದು, ಅದಕ್ಕೆ ಅವರಿವರೆಂಬ ಉತ್ತರಾಧಿಕಾರಿ ಭೇದವಿಲ್ಲ. ಧರ್ಮವು ಸೂರ್ಯಪ್ರಕಾಶದಂತೆ ಆತ್ಮ ಅಥವಾ ಜೀವದ ಸ್ವಾಭಾವಿಕ ಪ್ರಕಾಶವಾಗಿದೆ. ಆದುದರಿಂದಲೇ ಅದರ ಉಪಯೋಗದ ಅಧಿಕಾರ ಸಕಲ ಜೀವರಾಶಿಗೆ ಸೇರಿದ್ದು. ಅದು ಜೀವಾತ್ಮದೊಂದಿಗೇ ಸೇರಿಕೊಂಡಿರುವಂಥಾದ್ದು. ಆದುದರಿಂದ ಪ್ರತಿಯೊಬ್ಬ ಜೀವಿಗೂ ಧರ್ಮದ ಉಪಯೋಗವು ಜನ್ಮಸಿದ್ಧ ಸ್ವಭಾವಗತ ಅಧಿಕಾರವಾಗಿದೆ. ಸ್ವಭಾವಸಿದ್ಧವಾಗಿ ಬಂದ ಧರ್ಮವನ್ನು ಯಾರಿಂದಲೂ ಸೆಳೆದು ತೆಗೆಯಲು ಸಾಧ್ಯವಿಲ್ಲ; ಪ್ರಾಣಿ ಮಾತ್ರದಿಂದ ಧರ್ಮವನ್ನು ಬೇರ್ಪಡಿಸುವುದೆಂದರೆ ಸೂರ್ಯನಲ್ಲಿರುವ ಪ್ರಕಾಶವನ್ನು ಪ್ರತ್ಯೇಕಿಸುವಂತೆ.

ಜೀವದ ಧರ್ಮ ಅಥವಾ ಸ್ವಭಾವವೇನೆಂದು ತಿಳಿಯಬೇಕಾದರೆ ನಾವೊಮ್ಮೆ ಲೋಕದ ವ್ರಾಣಿಗಳ ಮೇಲೆ ದೃಷ್ಟಿ ಬೀರಬೇಕು. ಹೀಗೆ ದೃಷ್ಟಿ ಬೀರಿದರೆ ಪ್ರತಿಯೊಂದು ಜೀವಿಯೂ ತಾನು ಸುಖಜೀವನವನ್ನು ಕಳೆಯಬೇಕೆಂಬ ಆಸೆಯನ್ನಿಟ್ಟುಕೊಂಡಿರುವುದು ಕಂಡುಬರುತ್ತದೆ. ಅದಕ್ಕೆ ಆನಂದದಲ್ಲಿ ಆಸೆ, ಆ ಆನಂದ ಪ್ರಾಪ್ತಿಗಾಗಿ ಜೀವಿಯು ತನ್ನ ಜ್ಞಾನವನ್ನೂ ಶಕ್ತಿಯನ್ನೂ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತದೆ. ಸಣ್ಣ ಕ್ರಿಮಿಯಾಗಲಿ ಮನುಷ್ಯನಾಗಲಿ ಇಬ್ಬರ ಪುರುಷಾರ್ಥವೂ ಒಂದೇ ಉದ್ದೇಶದ ಕಡೆಗೆ ಹರಿಯುತ್ತದೆ. ಜ್ಞಾನ ಮತ್ತು ಶಕ್ತಿಯು ಅವರ ಉದ್ದೇಶದಲ್ಲಿ

ಯಾವ ವ್ಯತ್ಯಾಸವನ್ನು ತರುವುದಿಲ್ಲ. ಪ್ರತಿಯೊಂದು ಜೀವಿಯೂ ತನ್ನ ಪರಿಸ್ಥಿತಿಗೆ ಸರಿಯಾಗಿ ಸುಖ ಪಡೆಯುಲು ಪ್ರಯತ್ನಿಸುತ್ತಲೇ ಇರುತ್ತದೆ. ಆದುದರಿಂದ ಜೀವಿಗಳ ಈ ಸಹಜ ಕ್ರಿಯೆಯ ಆಧಾರದಿಂದ ನಾವು ಜೀವಿಗಳ ಸ್ವಭಾವ, ಧರ್ಮದ ಸ್ವರೂಪಗಳನ್ನು ತಿಳಿಯಬಹುದು. ಪ್ರತಿಯೊಂದು ಜೀವಿಯ ಸ್ವಭಾವವೂ ಅದರ ಧರ್ಮ, ಸುಖ, ಜ್ಞಾನ ಮತ್ತು ಶಕ್ತಿಗಳ ರೂಪದಲ್ಲಿ ಪ್ರಕಟವಾಗುತ್ತದೆ. ಆದುದರಿಂದ ಪ್ರಾಣಿ ಮಾತ್ರಕ್ಕೆ ಸುಖ, ಜ್ಞಾನ ಮತ್ತು ಶಕ್ತಿಗಳನ್ನೀಯುವ ಮನುಷ್ಯನ ಪ್ರತಿಯೊಂದು ಕಾರ್ಯವೂ ಧರ್ಮವಲ್ಲದೆ ಬೇರೊಂದಲ್ಲ.

ಇಂದು ಲೋಕದಲ್ಲಿ ನಾವು ಯಾರನ್ನು ಮಹಾಪುರುಷರೆನ್ನುತ್ತೇವೋ ಅವರು ಹೇಳಿದ ಮಾತುಗಳನ್ನು, ಹಾಕಿದ ನಿಯಮಗಳನ್ನು, ನಡೆದ ದಾರಿಯನ್ನು ಧರ್ಮವೆನ್ನುತ್ತೇವೆ. ಆದರೆ ಆ ಧರ್ಮವೆಂಬುದು ಜೀವಿಯ ಸ್ವಭಾವ, ಸುಖ, ಜ್ಞಾನಕ್ಕೆ ಅನುಕೂಲವಾಗಿದ್ದು ಪ್ರತಿಯೊಂದು ಜೀವಿಯ ಉಪಭೋಗಕ್ಕೆ ಬೀಳುವುದಾಗಿದ್ದರೆ ಮಾತ್ರ ಧರ್ಮವೆನ್ನಬಹುದು. ಹಾಗಿಲ್ಲದಿದ್ದರೆ ಅದನ್ನು ಧರ್ಮವೆನ್ನಲಾಗದು.

ಜೈನಾಚಾರ್ಯರು ವಸ್ತುಸ್ವಭಾವವನ್ನು "ಧರ್ಮ"ವೆಂದು ಕರೆದ ಧರ್ಮದ ವ್ಯಾಖ್ಯಾನವನ್ನು ವೈಜ್ಞಾನಿಕ ರೀತಿಯಿಂದ, ಪ್ರಾಕೃತಿಕ ರೀತಿಯಿಂದ ಮಾಡಿರುತ್ತಾರೆ. ಸೂರ್ಯನಲ್ಲಿ ಪ್ರಕಾಶ, ನೀರಿನಲ್ಲಿ ಶೀತ, ಬೆಂಕಿಯಲ್ಲಿ ಉಷ್ಣ ಹೇಗೆ ಸ್ವಭಾವತಃ ಇದೆಯೋ ಜೀವಕ್ಕೆ ಅದರ ಆತ್ಮ ಸ್ವಭಾವವೇ ಧರ್ಮ; ಆ ಸ್ವಭಾವವೆಂಬುದು ಸುಖ, ಜ್ಞಾನ, ಮತ್ತು ವೀರ್ಯ ರೂಪದಲ್ಲಿದೆ ಎಂದು ಹೇಳಿದೆ. ಜೈನಾಚಾರ್ಯರಲ್ಲಿ ಹೆಚ್ಚಿನವರು "ಜ್ಞಾನ, ದರ್ಶನ, ಚಾರಿತ್ರ, ತಪ, ವೀರ್ಯ, ಉಪಯೋಗ ಎಂಬವುಗಳು ಜೀವಲಕ್ಷಣ"ವೆಂದಿರುವರು. ಆತ್ಮ ಅವಿನಾಶಿಯಾದುದು. ಜ್ಞಾನದರ್ಶನ ಪೂರ್ಣ ದ್ರವ್ಯವದು. ಉಳಿದ ರಾಗಾದಿ ಭಾವಗಳು ಬಾಹ್ಯವಾಗಿದ್ದು ಜಡಸಂಯೋಗದಿಂದ ಉಂಟಾದವುಗಳು. ಹೀಗೆ ನೋಡಿದರೂ ಜೀವದ ಸ್ವಭಾವವೇ ಧರ್ಮವೆಂಬ ವಿಷಯ ಮನದಟ್ಟಾಗುತ್ತದೆ.

ಜೈನಾಚಾರ್ಯರು ಧರ್ಮವನ್ನು ಪ್ರಾಕೃತ ಜೀವದ ಸ್ವಭಾವವೆಂದು ಘೋಷಿಸಿದ ಕಾರಣ ಆ ಯಥಾರ್ಥ ಧರ್ಮವನ್ನು ಪಾಲಿಸುವಂತೆ ಪ್ರತಿ

ರೊಂದು ಜೀವಿಯನ್ನು ಪ್ರೋತ್ಸಾಹಿಸಬೇಕಲ್ಲವೇ? ಜೀವಿ ಮಾತ್ರಕ್ಕೆ ಆತ್ಮ ಜ್ಞಾನದ ಶಿಕ್ಷಣ ಕೊಟ್ಟು ಧಾರ್ಮಿಕ ಕ್ರಿಯೆಗಳನ್ನು ಪಾಲಿಸಲು ಸಂದರ್ಭವನ್ನು ಒದಗಿಸಿ ಕೊಡಬೇಕಲ್ಲವೆ? ಹೌದು! ತೀರ್ಥಂಕರರು ಅನೇಕಾನೇಕ ಜೀವಕೋಟಿಗಳನ್ನು ಸತ್ ಧರ್ಮದ ದಾರಿಯಲ್ಲಿ ನಡೆಸಿದ್ದರು. ದಾರಿ ತಪ್ಪಿದ ಜೀವಿಗಳನ್ನು ಸರಿದಾರಿಗೆ ತರುವುದು ತಮ್ಮ ಶ್ರೇಷ್ಠವಾದ ಕರ್ತವ್ಯವೆಂದು ಅವರು ಎಣಿಸಿದ್ದರು.

"ಜಿನಶಾಸನಕ್ಕೆ ಶರಣಾಗಿ ಜೀವಿಯು ತ್ರಿಲೋಕಗಳಲ್ಲಿಯೂ ಸಾರಭೂತವಾದ ಸುಬೋಧಿ ಎಂದರೆ ವಿವೇಕವನ್ನು ಹೊಂದುತ್ತದೆ. ಮಿಥ್ಯಾಭಾವವನ್ನು ಬಿಟ್ಟು ಮೋಹದ ಸಂಬಂಧವನ್ನು ಕಳೆದುಕೊಳ್ಳುತ್ತದೆ", ಎಂದು ಭಗವಾನ್ ಕುಂದಕುಂದಾಚಾರ್ಯರು ಹೇಳಿರುವರು. ಜೈನಾಚಾರ್ಯರು ಯಾವುದೊಂದು ವರ್ಗವಿಶೇಷಕ್ಕಾಗಿ ಧರ್ಮಪಾಲನೆಯನ್ನು ಹೇಳಿಲ್ಲ. ಶ್ರೀ ಸೋಮದೇವಸೂರಿ ಹೇಳಿದಂತೆ "ಮನೋವಾಕ್ಕಾಯ ಧರ್ಮಾಯ ಮತಃ ಸರ್ವೇಪಿ ಜಂತವಃ" ಎಂದರೆ ಮನವಚನಕಾಯಗಳಿಂದ ಸಕಲ ಜಂತುಗಳೂ ಧರ್ಮಧಾರಣೆ ಮಾಡಬಹುದು.

ಜೈನಧರ್ಮ ಸಕಲ ಪ್ರಾಣಿಗಳಿಗೂ ಸಮಾನಾಧಿಕಾರ ಕೊಡುವ ಒಂದು ವೈಜ್ಞಾನಿಕ ಧರ್ಮವಾಗಿದೆ. ಹಾಗಾದರೆ ಪತಿತ ಜೀವಿಯೂ ಜೈನಧರ್ಮದಿಂದ ಪ್ರಯೋಜನ ಹೊಂದಬಹುದೋ ಎಂಬ ಪ್ರಶ್ನೆಯೊಂದು ಹುಟ್ಟುತ್ತದಲ್ಲವೇ? ಆದರೆ ಪತಿತರೆಂದರೆ ಯಾರು? ಸಾಮಾನ್ಯವಾಗಿ 'ಪತಿತ' ಎಂದರೆ ತನ್ನ ಸ್ವಭಾವದಿಂದ ಅಥವಾ ಸ್ಥಿತಿಯಿಂದ ಪ್ರಚಲಿತನಾದವ. ಹಾಗಿದ್ದರೆ ಜೀವಿ ಪತಿತನೋ? ಒಂದು ರೀತಿಯಿಂದ ಹೌದು. "ಪೂರ್ಣ ಜ್ಞಾನ, ದರ್ಶನ ಮತ್ತು ಸುಖರೂಪವಾಗಿರುವುದೇ ಜೀವ ಸ್ವಭಾವ". ಹೆಚ್ಚಾಗಿ ಜೀವನಲ್ಲಿರಬೇಕಾದ ಈ ಅಭಿವ್ಯಪೂರ್ಣರೂಪದಿಂದ ದೃಷ್ಟಿಗೋಚರವಾಗದ ಕಾರಣ ಜೀವಿಯು ಪತಿತನು.

ಜೀವನು ಮೂರು ಲೋಕದಲ್ಲಿ ದೊರಕಬಹುದಾದ ಅಸಂಖ್ಯ ಸಂಪತ್ತಿಗೂ ಮೇಲಾದ ಸಂಪತ್ತಿಗೆ ಅಧಿಕಾರಿಯಾಗಿದ್ದರೂ, ತನ್ನ ಸ್ವಾಭಾವಿಕ ಸಂಪತ್ತಿಯನ್ನು ಕಳಕೊಂಡ ಕಾರಣ ಈ ವಿಶ್ವದಲ್ಲಿ ಸ್ಥಾನಶೂನ್ಯನಾಗಿದ್ದಾನೆ. ಜೀವನು ಕ್ರೋಧ, ಮಾನ, ಮಾಯಾ, ದಂಭ, ಅಜ್ಞಾನಾದಿ

ದುರ್ಗುಣಗಳಿಂದ ಕೂಡಿದವನಾಗಿ ಪತಿತನಾಗಿದ್ದಾನೆ. ಜೀವನು ಕಷಾಯ ಜನಿತ ಮನವಚನ ಕ್ರಿಯೆಗಳ ವಶವರ್ತಿಯಾಗಿ ಅನಾದಿಕಾಲದಿಂದ ತನ್ನಿಂದ ಭಿನ್ನವಾದ ಸೂಕ್ಷ್ಮವಾದ ಪುದ್ಗಲರೂಪದ ಕಲ್ಮಶವನ್ನು ತನ್ನಲ್ಲಿ ತುಂಬಿಕೊಂಡು ಬಂದಿರುವನು. ಇದೇ ಜೈನಧರ್ಮದ ಕರ್ಮಫಲ. ಈ ಕರ್ಮಫಲವೇ ಕಾರಣವಾಗಿ ಜೀವನು ತನ್ನ ಸ್ವಾಭಾವಿಕ ಸ್ಥಿತಿಯನ್ನು ಕಳೆದುಕೊಂಡು ಪತಿತನಾಗಿರುವನು.

ಈ ಪತಿತಜೀವಿ ತನ್ನ ಪತಿತಾವಸ್ಥೆಯಿಂದ ಮೇಲೆದ್ದು ಆತ್ಮಸ್ವಭಾವದ ಉತ್ತಮ ಸ್ಥಿತಿಗೆ ಏರಲು ಸಾಧ್ಯವಿದೆಯೇ ಎಂದು ಕೇಳಿದರೆ, "ಸಾಧ್ಯವಿದೆ" ಎಂಬುದೇ ಅದಕ್ಕೆ ಉತ್ತರ. ಪತಿತಜೀವಿ ಪತಿತಾವಸ್ಥೆಯಿಂದ ಮೇಲೆ ಬರಲು ಸಾಧ್ಯವಿಲ್ಲವೆಂದಾಗುತ್ತಿದ್ದರೆ ಲೋಕದಲ್ಲಿ ಇಷ್ಟೊಂದು ಮತ ಪಂಥಗಳು ಹುಟ್ಟುತ್ತಿರಲಿಲ್ಲ. ತನ್ನ ಸ್ಥಾನದಿಂದ ಚ್ಯುತನಾದವನನ್ನು ಸತ್ಸಂಗತಿಯ ಮೂಲಕ ಮೇಲಕ್ಕೆತ್ತಿ ಮೊದಲಿನ ಉಚ್ಚಸ್ಥಾನದಲ್ಲಿ ಕುಳ್ಳಿರಿಸುವುದು ಪ್ರಕೃತಿ ನಿಯಮ. ಪ್ರಕೃತಿ ತನ್ನ ನಿಯಮಕ್ಕೆ ವಿರೋಧಿಯಾದವನನ್ನು ಎಂದಿಗೂ ಬಿಡಲಿಕ್ಕಿಲ್ಲ. ಹೇಗಾದರೂ ಮಾಡಿ ಸರಿಯಾದ ದಾರಿಗೆ ಹಚ್ಚಿಯೇ ಬಿಡುವುದು.

ಸೂರ್ಯನನ್ನು ಮೋಡಗಳು ಹೇಗೆ ಸದಾಕಾಲವೂ ಮುಚ್ಚಿಕೊಂಡಿರಲಾರವೋ ಹಾಗೆಯೇ ಜೀವನನ್ನು ಎಂದೆಂದಿಗೂ ಕರ್ಮಫಲವು ಮುಚ್ಚಿಕೊಂಡಿರಲಾರದು. ಒಂದಲ್ಲ ಒಂದು ದಿನ ಆ ಕರ್ಮ ನಾಶವಾಗಿ ಪತಿತನಾದ ಜೀವಿಯು ಉದ್ಧಾರವಾಗಬೇಕು. ಇದಕ್ಕೆ ಅನೇಕ ಮಂದಿ ದುಷ್ಟ ಜನರು ತಮ್ಮ ದೌಷ್ಟ್ಯವನ್ನು ಬಿಟ್ಟು ಸತ್ಪುರುಷರಾದ ಸಾವಿರಾರು ಉದಾಹರಣೆಗಳೇ ನಿದರ್ಶನ. ಪದಭ್ರಷ್ಟನಾದ ಜೀವಿ ಕರ್ಮಫಲದಿಂದ ಮುಕ್ತನಾಗಿ ತನ್ನ ನಿಜವಾದ ಸ್ಥಾನವನ್ನು ಪಡೆಯಬೇಕೆಂಬುದೇ ಜೈನ ಧರ್ಮದ ತಿರುಳು. ಇದೇ ವಿಜ್ಞಾನ ಸಮ್ಮತ ಧರ್ಮ. ಜೈನಧರ್ಮ ಕೇವಲ ಮನುಷ್ಯ ಮಾತ್ರಕ್ಕೆ ಅಲ್ಲ, ಅದನ್ನು ಕೇಳುವ ಪಶುಪಕ್ಷಿಗಳಿಗೆ ಕೂಡಾ ಅದು ಮುಕ್ತಿ ದೊರಕಿಸಿ ಕೊಡಬಲ್ಲುದು. ಅದಕ್ಕೆ ಜೀವಭೇದ ವಿಲ್ಲ. ಜೈನಧರ್ಮದ ವ್ಯಾಪಕತೆ ಏನೆಂಬುದಕ್ಕೆ ಭಗವಾನ್ ಮಹಾವೀರ ಸ್ವಾಮಿಯ ಇದೊಂದು ಮಾತಿನ ದೃಷ್ಟಾಂತ ಸಾಕು:—

ಸವಣೇ ನಾಣೇ ವಿಣ್ಣಾಣೇ, ಪಚ್ಚಖ್ಖಾಣೇ ಯ ಸಂಜಮೇ ।
ಅಣಾಹಏ ತಬೇ ಚೇವ ಬೋದಾಣೇ, ಅಕಿರಿಯಾಸಿದ್ಧೀ ॥ (2-5 ಭಗವತೀ)

"ಜ್ಞಾನೀ ಜನರ ಸಂಸರ್ಗದಿಂದ ಧರ್ಮಶ್ರವಣವಾಗುತ್ತದೆ. ಧರ್ಮ ಶ್ರವಣದಿಂದ ಜ್ಞಾನವೂ, ಜ್ಞಾನದಿಂದ ವಿಜ್ಞಾನವೂ ವಿಜ್ಞಾನದಿಂದ ದುರಾಚಾರದ ತ್ಯಾಗವೂ ಉಂಟಾಗುವುದು. ಮತ್ತು ಈ ತ್ಯಾಗದಿಂದಲೇ ಸಂಯಮಿ ಜೀವನವು ನಡೆಯುವುದು. ಸಂಯಮೀ ಜೀವನದಿಂದ ಜೀವವು ಅನಾಶ್ರವಿಯಾಗಿ, ಅನಾಶ್ರವಿಯಾಗುವುದರಿಂದ 'ತಪಸ್ವಿ' ಆಗುತ್ತದೆ. 'ತಪಸ್ವಿ'ಯಾಗುವುದರಿಂದ ಪೂರ್ವಸಂಚಿತ ಕರ್ಮನಾಶವಾಗುತ್ತದೆ. ಕರ್ಮನಾಶವಾದೊಡನೆಯೇ ಜೀವವು ಸಾವದ್ಯಕ್ರಿಯಾರಹಿತವಾಗಿ ಸಿದ್ಧಿ-ಮುಕ್ತಿಯನ್ನು ಹೊಂದುತ್ತದೆ." ಹೀಗೆ ಪತಿತಜೀವನು ಜೀವಧರ್ಮದ ಜೈನಧರ್ಮದ ಜ್ಞಾನ ಪಡೆದು ಮುಕ್ತಾತ್ಮನಾಗುತ್ತಾನೆ.

ಯಾವ ಜಾತಿವಾದಕ್ಕೆ ಪ್ರತಿದ್ವಂದ್ವಿಯಾಗಿ ಸರ್ವ ಜೀವರಾಶಿಗಳಲ್ಲಿ ಸಮಾನತೆಯನ್ನು ಪಸರಿಸಲು ಜೈನಧರ್ಮ ತಲೆ ಎತ್ತಿತೋ, ಆ ಜೈನಧರ್ಮ ಬ್ರಾಹ್ಮಣ ಧರ್ಮದ ಪ್ರಭಾವಕ್ಕೆ ಒಳಗಾಗಿ ತನ್ನೊಳಗೆ ಅಜ್ಞಾನದ ಮೂಲಕ ಜಾತಿವಾದವನ್ನು ಹುಟ್ಟಿಸಿಕೊಂಡದ್ದನ್ನು ನೋಡಿದರೆ ವಿಷಾದವಾಗುತ್ತದೆ. ಇಂದು ಭಗವಾನ್ ಮಹಾವೀರಸ್ವಾಮಿ ಉಪದೇಶಿಸಿದ ಉದಾರ ಧರ್ಮದ ಸಂದೇಶವನ್ನು ಪ್ರಸಾರಗೊಳಿಸುವುದು ಪ್ರತಿಯೊಬ್ಬ ಜೈನ ಧರ್ಮಾವಲಂಬಿಯ ಕರ್ತವ್ಯವಾಗಿದೆ. ಸರ್ವಜೀವ ಸಮಭಾವವನ್ನು ಬೋಧಿಸುವ ಜೈನ ಧರ್ಮದಲ್ಲಿ ಜಾತಿವಾದಕ್ಕೆ ಎಡೆಯಿಲ್ಲ. ಜೈನಧರ್ಮದಲ್ಲಿ ಮನುಷ್ಯ ಜಾತಿ ಒಂದೇ, ಅದರಲ್ಲಿ ಎರಡಿಲ್ಲ. "ಮನುಷ್ಯ ಜಾತಿರೇಕೈವ" (ಆದಿ. ಪು.) ಬ್ರಾಹ್ಮಣ ಕ್ಷತ್ರಿಯಾದಿ ಜಾತಿಭೇದವೆಂಬುದು ಆಹಾರವಿಹಾರ ವೃತ್ತಿಗಳನ್ನವಲಂಬಿಸಿದೆಯೇ ಹೊರತು ಅದು ಜನ್ಮವನ್ನವಲಂಬಿಸಿಲ್ಲ. "ಜಾತಿ ಕರ್ಮೋದಯೋದ್ಭವಾಃ" (ಆದಿ. ಪು.) ಈ ವೃತ್ತಿ ಭೇದದಿಂದ ಉಂಟಾದ ಬ್ರಾಹ್ಮಣಾದಿ ವಿಭಾಗಗಳು ಮನುಷ್ಯ ಜಾತಿಯಲ್ಲಿ ಮೂಲಭೂತಭೇದಗಳನ್ನು ತರಲಾರವು. ಆದುದರಿಂದಲೇ ಜೈನಧರ್ಮದಲ್ಲಿ ಯಾವನೊಬ್ಬನೂ ಜನ್ಮಗತ ಜಾತಿಯುವರಿಂದ ಮೇಲು ಕೀಳೆನಿಸಲಾರನು. ಜನ್ಮತಃ ಬ್ರಾಹ್ಮಣನೆನಿಸಿಕೊಂಡವನೂ ಚಾಂಡಾಲನೆನಿಸಿಕೊಂಡವನೂ ಧರ್ಮಪರಿಪಾಲನೆಯಲ್ಲಿ ಸಮಾನಾಧಿಕಾರವುಳ್ಳವರು.

"ಣ ವಿದೇಹೋ ವಂದಿಜ್ಜ ಇ ಣವಿ ಯ ಕುಲೋ ಣವಿಯ ಜಾಇ ಸಂಜುತ್ತೋ ।
ಕೋವಂದಿಯ ಗುಣಹೀಣೋ ಣ ಹು ಸವಣಾ ಣೇಯ ಸಾವಓಹೋಇ ॥

ಎಂದು ಶ್ರೀ ಕುಂದಕುಂದಾಚಾರ್ಯರು ಹೇಳಿರುವ ಉಪದೇಶ ವಾಕ್ಯದ ಸಾರಾಂಶವೆಂತೆಂದರೆ: "ದೇಹವನ್ನು ಯಾರೂ ವಂದಿಸುವುದಿಲ್ಲ. ಹಾಗೆಯೇ ಕುಲವನ್ನೂ ಯಾರೂ ಪೂಜಿಸುವುದಿಲ್ಲ. ಉಚ್ಚ ಜಾತಿಯವನೆನ್ನಿಸಿ ಕೊಳ್ಳುವುದರಿಂದ ಯಾರೂ ವಂದ್ಯನಾಗನು. ಗುಣಹೀನನನ್ನು ಯಾರೂ ವಂದಿಸುವುದಿಲ್ಲ. ಗುಣಹೀನನು ಶ್ರಾವಕನಾಗಲೀ ಮುನಿಯಾಗಲೀ ಆಗಲಾರನು."

ಹಾಗೆಯೇ ಪೂಜ್ಯರಾದ ಶ್ರೀ ಸಮಂತಭದ್ರಾಚಾರ್ಯರು ಕೂಡ:— "ಸಮ್ಯಗ್ದರ್ಶನ ಸಂಪನ್ನಮಪಿ ಮಾತಂಗ ದೇಹಜಂ । ದೇವಾದೇವಂ ವಿದುರ್ಭಸ್ಮಗೂಢಾಂಗಾರಾಂತರೌಜಸಂ" ಎಂದರೆ, ಚಾಂಡಾಲನು ಕೂಡ ಸಮ್ಯಕ್‌ದರ್ಶನ-ಸತ್‌ಶ್ರದ್ಧೆಗಳಿಂದ ಕೂಡಿದವನಾದರೆ 'ದೇವ' ಶಬ್ದದಿಂದ ಕರೆಯಲು ಯೋಗ್ಯನಾಗಿರುವನು" ಎಂದಿರುವರು.

ಶ್ರೀ ಸೋಮದೇವಾಚಾರ್ಯರು ಕೂಡ "ಜಿನೇಂದ್ರ ಧರ್ಮವು ಉಚ್ಚನೀಚರೆಂಬ ಎರಡು ಬಗೆಯ ಮನುಷ್ಯರಿಗೂ ಆಶ್ರಯಿತವಾಗಿದೆ. ಒಂದೇ ಕಂಬದ ಮೇಲೆ ಮಾಡು ಹೇಗೆ ನಿಲ್ಲಲಾರದೋ ಹಾಗೆಯೇ ಉಚ್ಚ ಅಥವಾ ನೀಚ ಒಂದರ ಮೇಲೆಯೇ ಧರ್ಮ ನಿಲ್ಲಲಾರದು. ಧರ್ಮವೆಂಬುದು ಸಮುದಾಯಕ್ಕೆ ಆಶ್ರಿತವಾಗಿದೆ" ಎಂದಿರುವರು. ಲೋಕದಲ್ಲಿ ಧರ್ಮದ ವಿಚಾರದಲ್ಲಿ ಉಚ್ಚ ನೀಚ ತರತಮಭಾವವನ್ನು ತಂದರೆ ಜೈನಾಚಾರ್ಯರು ಹೇಳಿದ ಸ್ವಭಾವಗತ ಅಧಿಕಾರ ಎಲ್ಲಿ ಉಳಿಯಿತು? ತಂತಮ್ಮ ಕರ್ಮಫಲದಿಂದಾಗಿ ಮನುಷ್ಯನಲ್ಲಿ ಉಂಟಾದ ಉಚ್ಚ ನೀಚ ಭಾವ ಸದ್ಧರ್ಮಾಚರಣೆಯಿಂದ ಅಳಿದು ಹೋಗಿ ಪರಿಶುದ್ಧವಾಗುವುದೆಂದು ಇನ್ನೊಮ್ಮೆ ಜೈನಾಚಾರ್ಯರ ವಚನವನ್ನು ಹೇಳಬೇಕಾಗಿಲ್ಲವಷ್ಟೆ?

ಶೀಲವಂತೋ ಗತಾಃ ಸ್ವರ್ಗೇ ನೀಚಜಾತಿ ಭವಾಅಪಿ ।
ಕುಲೀನಾ ನರಕಂ ಪ್ರಾಪ್ತಾ। ಶೀಲ ಸಂಯಮನಾಶಿನಃ ॥

ಎಂದು ಅಮಿತಗತ್ಯಾಚಾರ್ಯರು ಹೇಳಿರುವರು. ತಾತ್ಪರ್ಯ:— ನೀಚ ಜಾತಿಯಲ್ಲಿ ಹುಟ್ಟಿದವರೆನ್ನಿಸಿಕೊಂಡವರು ಶೀಲ ಧರ್ಮಗಳ ಆಚರಣೆ

ಯಿಂದ ಸ್ವರ್ಗವನ್ನೈದಿದರು. ಉಚ್ಚ ಕುಲೋತ್ಪನ್ನರೆನ್ನಿಸಿಕೊಂಡವರು ದುರಾಚರಣೆಯಿಂದ ನರಕಗತಿಯನ್ನು ಹೊಂದಿದರು. ಮನುಷ್ಯನನ್ನು ಒಳ್ಳೆಯವನನ್ನಾಗಿಯೂ ಕೆಟ್ಟವನನ್ನಾಗಿಯೂ ಮಾಡುವುದು ಗುಣ. ಈ ಗುಣವೇ ಮನುಷ್ಯ ಜೀವನದ ದಿವ್ಯಪ್ರಕಾಶ. ಇದನ್ನೇ ಶ್ರೀ ಜಿನಸೇನಾಚಾರ್ಯರು ಆದಿಪುರಾಣದಲ್ಲಿ "ವಿಶುದ್ಧ ವೃತ್ತಯಸ್ತಸ್ಮಾಜ್ಜೈನಾವರ್ಣೋತ್ತಮಾಃ ದ್ವಿಜಾಃ । ವರ್ಣಾಂತಃ ಪಾತಿನೋನ್ಯೈತೇ ಜಗನ್ಮಾನ್ಯಾ ಇತಿಸ್ಥಿತಂ" ಎಂದಿರುವರು. ಈ ಮಾತಿನ ಅಭಿಪ್ರಾಯವಿಷ್ಟು:—"ವಿಶುದ್ಧವೃತ್ತಿಯುಳ್ಳ ಜೈನರು ಸರ್ವವರ್ಣಗಳಲ್ಲಿ ಶ್ರೇಷ್ಠರು, ಅವರೇ ದ್ವಿಜರು." ಇಲ್ಲಿ ವರ್ಣವೆಂದರೆ ಜನ್ಮಜಾತ ಜಾತಿಯಲ್ಲ. ಒಟ್ಟು ತಾತ್ಪರ್ಯವೇನೆಂದರೆ, ಜೈನಾಚಾರ್ಯರ ಹೇಳಿಕೆಯಂತೆ ಮನುಷ್ಯ ಮಾತ್ರನಾದವನು ಧರ್ಮಧಾರಣೆಗೆ ಅಧಿಕಾರವುಳ್ಳವನು!

ಇನ್ನು ಚರಿತ್ರಕಾಲದ ಎಷ್ಟೋ ಶಿಲಾಲೇಖಗಳನ್ನುನೋಡಿದರೆ ಅವುಗಳಲ್ಲಿ ಕೂಡ ಶೂದ್ರಾದಿ ನೀಚ ಜಾತಿಯವರು ಜೈನಧರ್ಮಪರಾಯಣರಾದ ನೂರಾರು ಉದಾಹರಣೆಗಳು ದೊರಕುತ್ತವೆ. ಇವನ್ನೆಲ್ಲ ನೋಡುವಾಗ ಜೈನಧರ್ಮವು ಜಾತಿಯನ್ನೊಪ್ಪುವುದಿಲ್ಲ. ಅದರಲ್ಲಿ ಧರ್ಮಾಚರಣೆಗೆ ಸರ್ವರಿಗೂ ಅಧಿಕಾರವಿದೆ. ಅದು ಪತಿತರನ್ನು ಉದ್ಧರಿಸಿ ಮೇಲಕ್ಕೇರಿಸುವ ಉತ್ತಮ ಸತ್ ಧರ್ಮ. ಅದು ಸವಾರ್ಧಿಕಾರೀ ಧರ್ಮವಲ್ಲ; ಸರ್ವರಿಗೂ, ಸಕಲ ಜೀವರಾಶಿಗಳಿಗೂ ಸಮಾನ ಧರ್ಮಾಧಿಕಾರವನ್ನು ಕೊಡುವ ಸಾರ್ವಜನಿಕ ಧರ್ಮ.



೨೦. ಜೈನ ದಿಗಂಬರ ಸಾಧುಗಳ ಚರ್ಯೆ

ಸಾಧು ಜೀವನವು ಗೃಹಸ್ಥ ಜೀವನಕ್ಕಿಂತ ಸರ್ವಥಾ ಭಿನ್ನವಾಗಿರಬೇಕು. ಗೃಹಸ್ಥರು ಮಾಡುವಂತಹ ಕಾರ್ಯವನ್ನೇ ಸಾಧುಗಳು ಮಾಡಿದುದಾದರೆ ಸಾಧು-ಗೃಹಸ್ಥರೊಳಗೆ ಯಾವ ಭೇದವೂ ಇರಲಾರದು. ಆದುದರಿಂದ ಸಾಧುಗಳು ವಿಷಯಾಶೆಗಳಿಂದ ಸರ್ವಥಾ ರಹಿತರೂ ಆರಂಭ ಮತ್ತು ಪರಿಗ್ರಹಗಳನ್ನು ತೊರೆದವರೂ ಆಗಿರಬೇಕು. ವಿಷಯಾಶೆ, ಆರಂಭ ಮತ್ತು ಪರಿಗ್ರಹಗಳನ್ನಿಟ್ಟುಕೊಳ್ಳುವಿಕೆಯು ಗೃಹಸ್ಥರ ಕಾರ್ಯವಾಗಿದೆ. ಅತಏವ ಸಾಧುಗಳು ವಿಷಯಾಶೆ, ಆರಂಭ ಮತ್ತು ಪರಿಗ್ರಹಗಳಿಂದ ಸರ್ವಥಾ ರಹಿತರಾಗಿರುತ್ತಾರೆ, ಹಾಗೂ ಜ್ಞಾನಾಭ್ಯಾಸ, ಧರ್ಮಧ್ಯಾನ ಮತ್ತು ತಪಶ್ಚರಣಾದಿಗಳು ಅವರ ವಿಧೇಯ-ಕಾರ್ಯಗಳಾಗಿರುತ್ತವೆ.

ಎಲ್ಲದಕ್ಕಿಂತಲೂ ದೊಡ್ಡ ಪಾಪ ಹಾಗೂ ಅಪರಾಧವೆಂದರೆ ಪರಿಗ್ರಹವು. ಮಾನಸಿಕ ಮತ್ತು ಶಾರೀರಿಕ ಪರಿಗ್ರಹವೇ ಸಂಸಾರದಲ್ಲಿ ಪಾಪಗಳ ಪಾರಂಪರಿಕ-ಸಂತತಿಯನ್ನು ಹೆಚ್ಚಿಸುತ್ತಿರುತ್ತದೆ. ಪರಿಗ್ರಹವೇ ಕೋಪ, ಹಿಂಸೆ, ಕಠೋರವಚನ, ಸುಳ್ಳು ಮೊದಲಾದುವುಗಳ ಉತ್ಪಾದಕವೂ ಮಮತ್ವಕಾರಕವೂ ಆಗಿರುತ್ತದೆ. ಭಯಾದಿಗಳನ್ನು ಹಾಗೂ ಚಿತ್ತಭ್ರಮೆಯನ್ನುಂಟು ಮಾಡುವುದೂ ಪರಿಗ್ರಹವೇ ಆಗಿದೆ. ಆದುದರಿಂದ ನಿಜವಾದ ಸಾಧುತ್ವದ ಉಪಾಸಕರು ತಮ್ಮ ಶರೀರ ಹಾಗೂ ಮನಸ್ಸಿನಲ್ಲಿ ಕಿಂಚಿನ್ಮಾತ್ರವೂ ಪರಿಗ್ರಹ ಲಾಲಸೆಯನ್ನಿಟ್ಟುಕೊಳ್ಳುವುದಿಲ್ಲ. ಮತ್ತು ಕ್ರೋಧಾದಿಗಳ ಪ್ರವೃತ್ತಿಗೆ ಕಾರಣವುಂಟಾಗದಂತಹ ರೂಪವನ್ನು ಧರಿಸುತ್ತಾರೆ. ಅಂತಹ ರೂಪವು ದಿಗಂಬರ ರೂಪವಲ್ಲದೆ ಬೇರೊಂದಿಲ್ಲ. ಅಂತರಂಗ ಮತ್ತು ಬಹಿರಂಗ ದಿಗಂಬರ ರೂಪವೇ ಸಮಸ್ತ ಪಾಪಗಳ ಹಾಗೂ ಅಪರಾಧಗಳ ಮುಕ್ತಿಗೆ ಕಾರಣವಾದುದು.

ನಗ್ನ ದಿಗಂಬರ ರೂಪವೇ ಜಾತರೂಪವು. ತತ್ಕಾಲಜನಿತ ಬಾಲಕನ ಜಾತರೂಪತ್ವಕ್ಕೂ ಸಾಧುವಿನ ಜಾತರೂಪತ್ವಕ್ಕೂ ಕೇವಲ ವಿವೇಕದ ಅಂತರವಿರುತ್ತದೆ. ತತ್ಕಾಲೋತ್ಪನ್ನ ಅಥವಾ ಸ್ವಲ್ಪ ದೊಡ್ಡ ಬಾಲಕನು ನಿರ್ವಿಕಾರನಾಗಿರುವಂತೆ ನಗ್ನ ದಿಗಂಬರ ಸಾಧುವೂ ಸರ್ವತಾ ನಿರ್ವಿಕಾರನಾಗಿರುತ್ತಾನೆ. ಇಂತಹ ಜಾತರೂಪಧರರೂ ವೀತರಾಗರೂ ಆದ ದಿಗಂಬರ ಸಾಧುಗಳು ಪಂಚ ಮಹಾವ್ರತಗಳನ್ನು ಯಥಾವಿಧಿ ಪಾಲಿಸುತ್ತಿರುತ್ತಾರೆ.

1. ಇಂತಹ ಮಹಾಸಾಧುಗಳು ರಾಗ ದ್ವೇಷ ಕಾಮ ಕ್ರೋಧಾದಿಗಳಿಂದ ತಮ್ಮ (ಆತ್ಮ ಪರಿಣಾಮಗಳ) ಹಿಂಸೆಯನ್ನು ಮಾಡಿಕೊಳ್ಳುವುದಿಲ್ಲ. ಹಾಗೂ ಇತರ ಜೀವಿಗಳ ಹಿಂಸೆಯನ್ನು ಮಾಡುವುದಿಲ್ಲ. ಅವರು ಕೋಮಲವಾದ ಮಯೂರ ಪಿಚ್ಛವನ್ನಿಟ್ಟುಕೊಂಡು ಆದರಿಂದ ತಾವು ನಿಲ್ಲುವ, ಕುಳಿತುಕೊಳ್ಳುವ ಸ್ಥಾನವನ್ನು ಗುಡಿಸಿ ಅತಿ ಸಣ್ಣ ಪ್ರಾಣಿಗಾದರೂ ಬಾಧೆಯಾಗದಂತೆ ಕಠಿನ ಪ್ರಯತ್ನವನ್ನು ಮಾಡುತ್ತಾರೆ. ತಮ್ಮ ಶರೀರದ ಮೇಲೆ ಕುಳಿತಿರುವ ಯಾವ ಪ್ರಾಣಿಗಾದರೂ ಬಾಧೆಯಾಗಬಾರದೆಂದು ಆಗಾಗ ತಮ್ಮ ಶರೀರವನ್ನು ಮಯೂರಪಿಚ್ಛ (ನವಿಲಗರಿ)ದಿಂದ ಒರಸುತ್ತಿರುತ್ತಾರೆ. ಇಂತಹ ಕೋಮಲವಾದ ಮಯೂರ ಪಿಚ್ಛವನ್ನು ಯಾವಾಗಲೂ ಹತ್ತಿರವಿಟ್ಟುಕೊಳ್ಳುವುದರ ಪ್ರಯೋಜನವು ಕೇವಲ ಪ್ರಾಣಿರಕ್ಷಣೆಯೇ ಆಗಿದೆ. ಅವರು "ಬದುಕಿರಿ ಮತ್ತು ಬದುಕಗೊಡಿರಿ" ಎಂಬ ಭಾವನೆಯ ಹಾಗೂ ಪ್ರವೃತ್ತಿ (ಆಚರಣೆ)ಯ ಪೂರ್ಣ ಆದರ್ಶರಾಗಿರುತ್ತಾರೆ.

2. ತಮಗೆ ಪ್ರಾಣಸಂಕಟವೊದಗಿದರೂ ಅವರೆಂದಿಗೂ ಅಸತ್ಯ (ಸುಳ್ಳು) ವಚನವನ್ನಾಡುವುದಿಲ್ಲ. ಎಂದೂ ಕಠೋರ ಹಾಗೂ ಕಠೋರ ಪರಿಣಾಮವನ್ನೂ ತಾಳುವುದಿಲ್ಲ; ವಚನಗಳನ್ನಾಡುವುದಿಲ್ಲ.

3. ತಮಗೆ ಇತರರಿಂದ ಕೊಡಲ್ಪಡದ ಯಾವ ವಸ್ತುವನ್ನೂ ಅವರು ತಗೆದುಕೊಳ್ಳುವುದಿಲ್ಲ. ತಮ್ಮ ಪದವಿಗೆ ಉಚಿತವಲ್ಲದ ಯಾವುದೊಂದು ವಸ್ತುವನ್ನು ಇತರರು ಕೊಟ್ಟರೂ ಅದನ್ನು ಸ್ವೀಕರಿಸುವುದಿಲ್ಲ. ಗೃಹಸ್ಥರಿಂದ ಭಕ್ತಿಪೂರ್ವಕವಾಗಿ ಕೊಡಲ್ಪಟ್ಟ ಜ್ಞಾನೋಪಕರಣ (ಪುಸ್ತ

ಕಾದಿ), ಶುದ್ಧ ಆಹಾರ, ಪಿಚ್ಛ, ಕಮಂಡಲು ಮೊದಲಾದುವುಗಳನ್ನು ಮಾತ್ರ ಅವರು ಸ್ವೀಕರಿಸುತ್ತಾರೆ.

4. ಬ್ರಹ್ಮಚರ್ಯ ಮಹಾವ್ರತವನ್ನು ಪೂರ್ಣರೂಪದಿಂದ ಪಾಲಿಸುತ್ತಾರೆ.

5. ಅಂತರಂಗ ಬಹಿರಂಗರೂಪವಾದ ಯಾವುದೊಂದು ಪರಿಗ್ರಹವನ್ನೂ ಅವರು ಇಟ್ಟುಕೊಳ್ಳುವುದಿಲ್ಲ. ಪಿಚ್ಛ-ಕಮಂಡಲುಗಳು ಅವರಿಗೆ ಕೇವಲ ಸಂಯಮೋಪಕರಣಗಳಾಗಿರುತ್ತವಲ್ಲದೆ ಅವು ಪರಿಗ್ರಹಗಳಾಗಿರುವುದಿಲ್ಲ. ಅವುಗಳಲ್ಲಿಯೂ ಅವರಿಗೆ ಮಮತ್ವಬುದ್ಧಿಯಿರುವುದಿಲ್ಲ. ಅವುಗಳಿಲ್ಲವಾದರೆ ಪಾಪಭಯದಿಂದ (ಪ್ರಾಣಿಹಿಂಸೆಯಾಗುವುದೆಂದು) ಅವರು ತಮ್ಮ ಶಾರೀರಿಕ ಪ್ರವೃತ್ತಿಯನ್ನೇ ನಿಲ್ಲಿಸಿಬಿಡುತ್ತಾರೆ.

ಆ ಸಾಧುಗಳು ಪಂಚಸಮಿತಿಗಳನ್ನು ಯಥಾವಿಧಿ ಪಾಲಿಸುತ್ತಾರೆ:-

1. ಸೂರ್ಯನ ಪ್ರಕಾಶದಲ್ಲಿ ಭೂಮಿಯನ್ನು ಚೆನ್ನಾಗಿ ನೋಡಿ ಅವರು ನಡೆಯುತ್ತಾರೆ. ತಮ್ಮ ಗಮನಾಗಮನಗಳಲ್ಲಿ ಯಾವುದಾದರೊಂದು ಜೀವವು ಸಾಯುವುದು ಹಾಗಿರಲಿ; ಯಾವುದೊಂದು ಜೀವಕ್ಕೂ ಬಾಧೆಯುಂಟಾಗದಂತೆ ಸಾಧುಗಳು ಪ್ರಯತ್ನಶೀಲರಾಗಿರುತ್ತಾರೆ. ಅವರು ಜೀವರಕ್ಷಣೆಯನ್ನು ಧ್ಯೇಯವಾಗಿಟ್ಟುಕೊಂಡು ಅನಾವಶ್ಯಕವಾಗಿ ಎಂದೂ ಗಮನಾಗಮನಗಳನ್ನು ಮಾಡುವುದಿಲ್ಲ. ಆವಶ್ಯಕತೆಯುಂಟಾದಾಗಲೂ ಬಹಳ ಸಂಯಮದಿಂದ ಜಾಗರೂಕತೆಯಿಂದ ಯಾತಾಯಾತಗಳನ್ನು ಮಾಡುತ್ತಾರೆ.

2. ಯಾವಾಗಲೂ ಹಿತ, ಮಿತ, ಹಾಗೂ ಮಧುರವಾದ ವಚನವನ್ನಾಡುತ್ತಾರೆ.

3. ಶ್ರದ್ಧೆ ಮತ್ತು ವಿನಯಯುಕ್ತವಾದ ಶ್ರಾವಕರ ಮನೆಗೆ ಹೋಗಿ ಅವರು ವಿಧಿಪೂರ್ವಕವಾಗಿ ಕೊಟ್ಟ ನಿರ್ದುಷ್ಟ ಆಹಾರವನ್ನು ದಿನದಲ್ಲಿ ಒಂದು ಬಾರಿ ಮಾತ್ರ ಸ್ವೀಕರಿಸುತ್ತಾರೆ. ಭೋಜನದಲ್ಲಿ ೪೬ ದೋಷಗಳಲ್ಲಿ ಯಾವುದೊಂದು ದೋಷವುಂಟಾದರೂ ತತ್ಕ್ಷಣ ಭೋಜನವನ್ನು ತ್ಯಾಗ ಮಾಡುತ್ತಾರೆ. ಭೋಜನದೊಡನೆ ನೀರನ್ನೂ ಒಂದೇ ಬಾರಿ ಕುಡಿಯುತ್ತಾರೆ. ರಸವಸ್ತುಗಳಿಂದ ರಹಿತವಾದ-ನೀರಸ ಭೋಜನವನ್ನೂ ಪ್ರಾಸುಕ

ಜಲವನ್ನೂ ಸೇವಿಸುತ್ತಾರೆ. ಭೋಜನವನ್ನು ಕೊಡುವವನ ದೊಡ್ಡಸ್ಥಿಕೆ ಬಡತನಗಳ ಮೇಲೆ ಲಕ್ಷ್ಯವಿಡುವುದಿಲ್ಲ. ಕೇವಲ ಆತನ ಹಾಗೂ ಆಹಾರದ ಶುದ್ಧಿಯ ಮೇಲೆ ಲಕ್ಷ್ಯವಿಡುತ್ತಾರೆ.

4. ಯಾವುದಾದರೊಂದು ವಸ್ತುವನ್ನು ಎತ್ತಿಕೊಳ್ಳುವಾಗ, ಇಡುವಾಗ ಹಾಗೂ ಮುಟ್ಟುವಾಗ ಆ ಕಾರ್ಯದಲ್ಲಿ ಯಾವ ಪ್ರಾಣಿಗೂ ಬಾಧೆಯುಂಟಾಗದಂತೆ ಅತ್ಯಂತ ಜಾಗರೂಕರಾಗಿರುತ್ತಾರೆ.

5. ಯಾವ ಪ್ರಾಣಿಗೂ ಕೊಂಚವೂ ಬಾಧೆಯಾಗದಂತೆ ನಿರ್ಜಂತುಕವಾದ ಸ್ಥಾನದಲ್ಲಿ ಮಲಮೂತ್ರಗಳನ್ನು ವಿಸರ್ಜಿಸುತ್ತಾರೆ.

ಆ ಸಾಧುಗಳು ಜಿತೇಂದ್ರಿಯರಾಗಿರುತ್ತಾರೆ. ಇಂದ್ರಿಯ ವಿಷಯಗಳಲ್ಲಿ ಹಾಗೂ ಜ್ಞೇಯಪದಾರ್ಥಗಳಲ್ಲಿ ರಾಗದ್ವೇಷಗಳನ್ನು ಹೊಂದುವುದಿಲ್ಲ.

ವಿಶೇಷ ಆತ್ಮಚಿಂತನೆಗಾಗಿ ಪ್ರತಿದಿನ ತ್ರಿಕಾಲದಲ್ಲಿ ಸಾಮಾಯಿಕವನ್ನು ಮಾಡುತ್ತಾರೆ. ತೀರ್ಥಂಕರರನ್ನು ಸ್ತುತಿಸುತ್ತಾರೆ. ತ್ರಿವಿಧಿಶುದ್ಧಿಯಿಂದ ಅವರನ್ನು ವಂದಿಸುತ್ತಾರೆ. ಇಷ್ಟು ಸಾವಧಾನತೆಯಿಂದಿದ್ದರೂ ಪ್ರಮಾದದಿಂದ ಏನಾದರೊಂದು ದೋಷವುಂಟಾದುದಾದರೆ ಆ ದೋಷಗಳನ್ನು ಆಲೋಚನಾದಿಗಳಿಂದ ಶುದ್ಧಿಗೈದು ಭವಿಷ್ಯದಲ್ಲಿ ಅಂತಹ ದೋಷಗಳುಂಟಾಗದಂತೆ ಸಾವಧಾನತೆಯನ್ನು ವಹಿಸುತ್ತಾರೆ. ಹಾಗೂ ಆ ದೋಷಗಳಿಂದ ತಮ್ಮನ್ನು ರಕ್ಷಿಸುಕೊಳ್ಳುವುದಕ್ಕಾಗಿ ಮನವಚನಕಾಯಗಳ ವಿಶುದ್ಧಿಪೂರ್ವಕವಾಗಿ ಅಯೋಗ್ಯ ವ್ಯಾಪಾರಗಳನ್ನು ತ್ಯಾಗಮಾಡುತ್ತಾರೆ. ತಪಶ್ಚರಣೆಯ ಅಭಿವೃದ್ಧಿಗಾಗಿ ಹಾಗೂ ದೋಷಶಾಂತ್ಯರ್ಥವಾಗಿ ಆ ಮಹಾಸಾಧುಗಳು ಶರೀರದಲ್ಲಿ ಮಮತ್ವಭಾವವನ್ನು ಬಿಟ್ಟು, ಪ್ರತಿದಿನ ಅನೇಕ ಬಾರಿ ಕಾಯೋತ್ಸರ್ಗವನ್ನು ಮಾಡುತ್ತಿರುತ್ತಾರೆ. ಇಲ್ಲಿ ಕಾಯೋತ್ಸರ್ಗವೆಂದರೆ ಶರೀರವನ್ನು ಬಿಡುವುದೆಂದರ್ಥವಲ್ಲ; ಶರೀರದ ಮಮತೆಯನ್ನು ಬಿಡುವುದೆಂದರ್ಥವು. ಅದಕ್ಕಾಗಿ ಆ ಮಹಾಸಾಧುಗಳು ನೆಟ್ಟಗೆ ನಿಂತುಕೊಂಡು ಎರಡು ಕೈಗಳನ್ನೂ ಕೆಳಗೆ ಇಳಿಯ ಬಿಟ್ಟು ಪಾದಗಳನ್ನು ಒಂದೇ ಸಾಲಾಗಿ ಸರಿಯಾಗಿಟ್ಟುಕೊಂಡು ಆತ್ಮಧ್ಯಾನದಲ್ಲಿ ಪೂರ್ಣ ನಿಶ್ಚಲತೆಯಿಂದ ಲೀನರಾಗುತ್ತಾರೆ. ಇದರಿಂದ ಅವರ ತಪಸ್ಸಿನ

ವೃದ್ಧಿಯೂ ಪೂರ್ವಸಂಚಿತ ಕರ್ಮಗಳ ನಿರ್ಜರೆಯೂ ಉಂಟಾಗಿ ಅವರು ಆತ್ಮಾನುಭವದ ಪರಾಕಾಷ್ಠತೆಯನ್ನು ಪಡೆಯುತ್ತಾರೆ.

ಆ ಮಹಾಸಾಧುಗಳು ಆಜನ್ಮ ಸ್ನಾನವನ್ನು ಮಾಡುವುದಿಲ್ಲ. ಆಹಾರಕ್ಕಾಗಿ ಶ್ರಾವಕರ ಮನೆಗೆ ಹೋದಾಗ ಭೋಜನಾನಂತರದಲ್ಲಿ ಶ್ರಾವಕರು ಯಥಾವಶ್ಯಕ ಅವರ ಶರೀರವನ್ನು ಒರಸುತ್ತಾರೆ. ಸಾಧುಗಳು ಗೃಹಸ್ಥರ ಮನೆಯಲ್ಲಿ ಭೋಜನಾನಂತರ ಮುಖಶುದ್ಧಿಯನ್ನು ಮಾಡಿಕೊಳ್ಳುತ್ತಾರೆ. ಆದರೂ ದಂತಧಾವನ (ಹಲ್ಲುಜ್ಜುವಿಕೆ)ವನ್ನು ಮಾಡುವುದಿಲ್ಲ. ದಂತಧಾವನವು ಹಲ್ಲುಗಳಲ್ಲಿ ಸಂಚಿತವಾಗಿರುವ ಮಲವನ್ನು ದೂರಗೊಳಿಸುವುದಕ್ಕಾಗಿ ಮಾಡಲ್ಪಡುತ್ತದೆ. ಗರಿಷ್ಠವಾದ ಆಹಾರವನ್ನು ತಿನ್ನುವುದರಿಂದ ಹಾಗೂ ಅನಿಯಮಿತವಾದ ಆಹಾರಸೇವನೆಯಿಂದ ಕರುಳಿನಲ್ಲಿ ಸಂಚಯವಾದ (ಮಲ)ದಿಂದ ದಂತಮಲವುಂಟಾಗುತ್ತದೆ. ಈ ಮಹಾಸಾಧುಗಳಂತೂ ನಿಯಮಿತವಾಗಿ ನೀರಸ ಹಾಗೂ ಸರ್ವಥಾ ಸಾತ್ವಿಕವಾದ ಭೋಜನವನ್ನು ಮಾಡುತ್ತಾರೆ. ಬೇಕಾದುದಕ್ಕಿಂತಲೂ ಕಡಿಮೆಯಾದ ಆಹಾರವನ್ನು ಸ್ವೀಕರಿಸುತ್ತಾರೆ. ಆದುದರಿಂದ ಅವರ ಹಲ್ಲುಗಳಲ್ಲಿ ಮಲವುಂಟಾಗುವುದಿಲ್ಲ. ಅತಏವ ಅವರು ದಂತ ಧಾವನವನ್ನು ಮಾಡುವುದಿಲ್ಲ.

ಪವಿತ್ರತೆ ಅಥವಾ ಶರೀರದ ಆಮೋದಪ್ರಮೋದಕ್ಕಾಗಿ ಸ್ನಾನ ಮಾಡಲಾಗುತ್ತದೆ. ಈ ಸಾಧುಗಳು ಕೇವಲ ಪವಿತ್ರರೇ ಅಲ್ಲ. ಪಾವನರೂ ಆಗಿರುತ್ತಾರೆ. ವಿಷಯಾಶಾ ಪರಿಗ್ರಹಾದಿಗಳಿಂದ ರಹಿತರಾದ ಸಾಧುಗಳು ಶಾರೀರಿಕ ಆಮೋದ-ಪ್ರಮೋದಗಳಿಂದ ಸರ್ವದಾ ದೂರರಾಗಿರುತ್ತಾರೆ. ಆದುದರಿಂದ ಅವರಿಗೆ ಸ್ನಾನದ ಆವಶ್ಯಕತೆಯಿರುವುದಿಲ್ಲ.

ಆ ಮಹಾಸಾಧುಗಳು ಹಾಸಿಗೆ ಮೊದಲಾದುವುಗಳ ಮೇಲೆ ಮಲಗುವುದಿಲ್ಲ. ನೆಲ, ಹಲಗೆ ಮೊದಲಾದುವುಗಳ ಮೇಲೆ ಕುಳಿತುಕೊಳ್ಳುತ್ತಾರೆ ಹಾಗೂ ಮಲಗುತ್ತಾರೆ.

ಚಳಿ, ಸೆಕೆ, ಮಳೆ ಮೊದಲಾದ ಸರ್ವಋತುಗಳಲ್ಲಿಯೂ ಪ್ರತಿಸಮಯ ಸರ್ವಥಾ ನಗ್ನರಾಗಿಯೇ ಇರುತ್ತಾರೆ. ಶರೀರದ ಮೇಲೆ ಸ್ವಲ್ಪವೂ ಪರಿಗ್ರಹದ ಸಂಬಂಧವನ್ನಿಟ್ಟುಕೊಳ್ಳುವುದಿಲ್ಲ. ನಿಂತುಕೊಂಡು ಪಾಣಿಪಾತ್ರದಿಂದಲೇ ಭೋಜನವನ್ನು ಮಾಡುತಾರೆ. ನಿಂತುಕೊಂಡು ಭೋಜನ ಮಾಡುವುದರ ಉದ್ದೇಶವೇನೆಂದರೆ, ಎಂದಿನ ತನಕ ಕಾಲು

ಗಳಲ್ಲಿ ನಿಂತುಕೊಳ್ಳುವಷ್ಟು ಶಕ್ತಿಯಿರುವುದೋ ಅಂದಿನ ತನಕ ಮಾತ್ರವೇ ಅವರು ಆಹಾರವನ್ನು ಸ್ವೀಕರಿಸುತ್ತಾರೆ. ನಿಂತುಕೊಳ್ಳುವ ಶಕ್ತಿಯು ನಷ್ಟವಾದ ಬಳಿಕ ಅವರು ಸಂನ್ಯಾಸವನ್ನು ಧರಿಸುತ್ತಾರೆ. ಅಲೌಕಿಕ ಮಹಾತ್ಮರಾದ ಆ ಮಹಾಸಾಧುಗಳು ವರ್ಷದಲ್ಲಿ ಮೂರು ಬಾರಿ, ನಾಲ್ಕು ಬಾರಿ ಅಥವಾ ಆರು ಬಾರಿ ತಮ್ಮ ತಲೆಯ ಕೂದಲು, ಗಡ್ಡ ಮೀಸೆಗಳನ್ನು ತಮ್ಮ ಕೈಯಿಂದಲೇ ಕಿತ್ತುಕೊಳ್ಳುತ್ತಾರೆ. ಈ ಕೇಶ ಲುಂಚನ ಕ್ರಿಯೆಯು ಶರೀರ ನಿರ್ಮಮತ್ವದ ಪ್ರತ್ಯಕ್ಷ ಸಾಕ್ಷಿಯಾಗಿರುತ್ತದೆ. ಹಾಗೂ ಅಯಾಚಕವೃತ್ತಿ, ಪರಮೋತ್ಕೃಷ್ಟ ಆದರ್ಶವಾಗಿರುತ್ತದೆ.

ಹೀಗೆ ದಿಗಂಬರ ಜೈನ ಚರ್ಯೆಯು ಸ್ಥೂಲಚಿತ್ರಣವಿದು. ದಿಗಂಬರ ಜೈನ ಸಾಧುವು ಸಂಸಾರದಿಂದ ಸರ್ವಥಾ ನಿರಪೇಕ್ಷನಾಗಿರುತ್ತಾನೆ. ಆತನು ಸಂಸಾರದ ಸರ್ವ ಅಪೇಕ್ಷೆಗಳಿಂದ ರಹಿತನಾಗಿರುತ್ತಾನೆ. ಸಾಂಸಾರಿಕರಾದ ಮಾನವರಿಗೆ ಈ ಸಾಧು ಚರ್ಯೆಯು ಅತ್ಯಂತ ಕಠಿನವಾಗಿ ಕಾಣುವುದು. ಪರಂತು ಆತ್ಮಚಿಂತನೆ ಹಾಗೂ ಆತ್ಮಸಂಶೋಧನದಲ್ಲಿ ನಿರಂತರ ಸಂಲಗ್ನರಾದ ಸಾಧುಗಳಿಗೆ ಈ ಚರ್ಯೆಯು ಕಠಿನವಾಗಿರುವುದಿಲ್ಲ. ಬುದ್ಧಿವಂತನಾದ ರೋಗಿಗೆ ತನ್ನ ರೋಗದ ನಿವೃತ್ತಿಗಾಗಿ ಸೇವಿಸಬೇಕಾದ ಔಷಧವು ಎಷ್ಟು ಕಠಿನವಾಗಿದ್ದರೂ ಆತನಿಗದು ಕಠಿನವೆಂದು ಕಾಣುವುದಿಲ್ಲ. ಅಂದಂತೆಯೇ ಸಂಸಾರವಿಚ್ಛಿತ್ತಿಯೇ ಧ್ಯೇಯವಾಗುಳ್ಳ ಸಾಧುವಿಗೆ ಎಂತಹ ಕಠಿನವಾದ ಆಚರಣೆಯೂ ಕಠಿನವೆಂದು ಕಾಣುವುದಿಲ್ಲ. ಯಾವನಾದರೊಬ್ಬ ರೋಗಿಯು ಕಟುವಾದ ಔಷಧಕ್ಕೆ ಹಾಗೂ ತೀಕ್ಷ್ಣವಾದ ಶಲ್ಯಚಿಕಿತ್ಸಾದಿಗಳಿಗೆ ಭಯಪಟ್ಟು ಯೋಗ್ಯ ಚಿಕಿತ್ಸೆಯನ್ನು ಮಾಡಿಸಿಕೊಳ್ಳದಿದ್ದರೆ ಆತನು ಆರೋಗ್ಯವನ್ನು ಹೊಂದಲಾರನು. ಅದರಂತೆಯೇ ಅನಾದಿಕಾಲದಿಂದ ಕರ್ಮಬದ್ಧನಾದ ಈ ಜೀವನು ಪೂರ್ವೋಕ್ತ ಮುನಿಚರ್ಯೆಯನ್ನು ಕಠಿನವಾದುದೆಂದು ಉಪೇಕ್ಷಿಸಿದುದಾದರೆ ಆತನೆಂದೂ ಸಂಸಾರದಿಂದ ಮುಕ್ತನಾಗಲಾರನು.

ಈ ದಿಗಂಬರ ಜೈನ ಸಾಧುಚರ್ಯೆಯು ಇಷ್ಟೊಂದು ಕಠಿನವಾಗಿದ್ದರೂ ಪೂರ್ವದಲ್ಲಿ ಅಸಂಖ್ಯ ಮಹಾಮುನಿಗಳು ಆಗಿಹೋದರು. ಇಂದೂ ಅಂತಹ ಮುನಿಗಳಿರುವರು, ಹಾಗೂ ಭವಿಷ್ಯದಲ್ಲಿಯೂ ಆಗುವರು. ಅವರೆಲ್ಲರಿಗೂ ತ್ರಿವಿಧಶುದ್ಧಿಯಿಂದ ಬಾರಿಬಾರಿಗೆ ನಮಸ್ಕಾರವಿರಲಿ.